ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 6 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 20 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಉಪ ಸಮರ ಫಲಿತಾಂಶ ಮುಂದಿನ ಚುನಾವಣೆಗೆ ದಿಕ್ಸೂಚಿ!

2028ಕ್ಕೂ ನಾವೇ ಬರ್ತೇವೆ!!

■ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ■ ಬಿಜೆಪಿಯವರು ಹೇಳಿದ್ದನ್ನೇ ನಾನು ಹೇಳ್ತಾ ಇದ್ದೇನೆ ■ ಶೃಂಗೇರಿಯಲ್ಲಿ ಬಿಜೆಪಿಯವರು ವೋಟ್ ಡಕಾಯಿತಿ ಮಾಡಿದ್ದಾರೆ

ಬೆಂಗಳೂರು, ಮೇ 5(ಕೆಎಂಶಿ)– ರಾಜ್ಯದಲ್ಲಿ ನಡೆದ ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶವು 2028ರ ಚುನಾವಣೆಯ ದಿಕ್ಸೂಚಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ.

ಚುನಾವಣಾ ಪ್ರಚಾರ ಸಂದರ್ಭದಲ್ಲಿ ಬಿಜೆಪಿಯವರು 2028ರ ವಿಧಾನಸಭಾ ಚುನಾವಣೆಗೆ ಉಪ ಚುನಾವಣೆ ಫಲಿತಾಂಶ ದಿಕ್ಸೂಚಿಯಾಗಲಿದೆ ಎಂದು ಹೇಳಿದ್ದರು.

ಅವರ ಪ್ರಕಾರವೇ ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದಾಯಿತು. ಈ ಹಿಂದೆ ನಡೆದ ಮೂರು ಉಪ ಚುನಾವಣೆಯಲ್ಲೂ ಕಾಂಗ್ರೆಸ್ ಜಯಗಳಿಸಿದೆ.

ಅವುಗಳಲ್ಲಿ ಚನ್ನಪಟ್ಟಣ ಮತ್ತು ಶಿಗ್ಗಾಂವಿಯ ಪ್ರಬಲ ಕ್ಷೇತ್ರಗಳು ಸಹ ಕಾಂಗ್ರೆಸ್ ತೆಕ್ಕೆಗೆ ಬಂದಿದ್ದವು ಎಂದರೆ, ನಮ್ಮ ಜನಪರ ಕಾರ್ಯಕ್ರಮಗಳನ್ನು ಮತದಾರರು ಬೆಂಬಲಿಸಿದ್ದಾರೆ ಅಲ್ಲವೆ ಎಂದು ಪ್ರಶ್ನಿಸಿದರು. ನಮ್ಮ ಕಾರ್ಯಕ್ರಮಗಳನ್ನು ಜನರು ಮೆಚ್ಚಿಕೊಂಡಿದ್ದಾರೆ. ಅವುಗಳು ಮತದಾರರ ಮನೆಬಾಗಿಲಿಗೆ ತಲುಪಿವೆ. ಜನರು ನಮ್ಮ ಮೇಲೆ ವಿಶ್ವಾಸ ಮತ್ತು ಅಭಿಮಾನ ಇಟ್ಟುಕೊಂಡಿದ್ದಾರೆ.



ಮಂಗಳವಾರ ಗೃಹ ಕಚೇರಿ ಕೃಷ್ಣಾದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಕಾಂಗ್ರೆಸ್ ಪಕ್ಷ, ಕೊಟ್ಟ ಮಾತಿನಂತೆ ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಅವು ನಮ್ಮ ಕೈ ಹಿಡಿದಿವೆ. ಉಪ ಚುನಾವಣಾ ಫಲಿತಾಂಶವೇ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಮರುಕಳಿಸಿ ನಾವೇ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ ಎಂದರು.

ಬಿಜೆಪಿಯವರು ಡಕಾಯಿತಿ ಮಾಡಿದ್ದಾರೆ: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಯವರು ಕ್ರಿಮಿನಲ್ ಪಿತೂರಿ ಮಾಡಿ ಓಟ್ ಚೋರಿ ಅಲ್ಲ ಡಕಾಯಿತಿ ಮಾಡಿದ್ದಾರೆ ಎಂದು ಇದೇ ಸಂದರ್ಭದಲ್ಲಿ ಗುರುತರ ಆರೋಪ ಮಾಡಿದರು.

ಶೃಂಗೇರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಾಜೇಗೌಡ ಅವರು ಕಳೆದ ಚುನಾವಣೆಯಲ್ಲಿ 201 ಮತಗಳ ಅಂತರದಲ್ಲಿ ಗೆದ್ದಿದ್ದರು. ಅವರಿಗೆ 59,171 ಮತಗಳು ಬಂದಿದ್ದವು.

ಅವರ ಎದುರಾಳಿ ಬಿಜೆಪಿಯ ಜೀವರಾಜ್ ಅವರಿಗೆ 58970 ಮತಗಳು ಬಂದಿದ್ದವು. ಇವಿಎಂನಲ್ಲಿ ರಾಜೇಗೌಡರಿಗೆ 58602 ಮತಗಳು, ಅಂಚೆಯಲ್ಲಿ 569 ಮತಗಳು ಬಂದಿದ್ದವು. ಜೀವರಾಜ್ ಅವರಿಗೆ ಇವಿಎಂನಲ್ಲಿ 58278 ಮತಗಳು, ಅಂಚೆಯಲ್ಲಿ 692 ಮತಗಳು ಬಂದಿದ್ದವು. ಇವೆಲ್ಲವೂ ಅರ್ಹ ಮತಗಳೆಂದು ಚುನಾವಣಾಧಿಕಾರಿಗಳು, ಏಜೆಂಟ್‌ಗಳು ಸಹಿ ಮಾಡಿ ಫಲಿತಾಂಶ ಘೋಷಿಸಿದ್ದರು.

ಘೋಷಣೆ ಬಳಿಕ ಜೀವರಾಜ್ ಅವರು ಅಕ್ರಮ ಆಗಿದೆ ಎಂದು ರಾಜ್ಯ ಹೈಕೋರ್ಟ್‌ನಲ್ಲಿ ಮರು ಎಣಿಕೆಗೆ ದಾವೆ ಹೂಡಿದ್ದರು. ಅವರ ಅರ್ಜಿಯನ್ನು ಪುರಸ್ಕರಿಸಿ ನ್ಯಾಯಾಲಯ ಮರು ಎಣಿಕೆಗೆ ನಿರ್ದೇಶನ ನೀಡಿತ್ತು.

ವೋಟ್ ಡಕಾಯಿತಿ: ಮರು ಎಣಿಕೆಯಲ್ಲಿ ರಾಜೇಗೌಡರಿಗೆ 314 ಮತಗಳು ಮಾತ್ರ ಅರ್ಹ, 255 ಮತಗಳು ಅನರ್ಹ ಎಂದು ಆಗುತ್ತದೆ. ಜೀವರಾಜ್ ಅವರಿಗೆ ಮರು ಎಣಿಕೆಯಲ್ಲಿ 690 ಮತಗಳು ಲಭಿಸಿವೆ. ಬಿಜೆಪಿಯವರು ಕ್ರಿಮಿನಲ್ ಸಂಚು ಮಾಡಿ ವೋಟ್ ಚೋರಿ ಮಾಡಿರುವುದು ಬಹಳ ಸ್ಪಷ್ಟವಾಗುತ್ತದೆ. ರಾಜೇಗೌಡರಿಗೆ ಬಿದ್ದಿದ್ದ 250 ಮತಗಳನ್ನು ವ್ಯವಸ್ಥಿತವಾಗಿ ತಿದ್ದಲಾಗಿದೆ. ಇದು ವೋಟ್ ಡಕಾಯಿತಿಯಾಗಿದೆ ಎಂದು ಅವರು ಆರೋಪಿಸಿದರು.

ಎಣಿಕೆ ಮಾಡಿದ ಬಳಿಕ ಎಲ್ಲಾ ದಾಖಲಾತಿಗಳನ್ನು ಟ್ರಂಕ್‌ನಲ್ಲಿಡಲಾಗುತ್ತದೆ. ಮತ ಎಣಿಕೆಯಾಗುವಾಗ ಬಿಜೆಪಿ ಸರ್ಕಾರ ಇತ್ತು. ಕೇಂದ್ರದಲ್ಲೂ ಅವರ ಸರ್ಕಾರ ಇತ್ತು. ■6ನೇ ಪುಟಕ್ಕೆ

ಎನ್.ಆರ್.ಕ್ಷೇತ್ರದಲ್ಲಿ ಮತ್ತೊಂದು ಕೊಲೆ!

ಉದಯಗಿರಿಯಲ್ಲಿ ವ್ಯಕ್ತಿಯ ತಲೆ ಮೇಲೆ ಕಲ್ಲು ಎತ್ತಿಹಾಕಿ ಕೊಂದ ದುಷ್ಕರ್ಮಿಗಳು

ಮೈಸೂರು, ಮೇ 5(ಎಂಟಿವೈ)– ಮೈಸೂರಿನ ಉದಯಗಿರಿಯ ಕೆ.ಎನ್.ಪುರದಲ್ಲಿ ಮುಂಜಾನೆ ದುಷ್ಕರ್ಮಿಗಳು ವ್ಯಕ್ತಿಯೊಬ್ಬನ ತಲೆ ಮೇಲೆ ಕಲ್ಲು ಎತ್ತಿಹಾಕಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಗಾಂಜಾ ಹಾಗೂ ಸೆಲ್ಯೂಷನ್ ಮತ್ತಿನಲ್ಲಿ ಕಿಡಿಗೇಡಿಗಳು ಈ ಕೊಲೆ ಮಾಡಿದ್ದಾರೆ ಎಂದು ಮೃತನ ಪೋಷಕರು ದೂರಿದ್ದಾರೆ.

ಮೈಸೂರಿನ ಗೌಸಿಯಾನಗರದ ನಿವಾಸಿ, ಕೂಲಿ ಕಾರ್ಮಿಕ ಮಹಮ್ಮದ್ ಉಮರ್ (37) ಹತ್ಯೆಯಾದವರಾಗಿದ್ದು, ಮುಂಜಾನೆ ಕೆ.ಎನ್.ಪುರದ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ದುಷ್ಕರ್ಮಿಗಳು ಅಡ್ಡಗಟ್ಟಿ ರಸ್ತೆ ಬದಿಯಲ್ಲಿಯೇ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆಗೈದು ಪರಾರಿಯಾಗಿದ್ದಾರೆ. ಉದಯಗಿರಿ ಪೊಲೀಸ್ ಠಾಣೆಯಿಂದ ಅನತಿ ದೂರದಲ್ಲಿ ಈ ಹತ್ಯೆ ನಡೆದಿದ್ದು, ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ. ಅಲ್ಲದೆ, ಬೆಳ್ಳಂಬೆಳಗ್ಗೆ ರಸ್ತೆಯಲ್ಲಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ವ್ಯಕ್ತಿಯ ದೇಹ ಕಂಡು ಸ್ಥಳೀಯರು ಭಯಭೀತರಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಉದಯಗಿರಿ ಪೊಲೀಸರು ಪರಿಶೀಲನೆ ನಡೆಸಿ, ಮೃತದೇಹವನ್ನು ■6ನೇ ಪುಟಕ್ಕೆ



ಕೊಲೆಯಾದ ಮಹಮ್ಮದ್ ಉಮರ್.

ಡ್ರಗ್ಸ್ ನಶೆಗೆ ನಮ್ಮ ಹುಡುಗ ಬಲಿಯಾಗಿದ್ದಾನೆ...

● ಹತ್ಯೆಗೀಡಾದ ವ್ಯಕ್ತಿಯ ಚಿಕ್ಕಪ್ಪನ ಅಳಲು! ● ಎನ್.ಆರ್.ಕ್ಷೇತ್ರದಲ್ಲಿ 4 ತಿಂಗಳಲ್ಲಿ 6 ಕೊಲೆ! ● ಪೊಲೀಸ್ ಮಾಹಿತಿದಾರರೇ ಡ್ರಗ್ಸ್ ದಲ್ಲಾಳಿಗಳು!

ಮೈಸೂರು, ಮೇ5(ಎಂಟಿವೈ)– ಮೈಸೂರಿನ ಎನ್.ಆರ್. ವಿಧಾನಸಭಾ ಕೇತ್ರ ವ್ಯಾಪ್ತಿಯಲ್ಲಿ ಗಾಂಜಾ ಸೇರಿದಂತೆ ನಾನಾ ರೀತಿಯ ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿದ್ದು, ಕೇವಲ ನಾಲ್ಕು ತಿಂಗಳಲ್ಲಿ ಆರು ಕೊಲೆ, ಎರಡು ಮಾರಣಾಂತಿಕ ಹಲ್ಲೆ ಪ್ರಕರಣ ನಡೆದಿದೆ ಎಂದು ಕೊಲೆಯಾದ ವ್ಯಕ್ತಿಯ ಚಿಕ್ಕಪ್ಪ ಮೊಹಮದ್ ಖಾಲಿದ್ ದೂರಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂದು ಬೆಳಗ್ಗೆ ಡ್ರಗ್ಸ್ ನಶೆಯಲ್ಲಿ ನಮ್ಮ ಹುಡುಗ ಮಹಮ್ಮದ್ ಉಮರ್ ಕೊಲೆ ಮಾಡಿದ್ದಾರೆ. ನಮ್ಮ ಏರಿಯಾ ತುಂಬಾ ಗಾಂಜಾ, ಡ್ರಗ್ಸ್ ಪೌಡರ್ ಸೇರಿ ನಾನಾ ರೀತಿಯ ಮಾದಕ ವಸ್ತುಗಳು ಎಗ್ಗಿಲ್ಲದೆ ಮಾರಾಟ ನಡೆಯುತ್ತಿದೆ. ಮನೆ, ಬೀದಿ, ಸ್ಮಶಾನದಲ್ಲೂ ಡ್ರಗ್ಸ್ ಮಾರಾಟ ಆಗುತ್ತಿದೆ. ಇದು ಶಾಸಕರು, ಪೊಲೀಸರು ಸೇರಿ ಎಲ್ಲರಿಗೂ ಗೊತ್ತು. ಆದರೂ ಎಲ್ಲರೂ ಕಣ್ಮುಚ್ಚಿ ಕುಳಿತಿದ್ದಾರೆ. ಪೊಲೀಸ್ ಮಾಹಿತಿದಾರರೇ ದಲ್ಲಾಳಿಗಳಾಗಿದ್ದಾರೆ. ಅವರೇ ಡ್ರಗ್ಸ್ ಕೊಡಿಸುತ್ತಾರೆ. ಬಳಿಕ ಅವರೇ ಹಿಡಿಯುತ್ತಾರೆ. ನಂತರ ಅವರೇ ದುಡ್ಡು ಕೊಟ್ಟವರನ್ನು ಬಿಡಿಸುತ್ತಾರೆ. ಇದರಿಂದಲೇ ಕೊಲೆ ಸೇರಿದಂತೆ ನಾನಾ ಅಪರಾಧ ಕೃತ್ಯಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ಉದಯಗಿರಿ ಠಾಣೆ ವ್ಯಾಪ್ತಿಯಲ್ಲಿ ಕಳೆದ ನಾಲ್ಕು ತಿಂಗಳಲ್ಲಿ ಆರು ಕೊಲೆ, ಎರಡು ಆಫ್ ಮರ್ಡರ್ ಆಗಿದೆ. ನಶೆಯಲ್ಲಿ ತೇಲುವ 12–15 ವರ್ಷದ ಹುಡುಗರ ಕೈಯ್ಯಲ್ಲಿ ಚಾಕು ಇರುತ್ತವೆ. ಚಾಕು ಹಿಡಿದೇ ರಾಜಾರೋಷವಾಗಿ ಓಡಾಡುತ್ತಾರೆ. ಪ್ರಶ್ನೆ ಮಾಡಿದರೆ ಹೊಟ್ಟೆಗೆ ಚುಚ್ಚುತ್ತಾರೆ. ಪೊಲೀಸರ ಭಯವೇ ಇಲ್ಲದಂತಾಗಿದೆ. ಕೂಡಲೇ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಗಾಂಜಾ ಸೇರಿದಂತೆ ನಶೆ ಬರುವ ಯಾವುದೇ ಮಾದಕ ವಸ್ತುಗಳ ಮಾರಾಟ, ಸಾಗಾಟಕ್ಕೆ ■6ನೇ ಪುಟಕ್ಕೆ

ಮೈಸೂರು, ಹಾಸನ, ಮಂಡ್ಯ, ಕೊಡಗು, ಚಾ.ನಗರಗಳಲ್ಲಿ ಮೂರು ದಿನ ಗುಡುಗು ಸಹಿತ ಭಾರೀ ಮಳೆ

ಬೆಂಗಳೂರು, ಮೇ 5– ರಾಜ್ಯದಲ್ಲಿ ಮುಂದಿನ ಮೂರು ದಿನ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ.



ಹವಾಮಾನ ಇಲಾಖೆ ಮುನ್ಸೂಚನೆ

ಮುನ್ನೆಚ್ಚರಿಕೆ ಕ್ರಮವಾಗಿ ಈ ಐದು ಸೇರಿದಂತೆ ರಾಜ್ಯದ ಒಟ್ಟು 13 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.

ಮೈಸೂರು, ಮಂಡ್ಯ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ನೀಡಿದೆ. ಈ ವೇಳೆ ಗಂಟೆಗೆ ಸುಮಾರು 30 ರಿಂದ 40 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ಜನ ಎಚ್ಚರಿಕೆಯಿಂದ ಇರುವಂತೆ ಸೂಚಿಸಲಾಗಿದೆ.

ನಾಳೆ ದಕ್ಷಿಣ ಒಳನಾಡಿನ ಜೊತೆಗೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಗೂ ಅಲರ್ಟ್ ನೀಡಲಾಗಿದೆ. ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡಕ್ಕೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಇನ್ನೂ ಮೇ 7ರಂದು ಬೆಳಗಾವಿ, ಧಾರವಾಡ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಹೊರತು ಪಡಿಸಿ, ■6ನೇ ಪುಟಕ್ಕೆ

ಪಂಚ ರಾಜ್ಯಗಳಲ್ಲಿ ಸರ್ಕಾರ ರಚನೆ ಸರ್ಕಸ್!

● ಮೇ 9ಕ್ಕೆ ಪಶ್ಚಿಮ ಬಂಗಾಳ; ಮೇ 7ಕ್ಕೆ ತಮಿಳ್ನಾಡಲ್ಲಿ ವಿಜಯ್ ಸರ್ಕಾರ ರಚನೆ ಸಿದ್ಧತೆ
● ಕೇರಳ, ಅಸ್ಸಾಂ, ಪುದುಚೇರಿಯಲ್ಲೂ ನಾಲ್ಕೈದು ದಿನದಲ್ಲಿ ಸರ್ಕಾರ ಅಸ್ತಿತ್ವ ಸಾಧ್ಯತೆ

ನವದೆಹಲಿ: ಪಂಚ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟಗೊಂಡ ಬೆನ್ನಲ್ಲೇ ಸರ್ಕಾರ ರಚನೆ ಕಸರತ್ತು ನಡೆದಿದೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸಾಮ್ರಾಜ್ಯವನ್ನು ಧೂಳೀಪಟ ಮಾಡಿರುವ ಬಿಜೆಪಿ, ಮುಖ್ಯಮಂತ್ರಿ ಆಯ್ಕೆಗೆ ಮುಂದಾಗಿದ್ದರೆ, ತಮಿಳುನಾಡಿನಲ್ಲಿ ಚೊಚ್ಚಲ ಪ್ರಯತ್ನದಲ್ಲೇ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ನಟ ವಿಜಯ್ ನೇತೃತ್ವದ ಟಿವಿಕೆ, ಸರಳ ಬಹುಮತಕ್ಕೆ ಅಗತ್ಯವಿರುವ ಬೆಂಬಲ ಪಡೆದು ಸರ್ಕಾರ ರಚಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿದೆ. ಇನ್ನು ಕೇರಳದಲ್ಲಿ ದಶಕದ ಬಳಿಕ ಅದ್ವಿತೀಯ ಗೆಲುವು ದಾಖಲಿಸಿರುವ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ, ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆಯಲ್ಲಿ ನಿರತವಾಗಿದೆ. ಅಸ್ಸಾಂ ಹಾಗೂ ಪುದುಚೇರಿಯಲ್ಲೂ ಸರ್ಕಾರ ರಚನೆ ಸಂಬಂಧ ಪ್ರಕ್ರಿಯೆ ಶುರುವಾಗಿದೆ.



ವಿಜಯ್



ಸುವೇಂದು ಅಧಿಕಾರಿ

ಮೇ 9 ಕ್ಕೆ ಬಿಜೆಪಿ ಚೊಚ್ಚಲ ಸಿಎಂ: ಪಶ್ಚಿಮ ಬಂಗಾಳದಲ್ಲಿ ಅಭೂತಪೂರ್ವ ಗೆಲುವು ಸಾಧಿಸಿರುವ ಬಿಜೆಪಿ, ಇದೀಗ ಮೊದಲ ಬಾರಿ ಸರ್ಕಾರ ರಚನೆಗೆ ಸಿದ್ಧತೆ ನಡೆಸಿದ್ದು, ರವೀಂದ್ರನಾಥ ಠ್ಯಾಗೋರ್ ಅವರ ಜನ್ಮದಿನವಾದ ಮೇ 9ರಂದು ಪಶ್ಚಿಮ ಬಂಗಾಳದಲ್ಲಿ ಮೊದಲ ಬಿಜೆಪಿ ಸರ್ಕಾರದ ನೂತನ ಸಿಎಂ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಸಮಿಕ್ ಭಟ್ಟಾಚಾರ್ಯ ತಿಳಿಸಿದ್ದಾರೆ. ಪ್ರಮಾಣ ವಚನ ■6ನೇ ಪುಟಕ್ಕೆ

ನಾವು ಸೋತಿಲ್ಲ, ರಾಜೀನಾಮೆ ನೀಡೋ ಮಾತೇ ಇಲ್ಲ

▶ ಮುಖ್ಯಮಂತ್ರಿ ಸ್ಥಾನ ತೊರೆಯಲು ಒಪ್ಪದ ಮಮತಾ ಬ್ಯಾನರ್ಜಿ
▶ ರಾಜೀನಾಮೆ ನೀಡದಿದ್ದರೆ ರಾಜ್ಯಪಾಲರು ವಜಾ ಮಾಡುತ್ತಾರೆ: ಬಿಸ್ವಾ

ಕೊಲ್ಕತ್ತಾ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮಾತೇ ಇಲ್ಲ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಹೀನಾಯವಾಗಿ ಸೋಲು ಅನುಭವಿಸಿ, ಬಿಜೆಪಿ ಭಾರೀ ಬಹುಮತದ ಗೆಲುವು ಸಾಧಿಸಿದ್ದರೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಮಮತಾ ಬ್ಯಾನರ್ಜಿ ನಿರಾಕರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ನಮಗೆ ಅನ್ಯಾಯವಾಗಿದೆ. ನಾನು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವುದಿಲ್ಲ. ನ್ಯಾಯಯುತವಾಗಿ ಚುನಾವಣೆ ನಡೆದಿದ್ದರೆ ನಾನು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೆ. ಆದರೆ ಈಗ ರಾಜಭವನಕ್ಕೆ ಹೋಗುವ ಮಾತೇ ಇಲ್ಲ. ಬಿಜೆಪಿ 100ಕ್ಕೂ ■6ನೇ ಪುಟಕ್ಕೆ



ಮಮತಾ



ಹಿಮಂತಾ ಬಿಸ್ವಾ

ಮೈಸೂರಿನ ಹುಣಸೂರು ರಸ್ತೆಯ 11 ಕಿ.ಮೀ. ಎಲಿವೇಟೆಡ್ ಕಾರಿಡಾರ್‌ಗೆ ಡಿಪಿಆರ್ ರೆಡಿ

ಆದರೆ, 4,200 ಕೋಟಿ ವೆಚ್ಚದ ಈ ಮಹತ್ವಾಕಾಂಕ್ಷಿ ಯೋಜನೆಗೆ ಸದ್ಯ 'ಗ್ರಹಣ'

● ಮುಖ್ಯಮಂತ್ರಿ ಸಿದ್ದರಾಮಯ್ಯರ ಕನಸಿನ ಯೋಜನೆ ● ಭೂಸ್ವಾಧೀನಕ್ಕೆ 2,600 ಕೋಟಿ ಮೀಸಲು ● ಕಾರಿಡಾರ್ ಮಾರ್ಗದ ಖಾಸಗಿ, ಸರ್ಕಾರಿ ಆಸ್ತಿ ಭೂಸ್ವಾಧೀನಕ್ಕೆ ನಿರ್ಧಾರ ● ಪರಿಸರವಾದಿಗಳು, ಪಾರಂಪರಿಕ ಪ್ರಿಯರ ತೀವ್ರ ವಿರೋಧ


ಮೈಸೂರು, ಮೇ.5(ಬಿಎಲ್‌ಯು)– ಮೈಸೂರಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ (ಮೆಟ್ರೊ ಪೋಲ್ ಸರ್ಕಲ್) ದಿಂದ ಇಲವಾಲ ಬಳಿಯ ಲಿಂಗದೇವರ ಕೊಪ್ಪಲುವರೆಗೆ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಹತ್ವಾಕಾಂಕ್ಷಿ, 4,200 ಕೋಟಿ ವೆಚ್ಚದ ಯೋಜನೆಯನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ. ಇದರಿಂದ ಫ್ಲೈ ಓವರ್ ನಿರ್ಮಿಸಿ ಸಂಚಾರ ಸುಗಮಗೊಳಿಸುವ ಮೈಸೂರಿನ ಮತ್ತೊಂದು ಯೋಜನೆಗೆ ಗ್ರಹಣ ಹಿಡಿದಿದೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಿ, ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರ 11 ಕಿ.ಮೀ.ಗಳ ಈ ಎಲಿವೇಟೆಡ್ ಕಾರಿಡಾರ್ ಯೋಜನೆ (ಫ್ಲೈ ಓವರ್) ರೂಪಿಸಿತ್ತು. ಇದರ ನಿರ್ಮಾಣದ ಉಸ್ತುವಾರಿಯನ್ನು ರಾಜ್ಯ ಸರ್ಕಾರ ಲೋಕೋಪಯೋಗಿ ಇಲಾಖೆಗೆ ನೀಡಿತ್ತು.

ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗುವ ಮೆಟ್ರೊಪೋಲ್ ಸರ್ಕಲ್‌ನಿಂದ ಲಿಂಗದೇವರು ಕೊಪ್ಪಲುವರೆಗೆ ವೈಜ್ಞಾನಿಕವಾಗಿ ಮಣ್ಣಿನ ಸಾಂದ್ರತೆಯನ್ನು ಸಹ ಪರೀಕ್ಷೆ ಮಾಡಲಾಗಿತ್ತು. ಎಲಿವೇಟೆಡ್ ಕಾರಿಡಾರ್‌ನಲ್ಲಿ ಭಾರೀ ಗಾತ್ರದ ಕಾಂಕ್ರಿಟ್ ಪಿಲ್ಲರ್‌ಗಳು ನಿರ್ಮಾಣವಾಗುವ ಹಿನ್ನೆಲೆಯಲ್ಲಿ ತಳಪಾಯದ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲಾಯಿತು.

ತರುವಾಯ ಈ ಸಂಬಂಧ ಡಿಪಿಆರ್ (ಸಮಗ್ರ ಯೋಜನಾ ವರದಿ) ಸಿದ್ಧಪಡಿಸಲು ವಿಸ್ತಾರ ಇನ್ಫ್ರಾ ಕನ್ಸಲ್ಟೆಂಟ್ಸ್ ಎಂಬ ಖಾಸಗಿ ಕಂಪನಿಗೆ ಟೆಂಡರ್ ನೀಡಲಾಯಿತು. ಹೀಗೆ ಗುತ್ತಿಗೆ ಪಡೆದ ಕಂಪನಿಯು ಈಗಾಗಲೇ ಡಿಪಿಆರ್ ಕೂಡ ಸಿದ್ಧಪಡಿಸಿ ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿದೆ.

ಎಲಿವೇಟೆಡ್ ಕಾರಿಡಾರ್ ನಿರ್ಮಾಣದ ನಕ್ಷೆ ಬ್ಲೂ ಪ್ರಿಂಟ್, ಸ್ಕೆಚ್, 3ಡಿ ಮ್ಯಾಪಿಂಗ್, ಅಂಡರ್ ಪಾಸ್ ಡಿಸೈನ್, ಫ್ಲೈ ಓವರ್ ಡಿಸೈನ್ ಅನ್ನು ಡಿಪಿಆರ್‌ನಲ್ಲಿ ಸಮಗ್ರವಾಗಿ ಚಿತ್ರೀಕರಿಸಲಾಗಿದೆ. ಈ ಯೋಜನೆಗೆ ಸ್ಪಷ್ಟ ರೂಪ ನೀಡುವ ಎಐ ಆಧಾರಿತ ತ್ರಿಡಿ ವಿಡಿಯೋ ■6ನೇ ಪುಟಕ್ಕೆ



20 ವರ್ಷದ ಭವಿಷ್ಯದ ದೂರದೃಷ್ಟಿಯ ವೈಜ್ಞಾನಿಕ ಯೋಜನೆ

ಎಲಿವೇಟೆಡ್ ಕಾರಿಡಾರ್, 20 ವರ್ಷದ ದೂರದೃಷ್ಟಿಯ ವೈಜ್ಞಾನಿಕತೆ ಒಳಗೊಂಡ ಯೋಜನೆಯಾಗಿ ಡಿಪಿಆರ್ ಸಿದ್ಧಪಡಿಸಲಾಗಿದೆ. ಫ್ಲೈಓವರ್ ನಿರ್ಮಾಣವಾದ ಮೇಲೆ ಯಾವುದೇ ಕಾರಣಕ್ಕೂ ಎಲ್ಲೂ ತಕರಾರು ಬಾರದಂತೆ ನಿರ್ಮಾಣ ಮಾಡುವಂತೆ ಡಿಸೈನ್ ಮಾಡಲಾಗಿದೆ. ಡಕ್‌ಗಳು, ಕೇಬಲ್ ಹಾದು ಹೋಗುವ ಮಾರ್ಗ, ಒಳ ಚರಂಡಿ ಮಾರ್ಗಗಳನ್ನು ಕಲ್ಪಿಸುವ ಸಂಬಂಧವೂ ನಕ್ಷೆ ತಯಾರಿಸಲಾಗಿದೆ.

" ಫ್ಲೈ ಓವರ್ ಹಾಗೂ ಅಂಡರ್ ಪಾಸ್‌ಗಳನ್ನು ಮೈಸೂರಿನ ಪಾರಂಪರಿಕ ಶೈಲಿಯಲ್ಲೇ ರೂಪಿಸಲಾಗಿದೆ. ಇದರಿಂದ ಪಾರಂಪರಿಕ ಪ್ರಿಯರು ಆತಂಕ ಪಡುವ ಅಗತ್ಯವಿಲ್ಲ. ಮಾಡ್ರನ್ ಹೆರಿಟೇಡ್ ಫ್ರೇಮ್ ವರ್ಕ್ ಮಾಡಲಾಗಿದ್ದು, ಅಂಡರ್ ಪಾಸ್‌ಗಳಿಗೆ ವಿಶ್ವ ವಿಖ್ಯಾತ ಮೈಸೂರು ಅರಮನೆಯಂತೆ ಇಂಡೋ ಸಾರ್ಸನಿಕ್ ಶೈಲಿಯ ರೂಪ ನೀಡಲಾಗಿದೆ. ವೈಜ್ಞಾನಿಕತೆ, ಪಾರಂಪರಿಕತೆ, ಆಧುನಿಕತೆಯ ಸಮ್ಮಿಳಿತವಾದ ಅಚ್ಚುಕಟ್ಟಾದ ಯೋಜನೆ ರೂಪಿಸಿದ್ದು, ಡಿಪಿಆರ್‌ನಲ್ಲಿ ಇದಕ್ಕೆ ಸ್ಪಷ್ಟ ರೂಪ ನೀಡಲಾಗಿದೆ. ಆದರೆ ಸದ್ಯಕ್ಕೆ ಈ ಯೋಜನೆಯನ್ನು ತಡೆ ಹಿಡಿಯಲಾಗಿದೆ.

– ವಿ.ಮಹದೇವಸ್ವಾಮಿ, ಎಇಇ, ಲೋಕೋಪಯೋಗಿ ಇಲಾಖೆ.



ಹುಯಿಲಾಳು ಬಳಿಯ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಸಂಪರ್ಕ

ಮೈಸೂರಿನ ಹುಯಿಲಾಳು ಬಳಿ ನಿರ್ಮಿಸುತ್ತಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂಗೆ ಸಂಪರ್ಕ ಕಲ್ಪಿಸುವ ದೃಷ್ಟಿ ಇಟ್ಟುಕೊಂಡೇ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಯೋಜನೆ ರೂಪಿಸಲಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣವಾದರೆ ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತದೆ. ಈ ಹಿನ್ನೆಲೆಯಲ್ಲಿ ಫ್ಲೈಓವರ್ ಮೂಲಕ ಸರಾಗ ಹಾಗೂ ವೇಗವಾಗಿ ಸ್ಟೇಡಿಯಂ ತಲುಪಬಹುದಾಗಿದೆ. ಅಲ್ಲದೆ ಹುಣಸೂರು ರಸ್ತೆ ಮಡಿಕೇರಿ, ಮಂಗಳೂರು, ಹಾಸನ ಮುಂತಾದ ಕಡೆಗೆ ಸಂಪರ್ಕ ಕಲ್ಪಿಸುವ ಮಾರ್ಗವಾಗಿದ್ದು, ವಾಹನಗಳು ಯಾವುದೇ ಅಡೆತಡೆ ಇಲ್ಲದೆ ನೇರವಾಗಿ ಇಲವಾಲ ಬಳಿಯ ಹೆದ್ದಾರಿ ತಲುಪಬಹುದಾಗಿದೆ. ಇದರಿಂದ ಹುಣಸೂರು ರಸ್ತೆಯಲ್ಲಿ ವಾಹನ ದಟ್ಟಣೆ ಇಲ್ಲದೆ ಸುಗಮ ವಾಹನ ಸಂಚಾರ ಕಲ್ಪಿಸಿದಂತಾಗಿದೆ. ಈ ವಿಚಾರವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವೈಜ್ಞಾನಿಕವಾಗಿ ಕಾರಿಡಾರ್ ಯೋಜನೆಗೆ ಅತ್ಯಾಧುನಿಕ ರೂಪ ನೀಡಲಾಗಿದೆ.

ಸಕಾಲ ಯೋಜನೆ: ಮೈಸೂರು ಜಿಲ್ಲೆ ದ್ವಿತೀಯ

ಮೈಸೂರು, ಮೇ 5– ಮೈಸೂರು ಜಿಲ್ಲೆಯು ಸಕಾಲ ಯೋಜನೆಯ ಪ್ರಗತಿಯಲ್ಲಿ ಏಪ್ರಿಲ್ ಮಾಹೆಯಲ್ಲಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಸರ್ಕಾರದ ಸೇವೆಗಳನ್ನು ನಿಗದಿತ ಅವಧಿಯಲ್ಲಿ ಪಡೆಯಲು ಸರ್ಕಾರ ಜಾರಿಗೆ ತಂದಿರುವ ಸಕಾಲ ಯೋಜನೆಯಡಿ ಸಾವಿರಕ್ಕೂ ಹೆಚ್ಚು ಸೇವೆಗಳನ್ನು ಒದಗಿಸುತ್ತಿದೆ. ಆದಾಯ, ಜಾತಿ, ವಂಶ ವೃಕ್ಷ ಸೇರಿದಂತೆ ಸಾವಿರಕ್ಕೂ ಹೆಚ್ಚಿನ ಸೇವೆಯನ್ನು ಸಕಾಲ ಯೋಜನೆಯಡಿ ನೀಡಲಾಗುತ್ತಿದೆ. ಮೈಸೂರಲ್ಲಿ ಸಕಾಲ ಯೋಜನೆ ಬಗ್ಗೆ ಜಿಲ್ಲಾಡಳಿತ ವಿಶೇಷ ಕಾಳಜಿ ಮುತುವರ್ಜಿ ವಹಿಸಿದ್ದು, ಏಪ್ರಿಲ್ ತಿಂಗಳಲ್ಲಿ 120456 ಅರ್ಜಿ ವಿಲೇವಾರಿ ಮಾಡಿ ಸೇವೆ ಒದಗಿಸಿದೆ. ಏಪ್ರಿಲ್ ತಿಂಗಳಲ್ಲಿ 1,19,801 ಅರ್ಜಿಗಳು ಸ್ವೀಕೃತವಾಗಿದ್ದು, 9937 ಅರ್ಜಿಗಳು ತಿರಸ್ಕೃತಗೊಂಡಿವೆ. ತಿರಸ್ಕೃತ ದರ ಶೇ.8.25 ರಷ್ಟಿದೆ. ನಿಗದಿತ ಕಾಲದಲ್ಲಿ 1,18,456 ಅರ್ಜಿಗಳು ವಿಲೇವಾರಿಯಾಗಿವೆ. ನಿಗದಿತ ಅವಧಿಯಲ್ಲಿ ವಿಲೇವಾರಿಯಾದ ಶೇಕಡ ದರ 98.34ರಷ್ಟಿರುತ್ತದೆ. ಸಾರ್ವಜನಿಕರು ಸಕಾಲ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳುವುದು.

ಮೇ 10ಕ್ಕೆ ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ

■ ಯೋಗ ರತ್ನ, ಸೇವಾ ರತ್ನ ಪ್ರಶಸ್ತಿ ಪ್ರದಾನ

ಮೈಸೂರು, ಮೇ 5(ಜಿಎ)–ಸುವರ್ಣ ಬೆಳಕು ಫೌಂಡೇಶನ್ ವತಿಯಿಂದ ಮೇ 10ರಂದು ಶ್ರೀಕಾಂತ ವಿದ್ಯಾ ಸಂಸ್ಥೆಯಲ್ಲಿ ರಾಜ್ಯಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಯೋಗ ರತ್ನ ಹಾಗೂ ಸೇವಾ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಎಸ್.ಮಹೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಕಾರ್ಯಕ್ರಮ ಉದ್ಘಾಟಿಸುವರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪರ್ಧೆಗೆ ಚಾಲನೆ ನೀಡಲಿದ್ದಾರೆ. ಸಂಜೆ ನಡೆಯುವ ಸಮಾರೋಪ ಸಮಾರಂಭವನ್ನು ಸಂಸದ ಯದುವೀರ್ ಒಡೆಯರ್ ಉದ್ಘಾಟಿಸಿ, ಚಾಂಪಿಯನ್ ಆಫ್ ಚಾಂಪಿಯನ್ ಸುತ್ತಿನಲ್ಲಿ ವಿಜೇತರಾದವರಿಗೆ ಬೆಳ್ಳಿ ಟ್ರೋಫಿಯನ್ನು ವಿತರಿಸಲಿದ್ದಾರೆ ಎಂದರು.

ಸ್ಪರ್ಧೆಯ ವಿವಿಧ ವಿಭಾಗದಲ್ಲಿ ವಿಜೇತರಾದವರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಟ್ರೋಫಿ ವಿತರಿಸಲಿದ್ದಾರೆ. ವಿಜಯನಗರದ ಯೋಗನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ವಿಮಲ ವಿರೇಶ್, ಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಮತ್ತಿತರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಡಾ.ಪಿ.ಎನ್.ಗಣೇಶ್‌ಕುಮಾರ್, ರವಿ, ರಾಘವೇಂದ್ರ, ಎನ್.ಪಶುಪತಿ, ರವಣೀಕರ್, ಮಹೇಶ್ ಉಪಸ್ಥಿತರಿದ್ದರು.


ರೈಲ್ವೆ ಪಿಂಚಣಿದಾರರ ಹಿತರಕ್ಷಣಾ ಸಂಘದ ನೂತನ ಪದಾಧಿಕಾರಿಗಳು

ಮೈಸೂರು: ರೈಲ್ವೆ ಪಿಂಚಣಿದಾರರ ಹಿತರಕ್ಷಣಾ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮುಂದಿನ ಮೂರು ವರ್ಷಗಳ ಅವಧಿಗೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪಾರ್ಥಸಾರಥಿ–ಅಧ್ಯಕ್ಷ, ಜಿ.ಎಸ್. ಸ್ವಾಮಿನಾಥನ್–ಪ್ರಧಾನ ಕಾರ್ಯದರ್ಶಿ, ಆರ್.ಬಸವರಾಜು–ಕಾರ್ಯಾಧ್ಯಕ್ಷ, ಎಂ.ಗೋವಿಂದರಾವ್, ಎ.ದ್ವಾರಕ್ಷ್ಮಿ–ಉಪಾಧ್ಯಕ್ಷ, ಕುಳ್ಳೇಗೌಡ–ಕಾರ್ಯನಿರತ ಪ್ರಧಾನ ಕಾರ್ಯದರ್ಶಿ, ಆರ್.ಆದಿನಾರಾಯಣ– ಖಜಾಂಚಿ, ಎಂ.ಭಾನುಪ್ರಸಾದ್ ಮತ್ತು ಕೊಂಗಪ್ಪನಾಯ್ಕ–ಜಂಟಿ ಪ್ರಧಾನ ಕಾರ್ಯದರ್ಶಿಗಳು, ಸುನಿಲ್ ಕುಮಾರ್ ಜೈನ್, ಎಸ್.ವಿ.ಪ್ರೇಮಾನಂ, ಎಲ್. ಜಯಕುಮಾರ್, ಬಿ.ಎನ್.ಆನಂದ, ಎಚ್.ನಾರಾಯಣ, ಜಿ.ಮುಸ್ತಾಕ್ ಅಹಮದ್, ಟಿ.ಆರ್.ನಟರಾಜ್, ಬಿ.ಚಂದ್ರಶೇಖರ್, ಕೆ.ಎಂ.ಪಾಪಣ್ಣ ಮತ್ತು ಶಶಿ–ಸಹಾಯಕ ಪ್ರಧಾನ ಕಾರ್ಯದರ್ಶಿಗಳು.

ಕಾರ್ಯಕಾರಿ ಸಮಿತಿ ಸದಸ್ಯರು: ಎಂ. ಮಾರಿಸ್ವಾಮಿ, ವೇಣುಗೋಪಾಲ್, ಪುರುಷೋತ್ತಮ್, ಆನಂದರಾಜ್, ಮೀರ್ ರಿಯಾಸತ್ ಅಲ್ಲಿಮಾರಿಯಾ ಪೆಟ್ರಿಕ್, ಎಸ್.ವಿ.ವೀರಭದ್ರಪ್ಪ, ಎಸ್.ಎಸ್. ಕುಮಾರ್, ಅಣ್ಣಪ್ಪ ನಾಯ್ಕ ಮತ್ತು ಚಂದ್ರ

ಬೆಳದಿಂಗಳ ಸಂಗೀತ...



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 291ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಬಳ್ಳಾರಿ ಎಂ.ರಾಘವೇಂದ್ರ ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ತುಮಕೂರು ಬಿ.ರವಿಶಂಕರ್, ವಿದ್ವಾನ್ ಶರತ್ ಕೌಶಿಕ್, ಹಲಿಕಾವ್ಯ ವಿದ್ವಾನ್ ಮತ್ತೂರು ಶ್ರೀನಿಧಿ ಇದ್ದಾರೆ.

ಅಭಿನಂದನೆ...



ಹಿರಿಯ ಕೆಎಎಸ್ ಅಧಿಕಾರಿ ಹಾಗೂ ಶ್ರೀ ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರದ ಕಾರ್ಯದರ್ಶಿಗಳಾದ ರಘು ಅವರಿಗೆ ಜನುಮದಿನದ ಶುಭಾಶಯ ಕೋರಿ, ಅಭಿನಂದಿಸಲಾಯಿತು. ಈ ವೇಳೆ ಮೈಸೂರು ಜಿಲ್ಲಾ ಕನ್ನಡ ಜಾಗೃತ ಸಮಿತಿ ಸದಸ್ಯ ಕಡಕೋಳ ಕುಮಾರಸ್ವಾಮಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಬೀರೇಶ್, ಮುಖಂಡರಾದ ಮಂಜು, ಪೈಲ್ವಾನ್ ರಾಘವೇಂದ್ರ ಉಪಸ್ಥಿತರಿದ್ದರು.

ವ್ಯಕ್ತಿ ನಾಪತ್ತೆ



ಮೈಸೂರು: ನಂಜನಗೂಡು ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಅಶೋಕಪ್ಪ ಲಕ್ಕುಂಡಿ ಏ.16ರಂದು ಕೆಲಸಕ್ಕೆಂದು ಹೊರ ಹೋದವರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ಅಶೋಕಪ್ಪ ಲಕ್ಕುಂಡಿ ವಯಸ್ಸು 51 ವರ್ಷ, ಎತ್ತರ 5.7 ಅಡಿ, ಕೋಲು ಮುಖ, ಎಣ್ಣೆಗೆಂಪು ಮೈಬಣ್ಣ, ಸಾಧಾರಣ ಮೈಕಟ್ಟು, ಎಡಗೈ ಮೇಲೆ AL ಎಂಬ ಅಚ್ಚೆ ಗುರುತು ಇದ್ದು, ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಭಾಷೆ ಮಾತನಾಡುತ್ತಾರೆ. ಕಾಣೆಯಾದ ವೇಳೆ ಸಿಮೆಂಟ್ ಕಲರ್‌ನ ತುಂಬು ತೋಳಿನ ಶರ್ಟ್, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ನಂಜನಗೂಡು ಪೊಲೀಸ್ ಠಾಣಾ ದೂ.ಸಂ. 0821– 2520040, 2444800, 08221–228383 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

ಸಂಪೂರ್ಣಮೂರ್ತಿ ನಿಧನ



ಮೈಸೂರು,ಮೇ 5– ಶಾರದಾದೇವಿನಗರದ ತಪೋವನ್ ಸೋಲೇಸ್ ಅಪಾರ್ಟ್‌ಮೆಂಟ್ ನಿವಾಸಿ, ಕೆಎಸ್‌ಆರ್‌ಟಿಸಿ ನಿವೃತ್ತ ಮೇಲ್ವಿಚಾರಕ ಸಂಪೂರ್ಣಮೂರ್ತಿ (78) ನಿನ್ನೆ ನಿಧನರಾದರು. ಮೃತರು ಪತ್ನಿ ಬಿ.ಎಸ್.ನಾಗರತ್ನ, ಪುತ್ರಿ ಶ್ರುತಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆಂಡಾದಲ್ಲಿ ನೆಲೆಸಿರುವ ಪುತ್ರಿಯಂದಾದ ಮೈಸೂರಿನ ಮರಳಿದ ನಂತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ರಾಧಾ



ಮೈಸೂರು, ಮೇ 5– ನಗರದ ದಟ್ಟಗಳ್ಳಿಯ ಪ್ರಮುರ್ ಆರೋನಿಸ್ ಅಪಾರ್ಟ್‌ಮೆಂಟ್ ನಿವಾಸಿ ಆರ್.ರಾಧಾ (65) ಭಾನುವಾರ ನಿಧನರಾದರು. ಮೃತರು ಬಿಎಚ್‌ಇಎಲ್‌ನ ನಿವೃತ್ತ ಪ್ರೊಜೆಕ್ಟ್ ಡೈರೆಕ್ಟರ್ ಆದ ಪತಿ ಎಂ.ಆರ್.ಶ್ರೀಕಾಂತನ್, ಓರ್ವ ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಗರದ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉನ್ನತ ಶ್ರೇಣಿ ಪಡೆದವರಿಗೆ ಅಭಿನಂದನೆ



ಮೈಸೂರು ಜಿಲ್ಲಾ ಕಸಾಪ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪುರಸ್ಕೃತರು, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಮೇ 5(ಜಿಎ)–ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪುರಸ್ಕೃತರು ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಇಂದು ಜಗತ್ತಿನಲ್ಲಿ ಯಾರು ಏನು ಬೇಕಾದರೂ ಆಗಬಹುದು. ಆದರೆ, ಮನುಷ್ಯ ಆಗುವುದು ಬಹಳ ಮುಖ್ಯ. ಅದನ್ನು ವಿದ್ಯಾರ್ಥಿಗಳು ಅರ್ಥೈಸಿಕೊಂಡು ಜೊತೆಗೆ ಕೌಶಲ್ಯ ವೃದ್ಧಿಸಿಕೊಳ್ಳಬೇಕು. ಡಿಜಿಟಲ್ ಯುಗದಲ್ಲಿ ಕೌಶಲ್ಯ ಬಹಳ ಮುಖ್ಯ. ಪ್ರಮುಖವಾಗಿ ಸಮಯ ಪಾಲನೆ ಮಾಡಿ ಎಲ್ಲರ ಗಿಂತಲೂ ವಿಭಿನ್ನವಾಗಿ ಆಲೋಚನೆ ಮಾಡಿ ಎಂದು ಸಲಹೆ ನೀಡಿದರು.

ಡಿಡಿಪಿಐ ಉದಯಕುಮಾರ್ ಮಾತನಾಡಿ, ಸೇವಾ ಮತ್ತು ಶಿಕ್ಷಣ ಕ್ಷೇತ್ರದ ಸಾಧಕರನ್ನು ಗುರುತಿಸಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗೌರವಿಸಲಾಗಿದೆ. ಇದರಿಂದ ಶಿಕ್ಷಣ ಇಲಾಖೆಗೆ ಹೆಮ್ಮೆ ತಂದಿದೆ. ಮಕ್ಕಳ ಸಾಧನೆ ಗುರುತಿಸಿದರೆ ಅವರ ಸಾಧನೆಗೆ ಸಾಥ್ ನೀಡಿದಂತೆ. ಮೈಸೂರು ಜಿಲ್ಲೆಯ 21 ಸಾವಿರ ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದು, 600ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಜಿಲ್ಲೆ ಒಟ್ಟಾರೆ ಉತ್ತಮ ಫಲಿತಾಂಶ ಗಳಿಸಿದೆ ಮುಂದಿನ ದಿನಗಳಲ್ಲಿ ಫಲಿತಾಂಶ ಮತ್ತಷ್ಟು ಉತ್ತಮಗೊಳಿಸಲು ಶ್ರಮ ವಹಿಸಲಾಗುತ್ತದೆ ಎಂದರು.

ಇಂದಿನ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಸಾಧನೆ ಮೆರೆದ ವಿದ್ಯಾರ್ಥಿಗಳನ್ನು ಅಭಿನಂದಿಸಿರುವುದು ಉತ್ತಮ ಬೆಳವಣಿಗೆ. ಆದರೆ, 7, 8, 9ನೇ ತರಗತಿ ಮಕ್ಕಳ ಗಣನೆಗೆ ತೆಗೆದುಕೊಂಡು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಶಾಲೆಗಳಲ್ಲಿ ಕನ್ನಡ ಕುರಿತಂತೆ ಸಂವಾದ, ವಿಶೇಷ ಯೋಜನೆಗಳನ್ನು ಆಯೋಜಿಸಿ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಸಾಹಿತ್ಯ ಪರಿಷತ್ ನೂರು ಸದಸ್ಯರಿಂದ ಆರಂಭವಾಗಿದ್ದು, ಇಂದು ಪ್ರತ್ಯಾ ಖಂಡದಲ್ಲಿಯೇ ಅತೀ ಹೆಚ್ಚು ಸದಸ್ಯರನ್ನು ಒಳಗೊಂಡಿದೆ. ದತ್ತಿ ದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೋಟಿ ರೂ. ವರೆಗೂ ದತ್ತಿ ಇರಿಸಿದ್ದಾರೆ. ನಾಡಿನ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸಿದೆ. ನಾಲ್ಕು ಮತ್ತು ವಿಶ್ವಕೋಶ ಹೊರತಂದ ಹೆಮ್ಮೆ ಸಂಸ್ಥೆಗೆ ಎಂದಿಗೂ ಸೋಲಿಲ್ಲ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪುರಸ್ಕೃತರಾದ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಮಹದೇವಪ್ಪ, ಮೈವ್ ರಮೇಶ್, ಎಂ.ಯೋಗೇಂದ್ರ ಮತ್ತು ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ ಮಾಧುರಿ, ಮನಸ್ವಿನಿ ಪ್ರದೀಪ್, ಡಿ.ಜಿ.ವಿನುತ, ಎಂ.ಎಸ್.ಲಕ್ಷ್ಮಣ ಹಾಗೂ ಪಿಯುಸಿಯಲ್ಲಿ ಸಾಧನೆ ಮೆರೆದ ಮುಮುದ್ ಮೆಹರಾನ್, ಕೆ.ಎಲ್.ಶ್ರಾವ್ಯ, ಉಮ್ಮೆ ಕುಲ್‌ಸುಮ್, ಗುಲ್ಬುಮ್, ಎಸ್.ತನ್ನಯಿ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಮ.ನ.ಲತಾ ಮೋಹನ್, ಡಾ.ಜಯಪ್ಪ ಹೊನ್ನಾಳಿ, ಮೂಗೂರು ನಂಜುಂಡಸ್ವಾಮಿ, ರಾಜಶೇಖರ್ ಕದಂಬ ಮತ್ತಿತರರು ಉಪಸ್ಥಿತರಿದ್ದರು.

ಭೋವಿ ಜನಾಂಗದ ನಿರುದ್ಯೋಗಿ ಮಹಿಳೆಯರಿಗೆ ಟೈಲರಿಂಗ್ ತರಬೇತಿ



ಮೈಸೂರಿನ ವಿದ್ಯಾರಣ್ಯಪುರಂನ ಕೌಶಲ್ಯ ಕರ್ನಾಟಕ ಟ್ರೈನಿಂಗ್ ಸೆಂಟರ್‌ನಲ್ಲಿ ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿ ಭೋವಿ ಜನಾಂಗದ ಮಹಿಳೆಯರಿಗೆ ಟೈಲರಿಂಗ್ ತರಬೇತಿ ನೀಡುವ ಶಿಬಿರಕ್ಕೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ಚಾಲನೆ ನೀಡಿದರು.

ಮೈಸೂರು, ಮೇ 5(ಜಿಎಲ್‌ಯು)– ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿ ಭೋವಿ ಜನಾಂಗದ ನಿರುದ್ಯೋಗಿ ಮಹಿಳೆಯರಿಗೆ ಉಚಿತ ಟೈಲರಿಂಗ್ ತರಬೇತಿ ಶಿಬಿರ ಇಂದಿನಿಂದ ಆರಂಭವಾಗಿದೆ.

ಮೈಸೂರಿನ ವಿದ್ಯಾರಣ್ಯಪುರಂನ ಕೌಶಲ್ಯ ಕರ್ನಾಟಕ ಟ್ರೈನಿಂಗ್ ಸೆಂಟರ್‌ನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ.ಎಂ.ರಾಮಪ್ಪ ತರಬೇತಿ ಶಿಬಿರಕ್ಕೆ ಚಾಲನೆ ನೀಡಿದರು.


ಈ ವೇಳೆ ಮಾತನಾಡಿದ ರಾಮಪ್ಪ, ಯುವತಿಯರು, ಮಹಿಳೆಯರು ಟೈಲರಿಂಗ್ ತರಬೇತಿ ಪಡೆದು ಸ್ವಾವಲಂಬಿಗಳಾಗಬೇಕು. ಇದರಿಂದ ಸ್ವಂತ ಉದ್ಯೋಗ ಆರಂಭಿಸಿ ಬದುಕು ಕಟ್ಟಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಮೈಸೂರು ಜಿಲ್ಲೆಯ ಪರಿಶಿಷ್ಟ ಜಾತಿಯ ಭೋವಿ ಜನಾಂಗದ 75 ಮಹಿಳೆಯರಿಗೆ ಇಂದಿನಿಂದ ತರಬೇತಿ ಆರಂಭವಾಗಿದ್ದು, ತರಬೇತಿ ತರುವಾಯ ಎಲ್ಲಾ ಮಹಿಳೆಯರಿಗೆ ಉಚಿತ ಟೈಲರಿಂಗ್ ಯಂತ್ರಗಳನ್ನು ನೀಡಲಾಗುವುದು.

ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಭೋವಿ ಸಮುದಾಯ ಮಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮೀಜಿ, ನಿಗಮದ ಮಾಜಿ ಅಧ್ಯಕ್ಷ ಸೀತಾರಾಮ್, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮ್‌ಪ್ರಸಾದ್, ತರಬೇತಿ ಶಿಕ್ಷಕಿ ನಿವೇದಿತಾ, ಸ್ವಯಂ ಸೇವಾ ಸಂಸ್ಥೆಯ ಬಲರಾಂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಮೈಸೂರಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಆಚರಣೆ

■ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಉದ್ಘಾಟನೆ



ಮೈಸೂರು, ಮೇ 5(ಜಿಎ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯೋತ್ಸವ ಸಮಿತಿ ಹಾಗೂ ಶ್ರೀ ಭೋವಿ ಹಿತರಕ್ಷಣಾ ಸಮಿತಿ ವತಿಯಿಂದ ಮೇ 6ರಂದು ಬೆಳಿಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಹಾಗೂ ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಅನಿಲ್ ಚಿಕ್ಕಮಾದು, ರಮೇಶ್ ಬಂಡಿಸಿದ್ದೇಗೌಡ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಮಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಸೇರಿದಂತೆ ವಿವಿಧ ನಿಗಮ ಮಂಡಳಿಯ ಅಧ್ಯಕ್ಷರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರಿಗೆ ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಭೋವಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮು, ಎಸ್. ವಿಜಯಕುಮಾರ್, ರವಿಪೂಜಾರಿ, ಮಲ್ಲಣ್ಣ ಮತ್ತಿತರರು ಉಪಸ್ಥಿತರಿದ್ದರು.

2026–27ನೇ ಸಾಲಿನ ಡಿಪ್ಲೊಮಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 5–ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ 2026–27ನೇ ಸಾಲಿನ ಎಸ್‌ಎಸ್‌ಎಲ್‌ಸಿ ನಂತರದ ಪೂರ್ಣಾವಧಿಯ ಸಂಸ್ಥೆಯಲ್ಲಿನ ಇಂಜಿನಿಯರಿಂಗ್ ವಿಭಾಗದ ಪ್ರಥಮ ವರ್ಷದ (1) ಆಟೋಮೊಬೈಲ್ ಇಂಜಿನಿಯರಿಂಗ್ (2) ಸಿವಿಲ್ ಇಂಜಿನಿಯರಿಂಗ್ (3) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ (4) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ಇಂಜಿನಿಯರಿಂಗ್ (5) ಎಲೆಕ್ಟ್ರಿಕಲ್ಸ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ (6)ಮೆಕ್ಯಾನಿಕಲ್ ಇಂಜಿನಿಯರಿಂಗ್ (7) ಮಷಿನ್ ಟೂಲ್ ಟೆಕ್ನಾಲಜಿ, ಮತ್ತು 8)ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಮಷಿನ್ ಲರ್ನಿಂಗ್ ಡಿಪ್ಲೊಮಾ ಕೋರ್ಸುಗಳಿಗೆ ಮೆರಿಟ್ ಆಧಾರಿತ ಆನ್–ಲೈನ್ ಮೂಲಕ ಪ್ರವೇಶ ನೀಡಲಾಗುತ್ತಿದೆ.

ಸದರಿ ಕೋರ್ಸುಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಇಲಾಖೆ ಅಧಿಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿ ಮತ್ತು ಅದ್ಯತಾ ಪಟ್ಟಿಯನ್ನು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಮೇ 16ರ ಸಂಜೆ 5 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ನೀಡುವ ಆದ್ಯತೆ ಅನುಸಾರವಾಗಿ ಮೆರಿಟ್ ಹಾಗೂ ರೋಸ್ಟರ್‌ಗನುಗುಣವಾಗಿ ಆನ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲಾಗುವುದು. ನಾನ್ ಇಂಜಿನಿಯರಿಂಗ್ ಪ್ರಥಮ ವರ್ಷದ ಡಿಪ್ಲೊಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ) ಮತ್ತು ಕಮರ್ಷಿಯಲ್ ಪ್ರಾಕ್ಟೀಸ್ (ಇಂಗ್ಲೀಷ್) ಕೋರ್ಸುಗಳಿಗೆ ಮೆರಿಟ್ ಹಾಗೂ ರೋಸ್ಟರ್‌ಗನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿ ಆಫ್ ಲೈನ್ ಮೂಲಕ ಪ್ರವೇಶವನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಯನ್ನು ಸಾರ್ವಜನಿಕರು ಸರ್ಕಾರಿ/ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪಡೆಯಬಹುದಾಗಿದೆ. ಕಾಲೇಜು ತಾಂತ್ರಿಕ ಇಲಾಖೆ ಮತ್ತು ಶಿಕ್ಷಣ detech.karnataka.gov.in ಮತ್ತು dtek.karnataka.gov.in ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ಎಟಿಎಂಇ ಕಾಲೇಜಲ್ಲಿ ಮೇ 9ಕ್ಕೆ ಓಪನ್ ಡೇ

ಮೈಸೂರು, ಮೇ 5(ಜಿಎ)–ಮೈಸೂರಿನ ಎಟಿಎಂಇ ಇಂಜಿನಿಯರಿಂಗ್ ಕಾಲೇಜಲ್ಲಿ ಮೇ 9ರಂದು ಓಪನ್ ಡೇ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದು ಪ್ರಾಂಶುಪಾಲ ಡಾ.ಎಲ್.ಬಸವರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದ್ವಿತೀಯ ಪಿಯುಸಿ, ಡಿಪ್ಲೊಮಾ ವಿದ್ಯಾರ್ಥಿಗಳು ಹಾಗೂ ಪೋಷಕರು ಓಪನ್ ಡೇ ಕಾರ್ಯಕ್ರಮದ ಮೂಲಕ ವಿವಿಧ ಶೈಕ್ಷಣಿಕ ಮತ್ತು ವೃತ್ತಿ ಅವಕಾಶಗಳನ್ನು ಅನ್ವೇಷಿಸಲು ಉತ್ತಮ ವೇದಿಕೆಯಾಗಿದೆ. ಪ್ರಮುಖವಾಗಿ ವಿದ್ಯಾರ್ಥಿ ವೇತನ ಜಾಗೃತಿ ಕಾರ್ಯಕ್ರಮವೂ ಆಗಿದ್ದು, ಎಟಿಎಂಇ ವಿದ್ಯಾಸೆರೆ ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದರು.

ಅಂದು ಸಾಂಸ್ಕೃತಿಕ ಚಟುವಟಿಕೆ, ಮನರಂಜನಾ ಆಟಗಳು ಮತ್ತು ಸೃಜನಾತ್ಮಕ ವಿಡಿಯೋಗ್ರಫಿ ಸ್ಪರ್ಧೆಯನ್ನೂ ಆಯೋಜಿಸಲಾಗಿದೆ. ವಿಜೇತರಿಗೆ 50 ಸಾವಿರ ರೂ. ವರೆಗೂ ಬಹುಮಾನ ಗೆಲ್ಲುವ ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ 9036926363 ಸಂಪರ್ಕಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸಚ್ಚಿದಾನಂದ ಮೂರ್ತಿ, ಶ್ರೀನಿವಾಸ, ರಾಘವೇಂದ್ರ, ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


06.5.2026 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಿಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಿಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಿಗ್ಗೆ 9 ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನರ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆ ನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಮಹಿಳಾ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಿಗ್ಗೆ 9.30 ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ತಾರಾ ಪ್ರಕಾಶನ ಮತ್ತು ಕನ್ನಡ ಸಾಹಿತ್ಯ ಕಲಾ ಕೂಟ** : ಡಾ. ವಾಸಯ್ಯ ಎನ್. ಅವರ ವಿಶ್ವೇಶ್ವರಿ ಕೃತಿ ಲೋಕಾರ್ಪಣೆ ಕಾರ್ಯಕ್ರಮ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಕೃತಿ ಲೋಕಾರ್ಪಣೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ. ತಳವಾರ್, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕೃತಿ ಕುರಿತು : ಡಾ. ಮಾಲಿನಿ ಅಧ್ಯಕ್ಷರ್, ಮುಖ್ಯ ಅತಿಥಿಗಳು : ಮೇಘರಾಜ್ ನಾಯಕ್, ಡಾ. ಎನ್. ವಾಸಯ್ಯ ಡಾ. ಬಿ. ಬಸವರಾಜು, ಡಾ. ಎಸ್.ಶಿವರಾಜು, ಸ್ಥಳ: ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಕನ್ನಡ ಚಿತ್ರಗೀತೆಗಳು, 8.30 ಮತ್ತು ಸಂಜೆ 5.30 ಚುಟಿ ಚುಟಿ ಚುಟುಕ್ ಗುಟುಂ ಗುಟುಕ್– ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ–ದಾಮೋದರ್ ಲಾಲ್ ಕಟ್ರಿ–ಗಿಟಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು– ಟಿ.ಎನ್. ಅಶ್ವಿನಿ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಜಿ. ಶ್ರೀಧರ್–ನಾಗಸ್ವರ ವಾದನ, 4.00 ಮಹಿಳಾರಂಗ–ಮೈಸೂರಿನ ನಿವೇದಿತಾ ನಗರದ ಚಿತ್ಕಲಾ ಮಹಿಳಾ ಸಂಘದ ಸದಸ್ಯರಿಂದ ಭ್ರೂಣ ಹತ್ಯೆ ಕುರಿತು ಕಾರ್ಯಕ್ರಮ ವೈವಿಧ್ಯ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಎಸ್. ಈಶ್ವರ್ ಭಟ್, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳ ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್. ವಿಷಯ–ಕಟ್ಟೋಣ ಬನ್ನಿ ಬಾನುಲಿ ಸರಣಿಯಲ್ಲಿ ಪ್ರಸಾರವಾದ ವಿಷಯಗಳ ಸಮಗ್ರ ಸಾರಾಂಶ ಭಾಗವಹಿಸುತ್ತಾರೆ ಮೈಸೂರಿನ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಶಾಖೆಯ ಅಧ್ಯಕ್ಷರಾದ ಬಸವರಾಜ್ ಮತ್ತು ಪ್ರಮೋದ್ ಗ್ರೂಪ್‌ನ ಪ್ರಧಾನ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಪ್ರಕಾಶ್, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ಕೃಷಿರಂಗ–ರೇಷ್ಮೆ ಉದ್ಯಮಗಳ ಉತ್ತೇಜನಕ್ಕಾಗಿ ಮೈಸೂರಿನ ಕೇಂದ್ರ ರೇಷ್ಮೆ ಕೃಷಿ ತಂತ್ರಜ್ಞಾನ ಸಂಶೋಧನ ಹಾಗೂ ತರಬೇತಿ ಸಂಸ್ಥೆಯ ತಂತ್ರಜ್ಞಾನಗಳನ್ನು ಕುರಿತ ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ ಸಂಸ್ಥೆಯ ನಿರ್ದೇಶಕರಾದ ಡಾ. ಪಿ.ದೀಪಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಬಂದು ಮಾಧವ ಪಾಠಕ್–ರುದ್ರ ವೀಣಾವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಗುಚ್ಛ–ಮರು ಪ್ರಸಾರಗಳ ಸಂಕಲನ, ಗಂಡು ಭೇರುಂಡ, ಅಜ್ಜನ ಕೋಲಿದು, ಭಾರ, 10.30 ಸವಿನೆಪು

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರಿಂದ ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4ಕ್ಕೆ

ಮೈಸೂರು ಮಿತ್ರ

ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸುವ ಸಂಬಂಧ

ಆರ್ಥಿಕ ಮಾಸ್ಟರ್ ಪ್ಲಾನ್‌ಗೆ ಐಎಸ್‌ಇಜಿ ಸಂಸ್ಥೆಯೊಂದಿಗೆ ಸರ್ಕಾರದ ಒಡಂಬಡಿಕೆ

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ನಡೆದ ಪ್ರಕ್ರಿಯೆ ● ಜಾಗತಿಕ ನಗರಗಳ ಜೊತೆ ಸಮರ್ಥವಾಗಿ ಸ್ಪರ್ಧಿಸಲು ಬೆಂಗಳೂರು ಸಜ್ಜುಗೊಳಿಸಲಾಗುವುದು; ಡಿ.ಕೆ.ಶಿವಕುಮಾರ್

ಬೆಂಗಳೂರು, ಮೇ 5– ಬೆಂಗಳೂರನ್ನು ವಿಶ್ವದರ್ಜೆಯ ಪ್ರಗತಿಯ ಹಬ್ ಆಗಿ ಪರಿವರ್ತಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕೆ ಅಗತ್ಯವಿರುವ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಸುಸ್ಥಿರ ಉದ್ಯೋಗ ಮತ್ತು ಅಭಿವೃದ್ಧಿ ದತ್ತಿ (ಐಎಸ್‌ಇಜಿ) ಸಂಸ್ಥೆಯೊಂದಿಗೆ ಉದ್ದೇಶ ಪತ್ರಕ್ಕೆ (Joint Statement of Intent) ಸಹಿ ಹಾಕಲಾಗಿದೆ.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸುವ ಸಂಬಂಧ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಇತರ ಅಧಿಕಾರಿಗಳು ಚಿತ್ರದಲ್ಲಿದ್ದಾರೆ.

ವಿಧಾನಸೌಧದಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಹಾಗೂ ಐಎಸ್‌ಇಜಿ ಸಂಸ್ಥೆ ನಿರ್ದೇಶಕ ಡಾ.ಶಿರೀಶ್ ಸಂಖೆರವರು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸಮ್ಮುಖದಲ್ಲಿ ಪರಸ್ಪರ ಸಹಿ ಹಾಕಿ ಪತ್ರ ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಒಡಂಬಡಿಕೆ ಉದ್ದೇಶದ ಬಗ್ಗೆ ವಿವರಿಸಿ, ಸಲಹೆ–ಸೂಚನೆ ನೀಡಿದರು.

ಬೆಂಗಳೂರಿನಲ್ಲಿ ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕಳೆದ 3 ವರ್ಷಗಳಿಂದ ಪ್ರಯತ್ನಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಕ್ಕೆ ದಾಖಲೆ ಪ್ರಮಾಣದಲ್ಲಿ ಆರ್ಥಿಕ ಶಕ್ತಿ ನೀಡಿದ್ದೇವೆ. ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶದಲ್ಲಿ ತಲಾದಾಯ 8.850 ಡಾಲರ್‌ನಷ್ಟಿದೆ. ಇದು ರಾಜ್ಯದ ಸರಾಸರಿಗಿಂತ ದುಪ್ಪಟ್ಟಿದೆ. 8 ಸಾವಿರ ಚದರ ಕಿ.ಮೀಗಿಂತ ಹೆಚ್ಚು ಪ್ರದೇಶದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಹಾಗೂ ದಕ್ಷಿಣ ಜಿಲ್ಲೆಗಳು ಹರಡಿದ್ದು, 1.6 ಕೋಟಿ ಜನ ಇಲ್ಲಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ವಿವರಿಸಿದರು.

ಭಾರತದ ಸಾಫ್ಟ್‌ವೇರ್ ರಫ್ತಿನಲ್ಲಿ ಶೇ.42ರಷ್ಟು ಕೊಡುಗೆಯನ್ನು ಬೆಂಗಳೂರು ನೀಡುತ್ತಿದೆ. ಬೆಂಗಳೂರು ನಗರಕ್ಕೆ 500 ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ 2032ರಿಂದ 2037ರ ಅವಧಿಯಲ್ಲಿ ಕೈಗೊಳ್ಳಬೇಕಾದ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಚಿಂತನೆ ನಡೆಸಿದ್ದೇವೆ. ಹೀಗಾಗಿ ಬೆಂಗಳೂರಿಗೆ ಹೊಸ ರೂಪ, ಶಕ್ತಿ ನೀಡಬೇಕು ಎಂದು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ಎಲ್ಲಿ ಉದ್ಯೋಗ ಸೃಷ್ಟಿಸಬೇಕು, ಎಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಬೇಕು, ಎಲ್ಲಿ ವಸತಿ ಯೋಜನೆಗಳನ್ನು ತರಬೇಕು ಎಂಬಿತ್ಯಾದಿ ಜೊತೆಗೆ ಸಂಚಾರ ದಟ್ಟಣೆ ನಿವಾರಣೆ ಸಂಬಂಧ ನಕ್ಷೆ ರೂಪಿಸಲಾಗುವುದು. ಇತರೆ ನಗರಗಳಾದ ಮುಂಬೈ, ದೆಹಲಿ, ಕೋಲ್ಕತ್ತಾಗಳಲ್ಲಿ ಇಲ್ಲಿಗಿಂತ ಹೆಚ್ಚು ಸಂಚಾರ ದಟ್ಟಣೆ ನೋಡಿದ್ದೇನೆ. ನಾನು ಅವರನ್ನು ದೂರುತ್ತಿಲ್ಲ. ಈ ಸಮಸ್ಯೆಗೆ ಪರಿಹಾರ ಯಾವ ರೀತಿ ನೀಡಬೇಕೆಂದು ಯೋಜನೆ ರೂಪಿಸಿದ್ದೇವೆ. ಸುಮಾರು 2 ಲಕ್ಷ ಕೋಟಿ ಮೌಲ್ಯದ ಯೋಜನೆ ಇದಾಗಿದ್ದು, ಹಂತ ಹಂತವಾಗಿ ಇದನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ವಿವರಿಸಿದರು.

ದತ್ತಾಂಶ ಆಧಾರಿತ ಆರ್ಥಿಕ ಮಾಸ್ಟರ್ ಪ್ಲಾನ್ ರೂಪಿಸಲು ಸೂಚಿಸಲಾಗಿದೆ. ಇದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ ಇಲ್ಲ. ಜೊತೆಗೆ ಈ ಸಂಬಂಧ ಇಂಧನ, ಪಾಲಿಕೆ, ಜಲ, ನಗರಾಭಿವೃದ್ಧಿ, ಮಾಹಿತಿ ತಂತ್ರಜ್ಞಾನ, ಕೈಗಾರಿಕೆ ಕ್ಷೇತ್ರಗಳ ಪರಿಣಿತರು ಸೇರಿದಂತೆ ಪ್ರಮುಖ ನಾಗರಿಕರ ಅಭಿಪ್ರಾಯ, ಸಲಹೆ ಪಡೆಯಲಾಗುವುದು ಎಂದರು.

ಬೆಂಗಳೂರನ್ನು ವಿಶ್ವದರ್ಜೆ ಪ್ರಗತಿ ಹಬ್ ಮಾಡಲು ಕೈಗೊಳ್ಳಲಾಗಿರುವ ತೀರ್ಮಾನಕ್ಕೆ ಹೊಸರೂಪ ನೀಡುತ್ತಿದ್ದೇವೆ. ಆ ಮೂಲಕ ಜಾಗತಿಕ ನಗರಗಳ ಜೊತೆ ಬೆಂಗಳೂರು ಸಮರ್ಥವಾಗಿ ಸ್ಪರ್ಧೆ ಮಾಡುವಂತೆ ಸಜ್ಜುಗೊಳಿಸಲಾಗುವುದು. ನಮ್ಮ ಜತೆ ಒಡಂಬಡಿಕೆ ಮಾಡಿಕೊಂಡಿರುವ ಐಎಸ್‌ಇಜಿ ಸಂಸ್ಥೆಯು ಮುಂಬೈ, ವಿಶಾಖಪಟ್ಟಣ, ಪುಣೆ, ವಾರಣಾಸಿಗಳಲ್ಲಿ ಈ ರೀತಿಯ ಯೋಜನೆ ರೂಪಿಸಿದೆ. ಈ ಸಂಸ್ಥೆಗೆ 4 ತಿಂಗಳ ಕಾಲಾವಕಾಶ ನೀಡಿದ್ದು, ಈ ಅವಧಿಯಲ್ಲಿ ಸಂಸ್ಥೆಯವರು ನಕ್ಷೆ ರೂಪಿಸಲಿದ್ದಾರೆ. ಇವರಿಗೆ ಅಗತ್ಯವಿರುವ ಸಹಕಾರವನ್ನು ನೀಡಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚಿಸುತ್ತಿದ್ದೇನೆ ಎಂದು ಹೇಳಿದರು. ಅಲ್ಲದೆ, ಬೆಂಗಳೂರಿನ ನಾಗರೀಕರು, ಡೆವಲಪರ್‌ಗಳು, ಉದ್ದಿಮೆದಾರರು, ಶೈಕ್ಷಣಿಕ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ದೊಡ್ಡ ಮಾಸ್ಟರ್ ಪ್ಲಾನ್ ಸೃಷ್ಟಿಸಬೇಕೆಂದು ಅವರು ಸೂಚಿಸಿದರು.

ಅಂಚೆ ಮತಗಳ ತಿದ್ದಿದ ಆರೋಪ

ಶೃಂಗೇರಿ ಶಾಸಕ ಜೀವರಾಜ್ ಮೇಲಿನ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ

ಬೆಂಗಳೂರು, ಮೇ 5(ಕೆಎಂಶಿ)– ಅಂಚೆ ಮತಗಳನ್ನು ತಿರುಚಿದ ಆರೋಪದ ಮೇಲೆ ಶೃಂಗೇರಿ ಶಾಸಕ ಜೀವರಾಜ್ ಮೇಲೆ ದಾಖಲಾಗಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ತಮ್ಮ ಮೇಲಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡ ರಜಾ ಕಾಲದ ಪೀಠದ ನ್ಯಾಯಮೂರ್ತಿ ಶ್ರೀಶಾನಂದ ಅವರು, ಸರ್ಕಾರಿ ವಕೀಲರನ್ನು ತರಾಟೆಗೆ ತೆಗೆದುಕೊಂಡು ಎಫ್‌ಐಆರ್‌ಗೆ ತಡೆ ನೀಡಿದ್ದಾರೆ.

2023ರ ಮೇ 13ರಂದು ನಡೆದ ಘಟನೆಗೆ ಈಗ ಎಫ್ ಐಆರ್ ಮಾಡಿದರೆ ಹೇಗೆ? ಟ್ಯಾಂಪರಿಂಗ್ ಬಗ್ಗೆ ನ್ಯಾಯಾಲಯದ ಗಮನಕ್ಕೆ ತಾರದೇ ಪ್ರಕರಣ ದಾಖಲಿಸುವುದೇ ಎಂದು ಪ್ರಶ್ನಿಸಿದರು.

ಸೋತವರು ಯಾರು ಒಳ ಸಂಚು ಮಾಡುತ್ತಾರೆ. ಅವರನ್ನು ಕರೆಯಿರಿ, ನಿಮಗೆ ಕಣ್ಣು ಕಾಣುವುದಿಲ್ಲವೇ? ನಿಮ್ಮನ್ನು ಅಮಾನತ್ತು ಮಾಡಬೇಕೇ ಎಂದು ತನಿಖಾಧಿಕಾರಿಗಳ ಮೇಲೂ ನ್ಯಾಯಮೂರ್ತಿಗಳು ಗರಂ ಆದರು. 2023ರಲ್ಲಿದ್ದ ಜಿಲ್ಲಾಧಿಕಾರಿಗಳ ಮೇಲೆ ಎಫ್‌ಐಆರ್ ಮಾಡಿದ್ದೇಕೆ. ಅದನ್ನು ಓದಿದರೆ ಅರ್ಥವಾಗುತ್ತದೆ. ಈಗಿನ ಚುನಾವಣಾಧಿಕಾರಿ ಗೌರವ ಶೆಟ್ಟಿ ಮೇಲೆ ಏಕೆ ಮಾಡಿಲ್ಲ ಎಂದು ಪ್ರಶ್ನಿಸಿದರು. ನ್ಯಾಯಾಲಯದ ಆದೇಶದಂತೆ ಅಂಚೆ ಮತಗಳ ಎಣಿಕೆ ಆಗಿದೆ. ಎಣಿಕೆಗೂ ಮುನ್ನ ಅಲ್ಲಿ ದೋಷಗಳು ಕಂಡುಬಂದಿದ್ದರೆ ನಮ್ಮ ಗಮನಕ್ಕೆ ಏಕೆ ತರಲಿಲ್ಲ. ಈ ವಿಚಾರದಲ್ಲಿ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಹೇಳಿ ಮೇ 7ಕ್ಕೆ ವಿಚಾರಣೆ ಮುಂದೂಡಿದರು.



ಜೀವರಾಜ್

ನ್ಯಾಯಾಲಯದಲ್ಲಿ ಎಫ್‌ಐಆರ್‌ಗೆ ತಾತ್ಕಾಲಿಕ ತಡೆ ಬರುತ್ತಿದ್ದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಜೊತೆಗೂಡಿ, ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರದ ನಿಲುವಿನ ವಿರುದ್ಧ ಮಧ್ಯ ಪ್ರವೇಶ ಮಾಡಬೇಕು ಎಂದು ಮನವಿ ಮಾಡಿಕೊಂಡರು.

ತಕ್ಷಣವೇ ವಿಧಾನಸಭೆ ಸದಸ್ಯರಾಗಲು ಸಭಾಧ್ಯಕ್ಷರು ಪ್ರಮಾಣ ವಚನ ಬೋಧಿಸಲು ವಿಧಾನ ಮಂಡಲದ ಕಾರ್ಯಾಲಯಕ್ಕೆ ಆದೇಶ ಮಾಡಬೇಕು ಎಂದು ಕೋರಿದ್ದಾರೆ.

ರಾಜ್ಯಪಾಲರ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ನಂತರ ಘಟನೆಯ ಸಂಪೂರ್ಣ ವಿವರವನ್ನು ರಾಜ್ಯಪಾಲರ ಗಮನಕ್ಕೆ ತಂದಿದ್ದೇವೆ.

ತಾವು ಮಧ್ಯ ಪ್ರವೇಶ ಮಾಡಿ ಜೀವರಾಜ್ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲು ಅನುಕೂಲವಾಗುವಂತೆ ಸೂಚನೆ ನೀಡಬೇಕು ಎಂಬ ಮನವಿಗೆ ತಕ್ಷಣವೇ ಸ್ಪಂದಿಸಿದ್ದಾರೆ ಎಂದರು. ಒಂದು ವೇಳೆ ಸಭಾಧ್ಯಕ್ಷರು ಜೀವರಾಜ್ ಅವರಿಗೆ ವಿಧಾನಸಭೆ ಸದಸ್ಯತ್ವದ ಪ್ರಮಾಣ ವಚನ ಬೋಧಿಸದಿದ್ದರೆ, ಸಂವಿಧಾನದ ಪ್ರಕಾರ ರಾಜ್ಯಪಾಲರೇ ಇವರಿಗೆ ಪ್ರಮಾಣ ವಚನ ಬೋಧಿಸಬಹುದು ಎಂದು ಅವರು ಹೇಳಿದರು.

ಅಪರಿಚಿತ ಶವ ಪತ್ತೆ

ಮೈಸೂರು, ಮೇ 5– ಮೈಸೂರು ನಗರ ನರಸಿಂಹರಾಜ ಪೊಲೀಸ್ ಠಾಣಾ ವ್ಯಾಪ್ತಿಯ ವರುಣ ಚಾನಲ್ ಬ್ರಿಡ್ಜ್‌ನ ಕೆಳಭಾಗದ ಸಿಮೆಂಟ್ ಫುಟ್‌ಪಾತ್‌ನಲ್ಲಿ ಸುಮಾರು 50 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ. ವಾರಸುದಾರರಿಲ್ಲದ ಕಾರಣ ಶವವನ್ನು ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿಟ್ಟಿದ್ದು, ಈ ಸಂಬಂಧ ಎನ್.ಆರ್. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 5.5 ಅಡಿ ಎತ್ತರ, ದುಂಡುಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ, ಕಪ್ಪು ಮತ್ತು ಬಿಳಿ ತಲೆಗೂದಲು ಹಾಗೂ ಕಪ್ಪು ಬಿಳಿ ಮೀಸೆ, ಉದ್ದನೆಯ ಗಡ್ಡ ಬಿಟ್ಟಿರುತ್ತಾರೆ. ಈತ ನೀಲಿ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಬಣ್ಣದ ತುಂಬು ತೋಳಿನ ಶರ್ಟ್ ಧರಿಸಿರುತ್ತಾರೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂ: 2418312, 2418311, 0821-2418100, ನ್ನು ಸಂಪರ್ಕಿಸಬಹುದೆಂದು ಎನ್.ಆರ್ ಪೊಲೀಸ್ ಠಾಣೆಯ ಸ್ಟೇಷನ್ ಹೌಸ್ ಆಫೀಸರ್ ನಿಂಗಮ್ಮ .ಎಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಕೆ ಸ್ಟಾಲಿನ್ ರಾಜೀನಾಮೆ ಅಂಗೀಕಾರ

ಚೆನ್ನೈ: ದ್ರಾವಿಡ ಮುನ್ನೇತ್ರ ಕಳಗಂ (ಡಿಎಂಕೆ) ಅಧ್ಯಕ್ಷ ಎಂ.ಕೆ ಸ್ಟಾಲಿನ್ ಅವರಿಂದು ತಮಿಳುನಾಡು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ್ದು, ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅದನ್ನು ಅಂಗೀಕರಿಸಿದ್ದಾರೆ. ನೂತನ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಳ್ಳುವವರೆಗೂ ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರೆಯುವಂತೆ ಮನವಿ ಮಾಡಿದ್ದಾರೆ. ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸುವಲ್ಲಿ ಡಿಎಂಕೆ ವಿಫಲವಾದ ಹಿನ್ನೆಲೆ ಸ್ಟಾಲಿನ್ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.



ಸ್ಟಾಲಿನ್

ಸಿಎಂ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ಬಳಿಕ ಎಕ್ಸ್ ಖಾತೆಯಲ್ಲಿ ಸುದೀರ್ಘ ಸಂದೇಶವೊಂದನ್ನ ಸ್ಟಾಲಿನ್ ಹಂಚಿಕೊಂಡಿದ್ದಾರೆ: ಇತ್ತೀಚೆಗೆ ಮುಕ್ತಾಯಗೊಂಡ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ದ್ರಾವಿಡ ಮುನ್ನೇತ್ರ ಕಳಗಂ ನೇತೃತ್ವದ ಜಾತ್ಯಾತೀತ ಪ್ರಗತಿಪರ ಮೈತ್ರಿಕೂಟ ಪಕ್ಷದ ಅಭ್ಯರ್ಥಿಗಳಿಗೆ ಮತ ಹಾಕಿದ ತಮಿಳುನಾಡಿನ ಎಲ್ಲಾ ಜನರಿಗೆ ನಾನು ಹೃತ್ಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ನಿಮ್ಮೆಲ್ಲರ ಪ್ರತಿಯೊಂದು ಮತವನ್ನು ನಾನು ಅಮೂಲ್ಯವಾದ ನಂಬಿಕೆ ಎಂದು ಪರಿಗಣಿಸುತ್ತೇನೆ. ಇಲ್ಲಿಯವರೆಗೆ ಲಭ್ಯವಿರುವ ಅಂಕಿ–ಅಂಶಗಳ ಪ್ರಕಾರ, ಡಿಎಂಕೆ ಮೈತ್ರಿಕೂಟವು 1 ಕೋಟಿ 54 ಲಕ್ಷ 82 ಸಾವಿರ 782 ಮತಗಳನ್ನು ಪಡೆದಿದೆ. ಈ ಎಲ್ಲ ಜನರಿಗೆ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ.

ಹೆಚ್ಚುವರಿ ಸ್ಥಾನಗಳನ್ನು ಗೆದ್ದ ಪಕ್ಷವು ನಮಗಿಂತ ಕೇವಲ 17.43 ಲಕ್ಷ ಮತಗಳನ್ನು ಮಾತ್ರ ಪಡೆದಿದೆ. ನಮ್ಮ ಮತ್ತು ಅವರ ನಡುವಿನ ಮತ ಶೇಕಡಾವಾರು ವ್ಯತ್ಯಾಸವು ಕೇವಲ 3.52 ಅಷ್ಟೇ. ನನ್ನ ಮಟ್ಟಿಗೆ ಹೇಳುವುದಾದರೆ, ತಮಿಳುನಾಡಿನ ಜನರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ನಾನು ಪ್ರಬಲವೆಂದು ಪರಿಗಣಿಸುತ್ತೇನೆ.

ನಮಗೆ ಮತ ಹಾಕಿದ ಜನರ ಬಳಿಗೆ ನೇರವಾಗಿ ಹೋಗಿ ನಮ್ಮ ಕೃತಜ್ಞತೆ ವ್ಯಕ್ತಪಡಿಸುವುದು ನಮ್ಮ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ, ದ್ರಾವಿಡ ಮುನ್ನೇತ್ರ ಕಳಗಂ ಪರವಾಗಿ ಗೆದ್ದ ಎಲ್ಲಾ ಅಭ್ಯರ್ಥಿಗಳು ತಮಗೆ ಮತ ಹಾಕಿದ ಜನರನ್ನು ತಕ್ಷಣ ಭೇಟಿ ಮಾಡಿ ಕೃತಜ್ಞತೆ ವ್ಯಕ್ತಪಡಿಸಬೇಕೆಂದು ನಾನು ವಿನಂತಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ, ಜನರು ನಮ್ಮ ಗೌರವಕ್ಕೆ ಅರ್ಹರು. ನಾವು ಅವರಿಗಾಗಿ ಪಕ್ಷವನ್ನು ನಡೆಸುತ್ತೇವೆ. ನಾವು ಅವರಿಗಾಗಿ ರಾಜಕೀಯದಲ್ಲಿ ಕಾರ್ಯನಿರ್ವಹಿಸುತ್ತೇವೆ. ಆದ್ದರಿಂದ, ಎಲ್ಲಾ ಅಭ್ಯರ್ಥಿಗಳು ಎಲ್ಲಾ ಜನರಿಗೆ ತಮ್ಮ ಕೃತಜ್ಞತೆ ವ್ಯಕ್ತಪಡಿಸಲು ವೈಯಕ್ತಿಕವಾಗಿ ಹೋಗಬೇಕೆಂದು ನಾನು ವಿನಂತಿಸುತ್ತೇನೆ.

ನಾವು ನೋಡದ ಯಾವುದೇ ಗೆಲುವಿಲ್ಲ: ದ್ರಾವಿಡ ಮುನ್ನೇತ್ರ ಕಳಗಂ ಆರು ಬಾರಿ ಅಧಿಕಾರಕ್ಕೆ ಬಂದಿದೆ. ನಾವು ನೋಡದ ಯಾವುದೇ ಗೆಲುವಿಲ್ಲ; ನಾವು ಎದುರಿಸದ ಯಾವುದೇ ಸೋಲು ಇಲ್ಲ. ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ನೀತಿಯನ್ನು ರಕ್ಷಿಸುವ ಪ್ರಯಾಣದಲ್ಲಿ ನಮ್ಮ ನೀತಿ ವಿಫಲವಾಗದಂತೆ ನಾವು ಯಾವಾಗಲೂ ಜಾಗರೂಕರಾಗಿರುತ್ತೇವೆ. ಪಕ್ಷದ ಸಹೋದರ ಸಹೋದರಿಯರು ಗೆಲುವು ಅಥವಾ ಸೋಲನ್ನು ಸಮಾನವಾಗಿ ಪರಿಗಣಿಸಿ ತಮ್ಮ ಆದರ್ಶ ಪ್ರಯಾಣವನ್ನ ಮುಂದುವರಿಸುತ್ತಾರೆ. ಅದಕ್ಕಾಗಿಯೇ ನಾನು ಪ್ರಮುಖ ಸಮ್ಮೇಳನಗಳು ಮತ್ತು ಸಾರ್ವಜನಿಕ ಸಭೆಗಳಲ್ಲಿ ಮಾತನಾಡುವಾಗಲೆಲ್ಲಾ, ತಮಿಳುನಾಡಿನಾದ್ಯಂತದ ಎಲ್ಲಾ ಸ್ವಯಂಸೇವಕರನ್ನ ಅಭಿನಂದಿಸುವ ಮೂಲಕ ನಾನು ಪ್ರಾರಂಭಿಸುತ್ತೇನೆ.

ನಟ ವಿಜಯ್‌ಗೆ ಶಿವಣ್ಣ ಶುಭ ಹಾರೈಕೆ

ಬೆಂಗಳೂರು, ಮೇ 5– ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಚೊಚ್ಚಲ ಪ್ರಯತ್ನದಲ್ಲೇ ವಿಕ್ಟರಿ ಬಾರಿಸಿ, ಜಯ ಸಾಧಿಸಿದ ನಟ, ಟಿವಿಕೆ ಪಕ್ಷದ ಮುಖ್ಯಸ್ಥ ವಿಜಯ್‌ಗೆ ಸ್ಯಾಂಡಲ್‌ವುಡ್ ನಟ ಶಿವರಾಜಕುಮಾರ್ ಶುಭಾಶಯ ತಿಳಿಸಿದ್ದಾರೆ.



ಶಿವಣ್ಣ ತಮ್ಮ ಎಕ್ಸ್ ಖಾತೆಯಲ್ಲಿ ನಟ ವಿಜಯ್‌ಗೆ ವಿಶ್ ಮಾಡಿದ್ದಾರೆ. ಈ ಚುನಾವಣೆಯಲ್ಲಿ ನೀವು ಅರ್ಹವಾದ ಗೆಲುವನ್ನು ಸಾಧಿಸಿದ್ದೀರಿ. ಟೀಕಿಸುತ್ತಿರುವ ಸಮಯದಲ್ಲಿ ಮೌನವಾಗಿದ್ದು, ನಿಮ್ಮ ಕೆಲಸಗಳ ಮೂಲಕ ಉತ್ತರಿಸಿದ್ದೀರಿ. ಇದೇ ನಿಜವಾದ ಗೆಲುವು. ಒಮ್ಮೆ ಮಾಧ್ಯಮಗಳ ಜೊತೆ ಮಾತನಾಡುವಾಗ ನಾನು ತಮಾಷೆಯಾಗಿ, ಟಿವಿಕೆ ಅಂದ್ರೆ Try Vijay as King ಅಂದಿದ್ದೆ. ಇಂದು ನಿಜವಾಗಿಯೂ ನೀವು ರಾಜನಂತೆ ಎದ್ದು ನಿಂತಿದ್ದೀರಿ. ಟಿವಿಕೆ ಮೂಲಕ ತಮಿಳುನಾಡಿನ ಜನರಿಗೆ ನೀಡಿದ ಎಲ್ಲಾ ಭರವಸೆಗಳನ್ನು ನೀವು ನೆರವೇರಿಸುವಂತಾಗಲಿ, ಸದಾ ಅಭಿವೃದ್ಧಿಯತ್ತ ಸಾಗಲಿ ಎಂದು ಹಾರೈಸಿದ್ದಾರೆ.

234 ಸ್ಥಾನಗಳನ್ನು ಹೊಂದಿರುವ ತಮಿಳುನಾಡಿನಲ್ಲಿ ಗದ್ದುಗೆ ಏರಲು 118 ಬಹುಮತಗಳ ಅವಶ್ಯಕತೆಯಿದೆ. ಟಿವಿಕೆ 108 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಬಹುಮತಕ್ಕೆ ಇನ್ನೂ 10 ಸ್ಥಾನಗಳ ಅವಶ್ಯಕತೆಯಿದೆ ದಕ್ಷಿಣ ಭಾರತದ ಪ್ರಮುಖ ರಾಜ್ಯಗಳಲ್ಲೊಂದಾದ ತಮಿಳುನಾಡಿನ 234 ವಿಧಾನಸಭಾ ಕ್ಷೇತ್ರಗಳಿಗೆ ಏ.23 ರಂದು ಮತದಾನ ನಡೆದಿತ್ತು. ರಾಜ್ಯದಲ್ಲಿ ದಾಖಲೆಯ 4,654 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಈ ಪೈಕಿ 3,579 ಪುರುಷ ಮತ್ತು 443 ಮಹಿಳಾ ಮತದಾರರು ಸ್ಪರ್ಧಿಸಿದ್ದರು. 84.69% ಮತದಾನ ನಡೆದಿತ್ತು. ರಾಜ್ಯದಲ್ಲಿ ಬಹುಮತಕ್ಕೆ 118 ಸ್ಥಾನಗಳು ಬೇಕಿದ್ದವು. ರಾಜ್ಯದಲ್ಲಿ ಆಡಳಿತಾರೂಢ ಡಿಎಂಕೆ ಮೈತ್ರಿಕೂಟ, ಎಐಎಡಿ ಎಂಕೆ ಮೈತ್ರಿಕೂಟ, ನಟ ವಿಜಯ್ ನೇತೃತ್ವದ ಟಿವಿಕೆ, ಎನ್‌ಟಿಕೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದವು.

ಪಂಚ ರಾಜ್ಯಗಳ ಚುನಾವಣೆಯಲ್ಲಿ ಮಹಿಳಾ ಮೀಸಲು ಮಸೂದೆ ವಿರೋಧಿಸಿದವರಿಗೆ ತಕ್ಕ ಪಾಠ

■ ಕೇಂದ್ರ ಸಚಿವ ವಿ. ಸೋಮಣ್ಣ ಪ್ರತಿಕ್ರಿಯೆ ■ ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಯೋಜನೆಗಳ ಜಾರಿ ಮಾಡದೇ ಜನತೆಗೆ ಟಿಎಂಸಿ ದ್ರೋಹ

ಬೆಂಗಳೂರು, ಮೇ 5(ಕೆಎಂಶಿ)– ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿದ ಪಕ್ಷಗಳಿಗೆ ಜನತೆ ಪಂಚ ರಾಜ್ಯಗಳ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿದ್ದಾರೆ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವರಾದ ವಿ.ಸೋಮಣ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರು ರಾಜ್ಯಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್‌ರವರ ನೇತೃತ್ವದಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಕರ್ನಾಟಕದ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಮತದಾರರು ಐತಿಹಾಸಿಕ ತೀರ್ಪು ನೀಡಿದ್ದಾರೆ. 209ಸ್ಥಾನಗಳಲ್ಲಿ ಬಿಜೆಪಿ ಗೆದ್ದಿದೆ. 140 ಕೋಟಿ ಜನರ ಬದುಕನ್ನು ರೂಪಿಸಲು, ಸಾರ್ವಭೌಮತೆಯಿಂದ ಬದುಕಲು ಬಿಜೆಪಿ ಸಹಕಾರ ನೀಡಿದೆ ಎಂದು ಹೇಳಿದರು.

ಟಿಎಂಸಿ ಗೂಂಡಾಗಿರಿ, ಹಿಂಸಾಚಾರ, ದುರಾಡಳಿತಕ್ಕೆ ಬಂಗಾಳದ ಜನರು ಕೊನೆ ಹಾಡಿದ್ದಾರೆ. ಸಾಬ್ ಕಾ ಸಾತ್, ಸಬ್ ಕಾ ವಿಕಾಸ್ ಸಿದ್ಧಾಂತವನ್ನು ಬಿಜೆಪಿ ನಂಬಿದೆ. ಟಿಎಂಸಿ, ಕಾಂಗ್ರೆಸ್, ಡಿ.ಎಂ.ಕೆ. ಪಕ್ಷಗಳವರು ಮಹಿಳಾ ಮೀಸಲು ಮಸೂದೆ ವಿರೋಧ ಮಾಡಿದ್ದರು. ಇದರ ಪ್ರತಿಫಲ ಅನುಭವಿಸುತ್ತಿದ್ದಾರೆ ಎಂದರು.

ಪಶ್ಚಿಮ ಬಂಗಾಳ ಸ್ವಾಮಿ ವಿವೇಕಾನಂದ, ಬಂಕಿಮ ಚಂದ್ರ ಚಟರ್ಜಿ ಸೇರಿದಂತೆ ಅನೇಕ ಮಹನೀಯರ ಪುಣ್ಯಭೂಮಿ. ಇದನ್ನು ನರಕ ಮಾಡಿದವರು ಮಮತಾ ಬ್ಯಾನರ್ಜಿ ಎಂದು ಆರೋಪಿಸಿದರು. ಪ್ರಧಾನಿ ನರೇಂದ್ರಮೋದಿಯವರ ಜನಪ್ರಿಯ ಯೋಜನೆಗಳನ್ನು ಪಶ್ಚಿಮ ಬಂಗಾಳದಲ್ಲಿ ಅನುಷ್ಠಾನ ಮಾಡಲಿಲ್ಲ. ಟಿಎಂಸಿ ಪಕ್ಷ ಬಾಂಗ್ಲಾದೇಶದ ನುಸುಳುಕೋರರನ್ನು ದೇಶದ ಒಳಗೆ ಬಿಟ್ಟುಕೊಂಡಿದೆ. ಭವಿಷ್ಯ ಭಾರತದ ಅಭಿವೃದ್ಧಿಯಲ್ಲಿ ಪಶ್ಚಿಮ ಬಂಗಾಳ ಸಹ ಅಭಿವೃದ್ಧಿಯಾಗಲಿದೆ ಎಂದು ಅವರು ಹೇಳಿದರು.



ವಿ.ಸೋಮಣ್ಣ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ಹೆಣ್ಣು ಮಕ್ಕಳ ಅಧಿಕಾರ ಮೊಟಕು ಮಾಡಿದ ವಿರೋಧ ಪಕ್ಷದವರಿಗೆ ರಾಷ್ಟ್ರದ ಜನರು ಬುದ್ದಿ ಕಲಿಸಿದ್ದಾರೆ. ಮಹಿಳೆಯರು ಬಿಜೆಪಿ ಪರ ನಿಂತಿದ್ದರು. ಪಾಪದ ಕೊಡ ತುಂಬಿದ ಟಿಎಂಸಿ ಪಕ್ಷಕ್ಕೆ ಮಹಿಳೆಯರು ತಕ್ಕ ಪಾಠ ಕಲಿಸಿದ್ದಾರೆ ಎಂದು ತಿಳಿಸಿದರು.

ಮಹಿಳಾ ಸಹಾಯವಾಣಿ, ಮಹಿಳಾ ಪರ ಯೋಜನೆಗಳು, ಜಲಜೀವನ್ ಮಿಷನ್, ಪಿ.ಎಂ.ಕಿಸಾನ್ ಯೋಜನೆ, ಪಿ.ಎಂ.ಅವಾಜ್ ಯೋಜನೆ, ಗ್ರಾಮ ಸಡಾಕ್, ಮತ್ತು ಶಿಕ್ಷಣ ಮೂಲಸೌಕರ್ಯ ಯೋಜನೆಯನ್ನು ತಡೆಹಿಡಿದ ಟಿ.ಎಂ.ಸಿ.ಪಕ್ಷ ಪಶ್ಚಿಮ ಬಂಗಾಳ ಹಿಂದುಳಿಯಲು ಕಾರಣವಾಯಿತು. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸರ್ಕಾರ 1ಲಕ್ಷದ 16ಸಾವಿರ ಕೋಟಿ ಹಣವನ್ನು ಪೋಲು ಮಾಡಿದ್ದು, ಈ ಕುರಿತು ತನಿಖೆಯಾಗಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಕೊಟ್ಟ ಯೋಜನೆಗಳನ್ನು ತಿರಸ್ಕಾರ ಮಾಡಿ, ಮಮತಾ ಬ್ಯಾನರ್ಜಿ ತನ್ನದೇ ಸಾಮ್ರಾಜ್ಯ ಕಟ್ಟಿಕೊಂಡು ರಾಜ್ಯವನ್ನು ಹಾಳು ಮಾಡಿದರು. ಕಾಂಗ್ರೆಸ್ ಪಕ್ಷದವರು ಮಾಡಿದ ಪಾಪದ ಕೆಲಸ, ಸಂಚಿನಿಂದ ಮಹಿಳಾ ಮೀಸಲಾತಿ ವಿರೋಧಿಯಲ್ಲಿ ಪ್ರಮುಖ ಪಾತ್ರವಹಿಸಿದ ಡಿಎಂಕೆ, ಆಮ್ ಆದ್ಮಿ ಪಾರ್ಟಿ, ಟಿ.ಎಂ.ಸಿ. ಎಲ್ಲ ಪಕ್ಷಗಳಿಗೆ ಜನರು ತಕ್ಕ ಪಾಠ ಕಲಿಸಿದ್ದಾರೆ.

ಇವಿಎಂ ಬಗ್ಗೆ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಸಿದ್ದರಾಮಯ್ಯ ತಕಾರಾರು ಎತ್ತುತ್ತಾರೆ. ಕೇರಳದಲ್ಲಿ ಇವಿಎಂ ಮೂಲಕ ಕಾಂಗ್ರೆಸ್ ಪಕ್ಷ ಜಯಗಳಿಸಿದೆ. ಇದರ ಕುರಿತು ಉತ್ತರಿಸಬೇಕು. ಕಾಂಗ್ರೆಸ್ ಪಕ್ಷ ಒಳಜಗಳದಿಂದ ರಾಜ್ಯದ ಜನರು ಪರಿತಪಿಸುತ್ತಿದ್ದಾರೆ.

ಎಲ್ಲಿ ಕಾಂಗ್ರೆಸ್ ಸೋಲುತ್ತದೆಯೋ ಅಲ್ಲಿ ಇವಿಎಂ ಸರಿಯಿಲ್ಲ. ಕಾಂಗ್ರೆಸ್ ಪಕ್ಷ ಗೆದ್ದರೆ ಇವಿಎಂ ಸರಿ ಇರುತ್ತದೆ ಎಂದು ವ್ಯಂಗ್ಯವಾಡಿದರು.

ಪಾಪದ ಹಣದಿಂದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ನಾಮಾವಶೇಷವಾಗಲಿದೆ ಎಂದು ಅವರು ಭವಿಷ್ಯ ನುಡಿದರು.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಮ್ಮ ಆಸ್ಪತ್ರೆಯ ಪ್ರಚಾರಕ್ಕಾಗಿ ಒಂದು ಒಳ್ಳೆಯ ಪಂಚ್ ಡೈಲಾಗ್ ಹೇಳಿ..

ಗುಂಡ : ಹಣ ನಮಗೆ ! ಹೆಣ ನಿಮಗೆ !!

ಮೈಸೂರು ಮಿತ್ರ

ಬುಧವಾರ, ಮೇ 6, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬುದ್ಧಿವಂತ ಮಾತನಾಡುವ ಮೊದಲು ಯೋಚಿಸಿ ಮಾತನಾಡುತ್ತಾನೆ.
ದಡ್ಡ ಮಾತನಾಡಿದ ನಂತರ ಯೋಚಿಸುತ್ತಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ದುಡ್ಡನ್ನು ಕಾದಿಟ್ಟುಕೊಳ್ಳದವನು ಹಣವಂತನು ಹೇಗೆ ಆದಾನು?

ನಿಮ್ಮ ಪತ್ರಗಳು

ಪರಿಸರವಾದಿ ರಘುಲಾಲ್ ಎನ್.ರಾಘವನ್



ಮಾನ್ಯರೆ,

ಮೈಸೂರಿನ ಹೆಸರಾಂತ ಔಷಧಿ ವ್ಯಾಪಾರಿ, ಪರಿಸರವಾದಿಗಳಾದ ರಘುಲಾಲ್ ಕಂಪನಿಯ ಎನ್.ರಾಘವನ್ ತಮ್ಮ ಪರಿಸರ ಪ್ರೇಮದಿಂದ ಎಲ್ಲರ ಮನ ಗೆದ್ದಿದ್ದಾರೆ. ಅವರ ಸೇವಾ ಕಾರ್ಯ ಮುಂದಿನ ಪೀಳಿಗೆಗೆ ಆದರ್ಶವಾಗಿವೆ. ಮೈಸೂರು ನಗರದಲ್ಲಿ ತಾವೇ ಖುದ್ದು ಆಸಕ್ತಿಯಿಂದ ಗಿಡಗಳ ರಕ್ಷಣೆಗೆ ಮುಂದಾಗಿದ್ದಾರೆ. ಗಿಡ–ಮರಗಳ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೈಸೂರು ನಗರದಲ್ಲಿ ಸಾವಿರಾರು ಗಿಡಗಳನ್ನು ನೆಟ್ಟಿದ್ದಾರೆ. ಜೊತೆಗೆ ಅವುಗಳಿಗೆ ಭದ್ರವಾದ ಹೊದಿಕೆಯನ್ನು ಮಾಡಿಸಿದ್ದಾರೆ. ಬೇಸಿಗೆ ಕಾಲದಲ್ಲಿ ವಾಹನದಲ್ಲಿ ನೀರನ್ನು ತೆಗೆದುಕೊಂಡು ಹೋಗಿ ಗಿಡಗಳಿಗೆ ಹಾಯಿಸಿ, ರಕ್ಷಿಸಿದ್ದಾರೆ. ತಾವು ನೆಟ್ಟ ಗಿಡಗಳು ಬಿಸಿಲಿಗೆ ಒಣಗದಂತೆ ಕಾಳಜಿ ವಹಿಸುತ್ತಾರೆ. ಕರೋನಾ ಸಂದರ್ಭದಲ್ಲಿ ಇಡೀ ದೇಶ, ರಾಜ್ಯ ಸಂಕಷ್ಟಕ್ಕೆ ಸಿಲುಕಿತ್ತು. ರಘುಲಾಲ್ ಎನ್.ರಾಘವನ್‌ರವರು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಉಪಯುಕ್ತ ಔಷಧಿಗಳನ್ನು ನಗರಪಾಲಿಕೆಗೆ ನೀಡಿ, ಸಂತ್ರಸ್ತರಿಗೆ ವಿತರಿಸಲು ನೆರವಾಗಿದ್ದರು. ಮೈಸೂರು ನಗರದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಅವರ ಕೊಡುಗೆ ಅಪಾರವಾಗಿದೆ. ಮೈಸೂರು ನಗರದಲ್ಲಿ ಹಲವಾರು ಜನರು ಬಿಸಿಲು ಮತ್ತು ಮಳೆಯಲ್ಲಿ ತೊಂದರೆ ಆಗಬಾರದೆಂದು ತರಕಾರಿ ಮತ್ತು ಹೂವು–ಹಣ್ಣು ವ್ಯಾಪಾರಿಗಳಿಗೆ ತಳ್ಳು ಗಾಡಿಗಳನ್ನು ಉಚಿತವಾಗಿ ವಿತರಿಸಿದ್ದರು. ಇವರು ಮಾಡಿರುವ ಸೇವೆಯನ್ನು ಗುರುತಿಸಿ ಅರಣ್ಯ ಇಲಾಖೆಯವರು ನಡೆಸಿದ ವನಮಹೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನಿಸಿ, ಗೌರವಿಸಿದ್ದಾರೆ. ಪ್ರಧಾನ ಮಂತ್ರಿ ಟಿ.ಬಿ.ಮುಕ್ತ ಅಭಿಯಾನದಡಿ ರಾಘವನ್ ಅವರನ್ನು ಕರ್ನಾಟಕದ ರಾಜ್ಯಪಾಲರು ರಾಜಭವನಕ್ಕೆ ಕರೆಸಿ, ಗೌರವಿಸಿ, ಅಭಿನಂದಿಸಿದ್ದಾರೆ. ಮೈಸೂರು ನಗರಪಾಲಿಕೆಯವರು ಇವರ ಸ್ವಚ್ಛತಾ ಕಾರ್ಯಕ್ರಮ ಮತ್ತು ಪರಿಸರ ಪ್ರೇಮವನ್ನು ಗುರುತಿಸಿ ಪ್ರಶಂಸನಾ ಪತ್ರವನ್ನು ನೀಡಿ ಅಭಿನಂದಿಸಿದ್ದಾರೆ. ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯೂ ಇವರಿಗೆ ಸಂದಿದೆ. ಸಾಮಾಜಿಕ ಮತ್ತು ಪರಿಸರ ಕ್ಷೇತ್ರದಲ್ಲಿ ಇವರು ಮಾಡಿರುವ ಕೆಲಸಗಳು ಸದಾ ಸ್ಮರಣೀಯ. ಮನುಷ್ಯನಾಗಿ ಹುಟ್ಟಿದ ಮೇಲೆ ದೇಶಕ್ಕೆ, ಸಮಾಜಕ್ಕೆ, ಪರಿಸರ ಪರ ನಾವು ಕೆಲಸ ಮಾಡಬೇಕೆಂಬುದನ್ನು ತೋರಿಸಿಕೊಟ್ಟ ಸರಳ, ಸಜ್ಜನಿಕೆಯ ವ್ಯಕ್ತಿ ರಘುಲಾಲ್ ಎನ್.ರಾಘವನ್.

–ಲೇಖಕರು: ದತ್ತಪೀಠಬಂಧು ಎಸ್.ನಾಗರಾಜ
ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಮೈಸೂರು

ತಮಿಳುನಾಡು ಮಿತ್ರ ವಿಜಯ್ !

ಮಾನ್ಯರೆ,

ತಮಿಳುನಾಡು ಚುನಾವಣೆಯಲ್ಲಿ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ಅಭೂತಪೂರ್ವ ಜಯವು ಹೊಸ ರಾಜಕೀಯ ಆಯಾಮಕ್ಕೆ ದಾರಿಯಾಗಿದೆ. ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಬಡ ಕುಟುಂಬದ ಹೆಣ್ಣುಮಕ್ಕಳ ವಿವಾಹಕ್ಕೆ 8 ಗ್ರಾಂ ಚಿನ್ನ ಮತ್ತು ರೇಷ್ಮೆ ಸೀರೆ, ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಹಾಗೂ ಶಾಲೆ–ಕಾಲೇಜುಗಳಲ್ಲಿ ಉಚಿತ ಸ್ಯಾನಿಟರಿ ಪ್ಯಾಡ್‌ಗಳ ವಿತರಣೆಯು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಈ ಯೋಜನೆಗಳು ಸ್ತ್ರೀ ಶಿಕ್ಷಣ ಮತ್ತು ನೈರ್ಮಲ್ಯವನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಆದರೆ, ಪ್ರತಿ ನವಜಾತ ಶಿಶುವಿಗೆ ಚಿನ್ನದ ಉಂಗುರ ಹಾಗೂ ಉಚಿತ ಗ್ಯಾಸ್ ಸಿಲಿಂಡರ್‌ಗಳಂತಹ ವೆಚ್ಚದಾಯಕ ಭರವಸೆಗಳು ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಹೆಚ್ಚಿನ ಹೊರೆ ಬೀಳಬಹುದು. ಅಂಕಿ ಅಂಶಗಳ ಪ್ರಕಾರ, ಇಂತಹ ಉಚಿತ ಯೋಜನೆಗಳ ಅನುಷ್ಠಾನಕ್ಕೆ ಭಾರೀ ಬಜೆಟ್ ಅಗತ್ಯವಿದ್ದು, ಇದು ಅಭಿವೃದ್ಧಿ ಕಾರ್ಯಗಳ ಮೇಲೆ ಪರಿಣಾಮ ಬೀರಬಹುದು. ಆದರೂ, ತಮಿಳುನಾಡಿನ ಸಾಮಾನ್ಯ ಜನರ ಪರವಾದ ವಿಜಯ್ ಅವರ ಈ ಧೈರ್ಯದ ಹೆಜ್ಜೆಗಳು ರಾಜಕೀಯ ಇತಿಹಾಸದಲ್ಲಿ ಹೊಸ ಭರವಸೆ ಮೂಡಿಸಿವೆ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಎಡ ಪಕ್ಷಗಳ ಚಾರಿತ್ರಿಕ ಸೋಲು!

ಮಾನ್ಯರೆ,

ಕೇರಳಂ ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಡ ಪಕ್ಷಗಳ ಮೈತ್ರಿಕೂಟ (ಎಲ್‌ಡಿಎಫ್) ಅಧಿಕಾರ ಕಳೆದುಕೊಳ್ಳುವುದರೊಂದಿಗೆ 1977ರ ನಂತರ ಇದೇ ಮೊದಲ ಬಾರಿಗೆ ದೇಶದಲ್ಲಿ ಕಮ್ಯುನಿಸ್ಟ್ ಪಕ್ಷದ ಮುಖ್ಯಮಂತ್ರಿ ಇಲ್ಲದಂತಾಗಿದೆ. ಪಶ್ಚಿಮ ಬಂಗಾಳದಲ್ಲಿ ಸುಮಾರು 34 ವರ್ಷಗಳಷ್ಟು ದೀರ್ಘ ಕಾಲ ಅಧಿಕಾರದಲ್ಲಿದ್ದ ಎಡ ಪಕ್ಷಗಳು, ಕೇರಳ ಮತ್ತು ತ್ರಿಪುರಾದಲ್ಲಿ ಕೂಡ ಅಧಿಕಾರ ನಡೆಸಿದ್ದವು. ಆದರೆ 15 ವರ್ಷಗಳ ಹಿಂದೆ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬರುವ ಮೂಲಕ, ಎಡ ಪಕ್ಷಗಳ ಭದ್ರ ಕೋಟೆಯಾಗಿದ್ದ ಪಶ್ಚಿಮ ಬಂಗಾಳ, ಟಿಎಂಸಿ ಪಾಲಾಯಿತು. ನಂತರ ತ್ರಿಪುರಾದಲ್ಲಿ ಕೂಡ ಆಡಳಿತಾರೂಢ ಎಡಪಕ್ಷ ಅಧಿಕಾರ ಕಳೆದು ಕೊಂಡಿತು. 'ಕುಟುಕು ಜೀವ' ಅನ್ನುವ ಹಾಗೆ ಕೇರಳದಲ್ಲಿ ಮಾತ್ರ ಅಧಿಕಾರದಲ್ಲಿತ್ತು. ಇದೀಗ ಅಲ್ಲಿಯೂ ಅಧಿಕಾರ ಕಳೆದುಕೊಂಡಿರುವ ಎಡ ಪಕ್ಷಗಳು, ಈಗ ದೇಶದ ಯಾವ ರಾಜ್ಯದಲ್ಲಿ ಕೂಡ:ಅಧಿಕಾರದಲ್ಲಿಲ್ಲ. ಜ್ಯೋತಿ ಬಸು, ಬುದ್ಧದೇವ ಭಟ್ಟಾಚಾರ್ಯ, ಹರ್ ಕಿಶನ್ ಸಿಂಗ್ ಸುರ್ಜಿತ್, ಸೋಮನಾಥ ಚಟರ್ಜಿ ಮುಂತಾದ ಹಿರಿಯ ನಾಯಕರ ನಿಧನದ ನಂತರ, ಕಮ್ಯುನಿಸ್ಟ್ ಪಕ್ಷ ಒಂದು ರೀತಿಯಲ್ಲಿ ನಾಯಕತ್ವದ ಕೊರತೆ ಎದುರಿಸುತ್ತಿರಬಹುದು. ಕಮ್ಯುನಿಸ್ಟ್ ಪಕ್ಷಗಳು ಭಾರತೀಯ ರಾಜಕೀಯ ಚರಿತ್ರೆಯಲ್ಲಿ ತಮ್ಮದೇ ಆದ ಗಮನಾರ್ಹ ಪಾತ್ರ ವಹಿಸಿವೆ. ಕೇರಳ, ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ, ಎಡ ಪಕ್ಷಗಳು ತಮ್ಮದೇ ಆದ ಪಾತ್ರ ವಹಿಸಿದ್ದವು. ಶ್ರಮಿಕ ಮತ್ತು ಕಾರ್ಮಿಕ ವರ್ಗದ ಪ್ರತಿನಿಧಿಯಾಗಿ ಎಡ ಪಕ್ಷಗಳು ಸವೆಸಿರುವ ಹಾದಿ ಸುದೀರ್ಘವಾದದ್ದು. ಎಡ ಪಕ್ಷಗಳ ಈ ದಯನೀಯ ಸೋಲು ವಿಷಾದಕರ ವಾಗಿದೆ. ಭವಿಷ್ಯದಲ್ಲಿ ದೇಶದ ಯಾವುದೇ ರಾಜ್ಯದಲ್ಲಿ ಅವು ಮತ್ತೆ ಪುಟಿದೇಳುವ ಯಾವ ಮುನ್ಸೂಚನೆಯೂ ಇಲ್ಲ ಎಂಬುದು ಕೂಡ ಕಟು ಸತ್ಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅಮೂಲ್ಯ ನೆನಪುಗಳ ಪ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ



ಈ ಛಾಯಾಚಿತ್ರ ತೆಗೆದಿರುವ ಸ್ಥಳವನ್ನು ಸದ್ಯ ನಿಖರವಾಗಿ ಗುರುತಿಸಲಾಗಿಲ್ಲ. ಜೊತೆಗೆ ದಿನಾಂಕದ ಬಗ್ಗೆಯೂ ಮಾಹಿತಿ ಲಭ್ಯವಾಗಿಲ್ಲ. ಎಡಭಾಗದಲ್ಲಿ ಕುಳಿತಿರುವವರು ಅಂದಿನ ಕಪುರ್ತಲಾ ಸಂಸ್ಥಾನದ ಕರ್ನಲ್ ಮಹಾರಾಜ ಸರ್ ಜಗತ್ಜಿತ್ ಸಿಂಗ್ ಸಾಹಿಬ್ ಬಹದ್ದೂರ್ (1872–1949) ಆಗಿದ್ದು, ಇವರು ಈ ಸಂಸ್ಥಾನದ ಕೊನೆಯ ಮಹಾರಾಜರಾಗಿದ್ದರು (ಅಕ್ಟೋಬರ್–1877ರಿಂದ 1949). ಅವರು ಪ್ರಪಂಚ ಪರ್ಯಟನೆಯಲ್ಲಿ ಆಸಕ್ತಿ ಹೊಂದಿದ್ದರು ಹಾಗೂ ಅವರು ಸೌಂದರ್ಯ ಪ್ರಜ್ಞೆವುಳ್ಳವರಾಗಿದ್ದರು. ಅಲ್ಲದೆ, ಫ್ರಾನ್ಸ್ ಸಂಸ್ಕೃತಿ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು. ಅವರ ಎಡಭಾಗದಲ್ಲಿ ಕುಳಿತಿರುವವರು ರಾಣಿ ಪ್ರೇಮ್ ಕೌರ್ ಸಾಹಿಬಾ (ಮೂಲ ಹೆಸರು; ನೀ ಅನಿತಾ ಡೆಲ್ಗಾಡೊ, 1890–1962) ಆಗಿದ್ದು, ಇವರು ಮಹಾರಾಜ ಜಗತ್ಜಿತ್ ಸಿಂಗ್ ಸಾಹಿಬ್ ಬಹದ್ದೂರ್ ಅವರ ಐದನೇ ಪತ್ನಿ. 1908ರಲ್ಲಿ ಪ್ಯಾರಿಸ್‌ನಲ್ಲಿ ಇವರ ವಿವಾಹವಾಗಿತ್ತು. ರಾಣಿ ಪ್ರೇಮ್ ಕೌರ್ ಸಾಹಿಬಾ, ಸ್ಪ್ಯಾನಿಷ್ ಫ್ಲಮೆಂಕೊ ನೃತ್ಯ ಪ್ರಕಾರದ ನೃತ್ಯಗಾರ್ತಿ ಮತ್ತು ಗಾಯಕಿಯೂ ಆಗಿದ್ದರು. ಇವರ ಎಡಬದಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಇದ್ದಾರೆ. ಇಬ್ಬರೂ ಮಹಾರಾಜರ ಕೋಟಿನ ಜೇಬಿನಿಂದ ಸರ ತೂಗುತಿರುವುದನ್ನು ಕಾಣಬಹುದು. ಸರದ ಮತ್ತೊಂದು ತುದಿಯಲ್ಲಿ ಬಹುಶಃ ಜೇಬು ಗಡಿಯಾರ ಇರಬಹುದು. ಮಧ್ಯದಲ್ಲಿ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ನಿಂತಿರುವುದನ್ನು ಕಾಣಬಹುದು. ಜೊತೆಗೆ ಅವರ ಪಕ್ಕದದಲ್ಲಿ ಇಬ್ಬರು ಅಪರಿಚಿತ ಗಣ್ಯರು ಇದ್ದಾರೆ. 1920 ಮತ್ತು 30ರ ದಶಕದಲ್ಲಿ ಶ್ರೀಮಂತ ಹಿನ್ನೆಲೆಯ ಯುವಕರು ಪ್ರತಿಷ್ಠೆಯ ಸಂಕೇತವಾಗಿ ದಂತ, ಖಡ್ಗಮೃಗದ ಕೊಂಬು, ಬೆಳ್ಳಿ ಇತ್ಯಾದಿಗಳಿಂದ ಕೂಡಿದ ಹಿಡಿಕೆಗಳನ್ನು ಹೊಂದಿರುವ ವಾಕಿಂಗ್ ಸ್ಟಿಕ್‌ಗಳನ್ನು ಹಿಡಿದುಕೊಳ್ಳುವ ವಾಡಿಕೆ ಇದ್ದಿತು. ಈ ಚಿತ್ರದಲ್ಲಿ ಐವರು ಮಹನೀಯರಲ್ಲಿ ನಾಲ್ವರು ವಾಕಿಂಗ್ ಸ್ಟಿಕ್‌ಗಳನ್ನು ಹಿಡಿದಿರುವುದನ್ನು ನೋಡಬಹುದು. ಈ ಛಾಯಾಚಿತ್ರ ತೆಗೆದ ನಂತರದ ದಿನಗಳಲ್ಲಿ ರಾಣಿ ಪ್ರೇಮ್ ಕೌರ್ ಸಾಹಿಬಾ ಮಹಾರಾಜರಿಂದ ವಿಚ್ಛೇದನ ಪಡೆದರು. ಫ್ರಾನ್ಸ್‌ಗೆ ತೆರಳುವಾಗ ಮಾರ್ಗ ಮಧ್ಯೆ ಮುಳುಗಿದ ಎಸ್‌ಎಸ್ ಪರ್ಷಿಯಾ ಹಡಗಿನಲ್ಲಿ ಭಾರತದಿಂದ ಸಾಗಿಸುತ್ತಿದ್ದ ಇವರ ಅಮೂಲ್ಯ ಆಭರಣಗಳು ಸೇರಿದಂತೆ ಅವರ ವೈಯಕ್ತಿಕ ಪದಾರ್ಥಗಳಿದ್ದವು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಆರೋಗ್ಯದ ಬಗೆಗೆ ಚಿಂತನೆಗಳು

ಆರೋಗ್ಯವೇ ಭಾಗ್ಯ (Health is wealth) ಎಂಬ ಮಾತನ್ನು ಬಾಲ್ಯದಿಂದ ಕೇಳಿದ್ದೇವೆ. ಆರೋಗ್ಯವಿಲ್ಲದವನ ಧನ, ಕನಕ, ಅಧಿಕಾರ ಎಲ್ಲವೂ ವ್ಯರ್ಥವೇ. ಭಾರತ ದೇಶದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಗುರುತಿಸಿದ್ದರು. ಅವುಗಳಲ್ಲಿ ಯಾವುದನ್ನೂ ಆರೋಗ್ಯವಿಲ್ಲದವನು ಗಳಿಸಲಾರನು. ಏಕೆಂದರೆ ಧರ್ಮದ ಸಾಧನವಾದ ಯಜ್ಞಯಾಗಗಳನ್ನು ಮಾಡುವುದಕ್ಕೆ, ಸಮಾಜ ಸೇವೆಯನ್ನು ಸಲ್ಲಿಸುವುದಕ್ಕೆ, ಜಪ–ತಪಸ್ಸುಗಳನ್ನು ಆಚರಿಸುವುದಕ್ಕೆ ಆರೋಗ್ಯ ಅತ್ಯಾವಶ್ಯಕ. ಅರ್ಥವೆಂದರೆ ವಾಣಿಜ್ಯ ವ್ಯಾಪಾರಾದಿಗಳಿಂದ, ಉದ್ಯೋಗ ದಿಂದ ಅಥವಾ ಉದ್ಯಮದಿಂದ ಹಣದ ಸಂಪಾದನೆ. ರೋಗದಿಂದ ನರಳುತ್ತಿರುವವನು ಅವನ್ನು ಮಾಡುವುದಾದರೂ ಹೇಗೆ? ಕಾಮವೆಂದರೆ ನಾನಾ ಇಷ್ಟಾರ್ಥಗಳನ್ನು ಶರೀರದ ಬಯಕೆಗಳನ್ನು ತೀರಿಸಿಕೊಳ್ಳುವುದು. ರೋಗದಿಂದ ಬಳಲಿದವನಿಗೆ ಇದು ಅಸಾಧ್ಯ. ಮೋಕ್ಷವನ್ನು ಪಡೆಯಲು ಗುರು ಶುಶ್ರೂಷೆಯನ್ನು ಮಾಡಿ ಜ್ಞಾನವನ್ನು ಪಡೆಯಬೇಕು. ತಪಸ್ಸಿನಿಂದ ಭಗವತ್ಸಾಕ್ಷಾತ್ಕಾರವನ್ನು ಹೊಂದಬೇಕು. ರೋಗವು ಬುದ್ಧಿಶಕ್ತಿಯನ್ನು ದೇಹದ ಸಾಮರ್ಥ್ಯವನ್ನು ಕಿತ್ತುಕೊಂಡಾಗ ಇದೆಲ್ಲ ಅಸಂಭವ. ಆದ್ದರಿಂದಲೇ ಪ್ರಾಚೀನರು ಹೇಳಿರುವುದು –

'ಧರ್ಮಾರ್ಥಕಾಮಮೋಕ್ಷಾಣಾಮಾರೋಗ್ಯಂ ಮೂಲಕಾರಣಮ್'

(ಧರ್ಮ, ಅರ್ಥ, ಕಾಮ, ಮೋಕ್ಷಗಳಿಗೆ ಮೂಲ ಕಾರಣ ಆರೋಗ್ಯ) ಎಂದು. ಜೀವಲೋಕದಲ್ಲಿ ರೋಗಮುಕ್ತವಾದ ಯಾವ ಪ್ರಾಣಿಯಾಗಲಿ, ಪಕ್ಷಿಯಾಗಲಿ, ಜಲಚರವಾಗಲಿ ಇಲ್ಲ. ಯಾವ ಯಾವ ಪ್ರಾಣಿಗೆ ಯಾವ ರೀತಿಯ ರೋಗಗಳು ಬಾಧೆಯನ್ನು ಕೊಡುತ್ತವೆ ಎಂಬುದು ಅವುಗಳನ್ನು ಸಾಕಿದವರಿಗೇ ಗೊತ್ತು. ಆ ಕಾರಣದಿಂದಲೇ ನಾನಾ ಪಶು ವೈದ್ಯರಿದ್ದಾರೆ. ಅಷ್ಟೇ ಏಕೆ? ಸಸ್ಯಗಳಿಗೂ ನಾನಾ ರೋಗಗಳು, ಕಾಯಿಲೆಗಳು ಬರುತ್ತವೆ. ಹೀಗಿರುವಾಗ ಮನುಷ್ಯರ ಬಗೆಗೆ ಹೇಳುವುದೇನಿದೆ? ನೂರಾರು ಕಾರಣಗಳಿಂದ ಮಾನವರಿಗೆ ಬರುವ ರೋಗಗಳು ಸಾವಿರಾರು. ಆದರೂ ನಾವು ಅನೇಕ ವರ್ಷ ಬದುಕಿರುವುದಕ್ಕೆ ಕಾರಣ ಅವುಗಳ ಲಕ್ಷಣಗಳನ್ನು ತಿಳಿದು ಪರಿಹಾರವನ್ನು, ಚಿಕಿತ್ಸೆಯನ್ನು ಕೊಡಬಲ್ಲ ವೈದ್ಯರಿರುವುದರಿಂದ ಮಾತ್ರ ಹಾಗೆ ಇಲ್ಲದಿದ್ದರೆ ಭೂಮಿಯ ಮೇಲೆ ಇಷ್ಟು ಮಾನವರು ಬದುಕಿರುವುದು ಊಹಾತೀತವೇ ಆಗುತ್ತಿತ್ತು. ಈ ಕಾರಣದಿಂದಲೇ ನಮ್ಮ ದೇಶದಲ್ಲಿ ವೈದ್ಯನನ್ನು ಭಗವಂತನೆಂದೂ ಭಗವಂತನನ್ನು ವೈದ್ಯನೆಂದೂ ಕರೆದಿದ್ದಾರೆ. ವೈದ್ಯೋ ನಾರಾಯಣೋ ಹರಿಃ, ವೈದ್ಯನಾಥೇಶ್ವರ ಮುಂತಾದ ಮಾತುಗಳನ್ನಿಲ್ಲಿ ಸ್ಮರಿಸಬಹುದು. ನಮಗೆ ಬಂದಂತೆ ದೇವತೆಗಳಿಗೂ ರೋಗಗಳು ಬರುತ್ತಿದ್ದು ವೇನೊ? ಅಶ್ವಿನೀ ದೇವತೆಗಳು ಸ್ವರ್ಗಲೋಕದ ವೈದ್ಯರೆಂದು ಪುರಾಣಗಳಲ್ಲಿ ಹೇಳಲಾಗಿದೆ. ವಿಷ್ಣುವಿನ ಅವತಾರ ಧನ್ವಂತರಿ ಎಂಬುದೂ ಪುರಾಣಪ್ರಸಿದ್ಧ.

ರೋಗಿಗಳನ್ನು ರೋಗಮುಕ್ತರನ್ನಾಗಿ ಮಾಡುವುದಕ್ಕಿಂತ ದೊಡ್ಡ ಪುಣ್ಯ ಕಾರ್ಯ ಬೇರೊಂದಿಲ್ಲ. ರೋಗಿಯ ಪ್ರಾಣವನ್ನು ಉಳಿಸುವುದು, ಅವನ ನೋವನ್ನು ನಿವಾರಿಸುವುದಕ್ಕಾಗಿ ಪ್ರಯತ್ನಿಸುವುದು ಯಜ್ಞಕ್ಕೆ ಸಮಾನ.

ಅನ್ನದೋ ಜಲದಶ್ಚೈವ ಆತುರಸ್ಯ ಚಿಕಿತ್ಸಕಃ।
ತ್ರಯಸ್ತೇ ಸ್ವರ್ಗಮಾಯಾಂತಿ ವಿನಾ ಯಜ್ಞೇನ ಭಾರತ॥

ಹಸಿದವನಿಗೆ ಅನ್ನವನ್ನು ನೀಡಿದವನು, ಬಾಯಾರಿದವನಿಗೆ ನೀರನ್ನು ಕೊಟ್ಟವನು, ರೋಗಿಗೆ ಚಿಕಿತ್ಸೆ ಮಾಡಿದವನು – ಈ ಮೂವರೂ ಯಾವ ಯಜ್ಞವನ್ನೂ ಮಾಡದೆ ಇದ್ದರೂ ಸ್ವರ್ಗದಲ್ಲಿ ಸ್ಥಾನವನ್ನು ಪಡೆಯುತ್ತಾರೆ ಎಂಬುದು ಮಹಾಭಾರತದ ಮಾತು.

ಯಾವ ಅಂಗಕ್ಕೆ ರೋಗವಿಲ್ಲ? ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಐದು ಜ್ಞಾನೇಂದ್ರಿಯಗಳಿಗೂ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳಿಗೂ ಬೇರೆ ಬೇರೆ ರೋಗಗಳಿವೆ. ಒಳಗಿನ ಅಂಗಗಳಾದ ಹೃದಯ, ಶ್ವಾಸಕೋಶ, ಯಕೃತ್, ಕರುಳು, ಮೂತ್ರಪಿಂಡ, ಮಿದುಳು, ಎಲ್ಲಕ್ಕೂ ನಾನಾ ರೋಗಗಳಿವೆ. ಕಣ್ಣಿಗೇ ಕಾಣದ ಮನಸ್ಸಿಗೂ ರೋಗವಿದೆ. ಬುದ್ಧಿಮಾಂದ್ಯ ಮಹಾರೋಗವಾಗಿ ಮಾನವ ಕುಲವನ್ನು ಕಾಡುತ್ತಿದೆ. ಹೀಗಿರುವಾಗ ಪೂರ್ಣ ಆರೋಗ್ಯವಂತ ಮನುಷ್ಯನು ದೊರಕುವುದೇ ಕಷ್ಟ.

ಆರೋಗ್ಯವಂತನೆಂದರೆ ಯಾರು?

ಆರೋಗ್ಯವಂತನನ್ನು ಶಾಸ್ತ್ರವು ಸ್ವಸ್ಥನೆಂದು ಕರೆದಿದೆ. ಅವನ ಲಕ್ಷಣ

ಸಮಧಾತುಃ ಸಮಾಗ್ನಿಶ್ಚ ಸಮ ಮೂತ್ರ ಮಲಕ್ರಿಯಃ।
ಪ್ರಸನ್ನಾತ್ಮೇಂದ್ರಿಯಮನಾಃ ಸ್ವಸ್ಥ ಇತ್ಯಭಿಧೀಯತೇ॥

ಶರೀರದ ಘಟಕಗಳಾದ ಮಾಂಸ, ಮೇದಸ್, ಮಜ್ಜಾ, ಅಸ್ಥಿ, ರಕ್ತ ಇತ್ಯಾದಿಗಳು ಸಮಸ್ಥಿತಿಯಲ್ಲಿರಬೇಕು. ಶರೀರದೊಳಗಿನ ಜಠರಾಗ್ನಿಯೂ ಸಮವಾಗಿರಬೇಕು. ಮಲಮೂತ್ರಗಳ ಉತ್ಪತ್ತಿ, ವಿಸರ್ಜನೆ ಸರಿಯಾದ ಕಾಲದಲ್ಲಿ ನಡೆಯುತ್ತಿರಬೇಕು. ಆತ್ಮವೂ, ಇಂದ್ರಿಯಗಳೂ, ಮನಸ್ಸೂ ಪ್ರಸನ್ನವಾಗಿರಬೇಕು. ಹಾಗಿದ್ದರೆ ವ್ಯಕ್ತಿ ಸ್ವಸ್ಥನೆನ್ನಬಹುದು.

ವ್ಯಕ್ತಿಯು ಸ್ವಸ್ಥನಾಗಿರಬೇಕಾದರೆ ಅವನು ಸೇವಿಸುವ ಗಾಳಿ, ನೀರು ಮತ್ತು ಆಹಾರ ಶುದ್ಧವಾಗಿರಬೇಕು. ಆದರೆ ದುರ್ದೈವದಿಂದ ಈಗ ಯಾವುದೂ ಶುದ್ಧವಾಗಿಲ್ಲ. ಒಂದೊಂದರಲ್ಲೂ ಮಾಲಿನ್ಯ ತುಂಬಿದೆ. ನಗರಗಳಲ್ಲಿ ಪೆಟ್ರೋಲ್ ವಾಹನಗಳ ಸಂಚಾರ ಅಧಿಕವಾಗಿರುವುದರಿಂದ, ಮರಗಳ ಸಂಖ್ಯೆ ಕ್ಷೀಣಿಸಿರುವುದರಿಂದ ಮತ್ತು ಕೈಗಾರಿಕೆಗಳು ಹೆಚ್ಚಾಗಿರುವುದರಿಂದ ಗಾಳಿ ಅಶುದ್ಧವಾಗುತ್ತಿದೆ. ನಗರಗಳ ಮತ್ತು ಗ್ರಾಮಗಳ ತ್ಯಾಜ್ಯವೆಲ್ಲ ಕೆರೆಗಳಿಗೂ ನದಿಗಳಿಗೂ ಸೇರುತ್ತಿರುವುದರಿಂದ ಜಲಮಾಲಿನ್ಯ ಹೆಚ್ಚುತ್ತಿದೆ. ರೈತರು ಈಗ ಪ್ರಕೃತಿಗೆ ಹಿತವಾದ ರೀತಿಯಲ್ಲಿ ಬೆಳೆ ಬೆಳೆಯುವುದು ಸಾಧ್ಯವಾಗುತ್ತಿಲ್ಲ. ಕೃತಕ ಗೊಬ್ಬರಗಳನ್ನು ಕ್ರಿಮಿನಾಶಕಗಳನ್ನೂ ಅವರು ಹೆಚ್ಚು ಬಳಸುತ್ತಿದ್ದಾರೆ. ಇದರಿಂದ ಜನರು ತಿನ್ನುವ ಆಹಾರವೆಲ್ಲ ಕಲುಷಿತವಾಗಿದೆ. ಗಾಳಿ, ನೀರು, ಆಹಾರ ಕಲುಷಿತವಾಗಿರುವಾಗ ಜನರು ಆರೋಗ್ಯವಂತರಾಗಿರಲು ಹೇಗೆ ಸಾಧ್ಯ?

ಜೀವನ ಶೈಲಿ ಜನರ ಆರೋಗ್ಯದಲ್ಲಿ ಅವರ ಜೀವನಶೈಲಿಯೂ ಮುಖ್ಯ ಪಾತ್ರ ವಹಿಸುತ್ತದೆ. ಇಂದಿನ ಜೀವನ ಶೈಲಿಯಲ್ಲಿ ಶರೀರ ಶ್ರಮಕ್ಕೆ, ಬೆವರಿಳಿಸಿ ದುಡಿಯುವುದಕ್ಕೆ ಸ್ಥಾನವಿಲ್ಲ. ಎಲ್ಲರೂ ನಿರಾಯಾಸವಾಗಿ, ಸುಖದಿಂದ ಬದುಕಲು ಅಪೇಕ್ಷಿಸುತ್ತಾರೆ. ಯಾರೂ ನಡೆಯಲು ಇಷ್ಟ ಪಡುವುದಿಲ್ಲ. ವಾಹನದಲ್ಲಿ, ಅದೂ ನಾಲ್ಕು ಚಕ್ರಗಳ ವಾಹನದಲ್ಲಿ ಬಂದವರಿಗೆ ಮಾತ್ರ ಸಮಾಜದಲ್ಲಿ ಗೌರವ. ಈ ಕಾರಣದಿಂದ ಮಾನವನ ಶರೀರಕ್ಕೆ ವ್ಯಾಯಾಮವು ಇಲ್ಲವಾಗಿದೆ. ವ್ಯಾಯಾಮವಿಲ್ಲದಿದ್ದರೂ ಆಹಾರವನ್ನು ಅಧಿಕವಾಗಿ ಸೇವಿಸುವುದರಿಂದ ದೇಹದಲ್ಲಿ ಸ್ಥೌಲ್ಯ (ಬೊಜ್ಜು) ಉಂಟಾಗುತ್ತದೆ. ಆಗ ಶರೀರ ರೋಗಗಳ ತವರು ಮನೆಯಾಗುತ್ತದೆ.

ಸ್ಥೌಲ್ಯಾದೇವ ವರಂ ಕಾರ್ಶ್ಯಂ ನಾಸ್ತಿ ಸ್ಥೌಲ್ಯಸ್ಯ ಭೇಷಜಮ್

ಎಂಬುದು ಶಾಸ್ತ್ರ ವಾಕ್ಯ. ಸ್ಥೂಲವಾಗಿರುವುದಕ್ಕಿಂತ ಕೃಶವಾಗಿರುವುದೇ ಲೇಸು. ಬೊಜ್ಜಿಗೆ ಔಷಧವಿಲ್ಲ ಎಂದು ಅದರ ತಾತ್ಪರ್ಯ. ಜೀವನದ ವರ್ಷಗಳನ್ನು ಸಾರ್ಥಕವಾಗಿ ಕಳೆಯಲು ರೋಗವು ಬರದಂತೆ ನೋಡಿಕೊಳ್ಳುವುದು ಅತ್ಯುತ್ತಮ. ಇದನ್ನೇ Prevention is better than cure ಎಂಬ ಆಂಗ್ಲಗಾದೆಯೂ ತಿಳಿಸಿದೆ. ಹಾಗೆ ಮಾಡಲು ಆಗದೆ ರೋಗವು ಬಂದೇ ಬಿಟ್ಟಾಗ ಅದನ್ನು ಗುಣಪಡಿಸಲು ವೈದ್ಯರು ಬೇಕು. ಆದರೆ ವೈದ್ಯರು ನಮ್ಮ ಆಯಸ್ಸನ್ನು ಹೆಚ್ಚಿಸುತ್ತಾರೆ ಎಂದು ನಿರೀಕ್ಷಿಸಬಾರದು.

ವ್ಯಾಧೇಸ್ತತ್ತ್ವಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ।
ಏತದ್ ವೈದ್ಯಸ್ಯ ವೈದ್ಯತ್ವಂ ನ ವೈದ್ಯಃ ಪ್ರಭುರಾಯುಷಃ॥

ವ್ಯಾಧಿಯ ಸ್ವರೂಪವೇನು, ಅದರ ಕಾರಣವೇನು, ಅದನ್ನು ಪರಿಹರಿಸಲು ಯಾವ ಔಷಧವನ್ನು ಕೊಡಬೇಕು ಎಂಬ ತತ್ವಜ್ಞಾನ ವೈದ್ಯನಿಗಿರುತ್ತದೆ. ರೋಗಿಯ ನೋವನ್ನು ಅವನು ತಗ್ಗಿಸಬಲ್ಲ ಅಥವಾ ನಿವಾರಿಸಬಲ್ಲ. ಆದರೆ ಆಯಸ್ಸನ್ನು ಕೊಡುವ ಪ್ರಭು ಅವನಲ್ಲ ಎಂಬುದನ್ನು ರೋಗಿಯ ಬಂಧು ಮಿತ್ರರು ಅರ್ಥ ಮಾಡಿಕೊಳ್ಳಬೇಕು. ಯೋಗ್ಯವಾದ, ಶಕ್ತವಾದ ಔಷಧವನ್ನು ಕೊಟ್ಟರೂ ಆಯಸ್ಸಿಲ್ಲದವನಲ್ಲಿ ಫಲಿಸುವುದಿಲ್ಲ.

ಔಷಧಂ ಮಂಗಲಂ ಮಂತ್ರಮನ್ಯಾಶ್ಚ ವಿವಿಧಾಃ ಕ್ರಿಯಾಃ।
ಯಸ್ಯಾಯುಸ್ತಸ್ಯ ಸಿಧ್ಯಂತಿ ನ ಸಿಧ್ಯಂತಿ ಗತಾಯುಷಿ॥

ಔಷಧ, ಮಂಗಳ ಕಾರ್ಯ, ಮಂತ್ರ ಮತ್ತು ಆಶೀರ್ವಾದ ಮುಂತಾದ ಕ್ರಿಯೆಗಳು ಆಯುಸ್ಸು ಗಟ್ಟಿಯಾಗಿದ್ದವನಲ್ಲಿ ಫಲಿಸುತ್ತವೆ. ಆಯುಸ್ಸಿಲ್ಲದವನಲ್ಲಿ ಫಲ ನೀಡುವುದಿಲ್ಲ ಎಂದೇ ಶಾಸ್ತ್ರವು ತಿಳಿಸಿದೆ. ಆದ್ದರಿಂದ ಚಿಕಿತ್ಸೆ ನಿರೀಕ್ಷಿತ ಫಲವನ್ನು ಕೊಡಲಿಲ್ಲವೆಂದು ವೈದ್ಯರನ್ನು ನಿಂದಿಸಬಾರದು.

ವೈದ್ಯರು ಚಿಕಿತ್ಸೆಯನ್ನು ಮಾಡಿದಾಗ ಎಲ್ಲರಿಂದ ಒಂದೇ ವಿಧವಾದ ಪ್ರತಿಫಲವನ್ನು ನಿರೀಕ್ಷಿಸಬಾರದು. ಶ್ರೀಮಂತರು ಹಣವನ್ನು ಕೊಡಬಹುದು. ಬಡವರು ಕೃತಜ್ಞತೆಯನ್ನು ವ್ಯಕ್ತಪಡಿಸಬಹುದು. ಎಷ್ಟೋ ಸಂದರ್ಭಗಳಲ್ಲಿ ಬೇರೆ ಯಾವ ಫಲವಿಲ್ಲದಿದ್ದರೂ ಔಷಧದ ಶಕ್ತಿಯ ಪರೀಕ್ಷೆಯಿಂದ ವೈದ್ಯನ ಅನುಭವವು ಪರಿಪಕ್ವಗೊಳ್ಳುವುದೇ ಫಲವಾಗುತ್ತದೆ.

ಕ್ವಚಿದ್ ಧರ್ಮಃ ಕ್ವಚಿನ್ ಮೈತ್ರೀ ಕ್ವಚಿದರ್ಥಃ ಕ್ವಚಿದ್ ಯಶಃ।
ಕರ್ಮಾಭ್ಯಾಸಃ ಕ್ವಚಿಚ್ಚೇತಿ ಚಿಕಿತ್ಸಾ ನಾಸ್ತಿ ನಿಷ್ಫಲಾ॥

ಕೆಲವು ಸಂದರ್ಭಗಳಲ್ಲಿ ಚಿಕಿತ್ಸೆ ಮಾಡಿ ಒಬ್ಬನ ಪ್ರಾಣವನ್ನು ಉಳಿಸಿದ್ದರಿಂದ ವೈದ್ಯನಿಗೆ ಧರ್ಮಲಾಭ ಆಗಬಹುದು. ಸಜ್ಜನನಿಗೆ ಚಿಕಿತ್ಸೆ ಮಾಡಿ ಸಫಲವಾದಾಗ ಆ ವ್ಯಕ್ತಿಯ ಸ್ನೇಹವೇ ಫಲ. ಕೆಲವು ಸಂದರ್ಭಗಳಲ್ಲಿ ಚಿಕಿತ್ಸಿತರಾದ ರಾಜಾದಿಗಳಿಂದ ವಿಪುಲವಾದ ಹಣ ಸಿಕ್ಕಬಹುದು. ಯಾರಿಗೋ ಚಿಕಿತ್ಸೆ ಮಾಡಿದಾಗ, ಇಂತಹ ಮಹಾವ್ಯಕ್ತಿಯ ವೈದ್ಯ ಎಂಬ ಕೀರ್ತಿಯೇ ಫಲ. ಕೆಲವು ಸನ್ನಿವೇಶದಲ್ಲಿ ಚಿಕಿತ್ಸೆಯ ಅಭ್ಯಾಸ ಬಲಗೊಳ್ಳುವುದೇ ಫಲವಾಗಬಹುದು. ಹೀಗೆ ಚಿಕಿತ್ಸೆ ಎಂಬುದು ಒಂದಲ್ಲ ಒಂದು ಫಲವನ್ನು ಕೊಡುವುದರಿಂದ ನಾನು ಮಾಡಿದ ಚಿಕಿತ್ಸೆ ನಿಷ್ಫಲವಾಯಿತು ಎಂದು ವೈದ್ಯನು ಎಂದೂ ಭಾವಿಸಬಾರದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬೆಂಗಳೂರಲ್ಲಿ ಜೋಸ್ ಅಲುಕ್ಕಾಸ್‌ನ ಅತ್ಯಾಕರ್ಷಕ ಸಿಗ್ನೇಚರ್ ಜ್ಯುವೆಲರಿ ಶೋ



ಬೆಂಗಳೂರಿನ ಡಿ ಕಿನ್ಸನ್ ರಸ್ತೆಯಲ್ಲಿರುವ ಜೋಸ್ ಅಲುಕ್ಕಾಸ್ ಶೋ ರೂಮ್‌ನಲ್ಲಿ 'ಸಿಗ್ನೇಚರ್ ಜ್ಯುವೆಲರಿ ಶೋ' ವಿಶ್ವ ಮಟ್ಟದ ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಚಾಲನೆ ದೊರಕಿದ ಸಂದರ್ಭ.

ಬೆಂಗಳೂರು, ಮೇ 5– ಉತ್ತಮ ಗುಣಮಟ್ಟ ಹಾಗೂ ನವೀನತೆಯ ಟ್ರೆಂಡಿ ಆಭರಣಗಳಿಗೆ ಹೆಸರುವಾಸಿಯಾಗಿರುವ ವಿಶ್ವಾಸಾರ್ಹ ಸಂಸ್ಥೆ ಜೋಸ್ ಅಲುಕ್ಕಾಸ್, ತನ್ನ ಡಿಕಿನ್ಸನ್ ರಸ್ತೆಯಲ್ಲಿರುವ ಶೋರೂಮ್‌ನಲ್ಲಿ 'ಸಿಗ್ನೇಚರ್ ಜ್ಯುವೆಲರಿ ಶೋ' ವಿಶ್ವಮಟ್ಟದ ಚಿನ್ನಾಭರಣಗಳ ಪ್ರದರ್ಶನ ಮತ್ತು ಮಾರಾಟವನ್ನು ಮೇ 24ರವರೆಗೆ ಆಯೋಜಿಸಿದೆ.

ಈ ಪ್ರದರ್ಶನದಲ್ಲಿ ಗ್ರಾಹಕರು ಜೋಸ್ ಅಲುಕ್ಕಾಸ್‌ನ ಅತ್ಯಾಕರ್ಷಕವಾದ ನವೀನ ಚಿನ್ನಾಭರಣಗಳ ಸಂಗ್ರಹವನ್ನು ಕಣ್ತುಂಬಿಕೊಂಡು, ಖರೀದಿಸಬಹುದಾಗಿದೆ. ದಿನನಿತ್ಯ ಬಳಕೆ ಜೊತೆಗೆ ಸಮಾರಂಭಗಳು ಸೇರಿದಂತೆ ವಿಶೇಷ ಸಂದರ್ಭಗಳಲ್ಲಿ ಧರಿಸುವಂತಹ ವಿವಿಧ ವಿನ್ಯಾಸದ ಆಭರಣಗಳು ಇಲ್ಲಿ ಲಭ್ಯವಿವೆ.

ಅತ್ಯಂತ ನಿಖರತೆಯಿಂದ ತಯಾರಿಸಲಾಗಿರುವ ಪ್ರತಿಯೊಂದು ಆಭರಣವೂ ವೈಶಿಷ್ಟ್ಯಪೂರ್ಣ ಹಾಗೂ ಸಮಕಾಲೀನ ವಿನ್ಯಾಸದಿಂದ ಕೂಡಿವೆ. ಸೂಕ್ಷ್ಮವಾಗಿ ರೂಪುಗೊಂಡ ಹಾರಗಳು, ಕಿವಿಯೋಲೆಗಳು ಮತ್ತು ವಿಶೇಷವಾಗಿ ವಿನ್ಯಾಸಗೊಳಿಸಿದ ವಧುವಿನ ಸೆಟ್‌ಗಳು ಕಣ್ಮನ ಸೆಳೆಯುತ್ತಿವೆ.

'ಸಿಗ್ನೇಚರ್ ಜ್ಯುವೆಲರಿ ಶೋ' ಅಂಗವಾಗಿ ಗ್ರಾಹಕರಿಗೆ ವಿಶೇಷ ಆಫರ್‌ಗಳನ್ನು ನೀಡಲಾಗಿದ್ದು, ಚಿನ್ನದ ಮೇಕಿಂಗ್ ಚಾರ್ಜ್ ಮೇಲೆ ಮತ್ತು ವಜ್ರಾಭರಣಗಳ ಬೆಲೆಯಲ್ಲಿ ಶೇ.30 ರವರೆಗೆ ರಿಯಾಯಿತಿ ಪಡೆಯಬಹುದು. ಅಲ್ಲದೆ, ಹಳೆಯ 22 ಕ್ಯಾರೆಟ್ ಚಿನ್ನವನ್ನು ಹೊಸ ಟ್ರೆಂಡಿಂಗ್ ವಿನ್ಯಾಸಗಳೊಂದಿಗೆ ವಿನಿಮಯ ಮಾಡಿಕೊಳ್ಳುವ ಅವಕಾಶವಿದ್ದು, ಈ ವೇಳೆ 0% ವೇಸ್ಟೇಜ್ ಸೌಲಭ್ಯವೂ ಲಭ್ಯವಿದೆ. ಒಟ್ಟಾರೆ ಗ್ರಾಹಕರು ತಮಗಿಷ್ಟವಾದ ಶೈಲಿ ಹಾಗೂ ವಿನ್ಯಾಸದ ಆಭರಣಗಳನ್ನು ಖರೀದಿಸುವ ಸದಾವಕಾಶ ಕಲ್ಪಿತವಾಗಿದೆ.

ಸಿಗ್ನೇಚರ್ ಜ್ಯುವೆಲರಿ ಶೋ ಮೂಲಕ ಸಮಕಾಲೀನ ವಿನ್ಯಾಸಗಳು ಮತ್ತು ಸಾಂಪ್ರದಾಯಿಕ ಚಿನ್ನಾಭರಣಗಳ ನಡುವೆ ಸಮತೋಲನವನ್ನು ಪ್ರತಿಬಿಂಬಿಸುವ ಸಂಗ್ರಹ ಪ್ರದರ್ಶಿಸಲಾಗುತ್ತಿದೆ. ವಿವಿಧ ಸಂದರ್ಭಗಳಿಗೆ ಹೊಂದುವ, ಸೂಕ್ಷ್ಮವಾಗಿ ವಿನ್ಯಾಸಗೊಳಿಸಿದ ಹಾಗೂ ಕಾಲಾನುಸಾರ ಗ್ರಾಹಕರು ಮೆಚ್ಚುವಂತಹ ಆಭರಣಗಳನ್ನು ಒದಗಿಸುವುದೇ ನಮ್ಮ ಸಂಸ್ಥೆಯ ಧ್ಯೇಯ ಎಂದು ಜೋಸ್ ಅಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀಪಾಲ್ ಅಲುಕ್ಕಾಸ್ ತಿಳಿಸಿದ್ದಾರೆ.

ಮೈಸೂರಲ್ಲಿ ಕಟ್ಟಡದ ಮುಂಭಾಗದ ಗಿಡಮರಗಳಿಗೆ ಉಳಿಗಾಲವಿಲ್ಲ...!

ಮರೆಯಾಗುತ್ತವೆ ಎಂದು ನಿರ್ದಯವಾಗಿ ಕತ್ತರಿಸುವ ಪ್ರವೃತ್ತಿ ವ್ಯಾಪಕ!!





ಮೈಸೂರಿನ ಬಡಾವಣೆಯೊಂದರಲ್ಲಿ ಕಟ್ಟಡ ನಿರ್ಮಾಣದ ವೇಳೆ ಇದ್ದ ಮರಗಳು, ಕಾಮಗಾರಿ ಪೂರ್ಣಗೊಳ್ಳುವಷ್ಟರಲ್ಲಿ ಮಾಯವಾಗಿರುವುದನ್ನು ಚಿತ್ರಗಳಲ್ಲಿ ಕಾಣಬಹುದು.

ಮೈಸೂರು, ಮೇ 5– ವಾಣಿಜ್ಯ ಕಟ್ಟಡಗಳ ಎದುರಿನ ಗಿಡ–ಮರಗಳನ್ನು ಬುಡಸಹಿತ ಕಡಿಯುವ ಪ್ರವೃತ್ತಿ ಮೈಸೂರಿನಲ್ಲಿ ವ್ಯಾಪಕವಾಗುತ್ತಿದೆ.

ರಸ್ತೆ ಅಗಲೀಕರಣ, ಸೇತುವೆ ನಿರ್ಮಾಣ ಸೇರಿದಂತೆ ಒಂದಿಲ್ಲೊಂದು ಅಭಿವೃದ್ಧಿ ಕಾರ್ಯಗಳಿಗಾಗಿ ಸಾಲು ಸಾಲು ಮರಗಳನ್ನು ಕಡಿದುರುಳಿಸುವುದು ಒಂದೆಡೆಯಾದರೆ, ಮತ್ತೊಂದೆಡೆ ಕಟ್ಟಡಗಳ ಮುಂದಿರುವ ಗಿಡ–ಮರಗಳನ್ನು ಏಕಾಏಕಿ ಹನನ ಮಾಡಲಾಗುತ್ತಿದೆ.

ವಾಣಿಜ್ಯ ಕಟ್ಟಡಗಳ ಮುಂಭಾಗ ಗಿಡ–ಮರಗಳಿದ್ದರೆ ವ್ಯಾಪಾರ ವಹಿವಾಟಿಗೆ ತೊಂದರೆಯಾಗುತ್ತದೆ. ರಸ್ತೆಯಲ್ಲಿ ಸಂಚರಿಸುವವರಿಗೆ ಮಳಿಗೆಯ ಹೆಸರು, ಅಲ್ಲಿನ ವ್ಯಾಪಾರದ ಬಗ್ಗೆ ತಿಳಿಯುವುದಿಲ್ಲ. ಲಕ್ಷಾಂತರ, ಕೋಟ್ಯಾಂತರ ಖರ್ಚು ಮಾಡಿ ಸುಂದರವಾಗಿ ಕಟ್ಟಿಸಿರುವ ಕಟ್ಟಡ ಮರೆಯಾದರೆ ಚೆನ್ನಾಗಿರುವುದಿಲ್ಲ ಎಂಬ ತಪ್ಪು ತಿಳುವಳಿಕೆಯಿಂದ ಕಟ್ಟಡ ಮಾಲೀಕರು ಏಕಾಏಕಿ ಗಿಡ–ಮರಗಳ ಕಡಿಸುತ್ತಾರೆ. ಈ ಬಗ್ಗೆ ಅರಣ್ಯ ಇಲಾಖೆಯವರು ಗಮನಹರಿಸುವುದಿಲ್ಲ. ಇಂತಹ ಕೃತ್ಯಗಳು ಪರಿಸರವಾದಿಗಳ ಕಣ್ಣಿಗೂ ಬೀಳುವುದಿಲ್ಲ. ಸ್ಥಳೀಯರು ಹಲವು ಕಾರಣಗಳಿಂದ ಪ್ರಶ್ನಿಸುವ ಧೈರ್ಯ ಮಾಡುವುದಿಲ್ಲ ಎಂದು ನಾಗರಿಕರು ಬೇಸರ ವ್ಯಕ್ತಪಡಿಸಿದ್ದಾರೆ.

ಬೀಳುವ ಸ್ಥಿತಿಯಲ್ಲಿರುವ ಮರಗಳನ್ನು ಕತ್ತರಿಸುವುದಕ್ಕೂ ಅರಣ್ಯ ಇಲಾಖೆ ಅನುಮತಿ ಸುಲಭವಾಗಿ ಸಿಗುವುದಿಲ್ಲ. ಅರ್ಜಿ ನೀಡಿದ ನಂತರ ಅಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿ ನೀಡಿದ ಬಳಿಕವೇ ಮುಂದಿನ ಕೆಲಸ. ಅಷ್ಟರಲ್ಲಿ ತಿಂಗಳುಗಳೇ ಕಳೆಯುತ್ತವೆ. ಪರಿಸರದ ಉಳಿವಿಗೆ ಈ ಕಟ್ಟುನಿಟ್ಟಿನ ಕ್ರಮ ಅವಶ್ಯ. ಆದರೆ, ಇದು ಪ್ರಭಾವಿಗಳು ಹಾಗೂ ಹಣವಂತರಿಗೆ ಅನ್ವಯಿಸುವುದಿಲ್ಲ ಎಂಬುದು ದುರ್ದೈವದ ಸಂಗತಿ. ಕ್ಷುಲ್ಲಕ ಕಾರಣಕ್ಕೆ ಯಾರ ಅನುಮತಿಗೂ ಕಾಯದೆ ಗಾಳಿ–ನೆರಳು ನೀಡುವ ಗಟ್ಟಿಮುಟ್ಟಾದ ಗಿಡ–ಮರಗಳನ್ನು ನಿರ್ದಯವಾಗಿ ಕತ್ತರಿಸುತ್ತಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ತಮ್ಮ ಕಟ್ಟಡದ ಮುಂಭಾಗದಲ್ಲಿದ್ದ ಮರಗಳನ್ನು ಕಡಿದು, ಬಿಸಿಲಿದ್ದಾಗ ವಾಹನ ನಿಲ್ಲಿಸಲು ಅಕ್ಕ–ಪಕ್ಕದಲ್ಲಿರುವ ಗಿಡ–ಮರಗಳನ್ನು ಆಶ್ರಯಿಸುವ ಮನಃಸ್ಥಿತಿಯುಳ್ಳವರು ಸಾಕಷ್ಟಿದ್ದಾರೆ. ಮನುಷ್ಯನ ಈ ಸ್ವಾರ್ಥಕ್ಕೆ ಪಾಪದ ಗಿಡ–ಮರಗಳು ಬಲಿಯಾಗುತ್ತಿವೆ. ಇದಕ್ಕೆ ಕಡಿವಾಣ ಬೀಳದಿದ್ದರೆ ನೋಡನೋಡುತ್ತಲೇ ಮೈಸೂರು ಬರಡಾಗುತ್ತದೆ. ಕಟ್ಟಡಗಳಿಗೆ ಮರೆಯಾಗುತ್ತದೆ ಎಂದು ಕೊಡಲಿ ಹಾಕುವ ಗಿಡ–ಮರಗಳ ಹಂತಕರ ಬಗ್ಗೆ ಅರಣ್ಯ ಇಲಾಖೆಯೂ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪ್ರಜ್ಞಾವಂತ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಗೃಹ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಕೆ ಕಾರ್ಮಿಕ ಇಲಾಖೆಗೆ ಮನವಿ

ಮೈಸೂರು, ಮೇ5(ಎಸ್‌ಪಿಎನ್)– ಗೃಹ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಎಐಯುಟಿಯುಸಿ ಕಾರ್ಯಕರ್ತರು, ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಗೃಹ (ಮನೆಗೆಲಸದವರು) ಕಾರ್ಮಿಕರು ಸಮಾಜದ ಅತ್ಯಂತ ಅಸಂಘಟಿತ ಮತ್ತು ಶೋಷಿತ ವರ್ಗವಾಗಿದ್ದು, ಅವರ ಹಕ್ಕುಗಳ ರಕ್ಷಣೆಗಾಗಿ ರಾಜ್ಯ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಈ ಕೆಲಸದಲ್ಲಿ ತೊಡಗಿಸಿಕೊಂಡಿರುವವರಲ್ಲಿ ಹೆಚ್ಚಿನವರು ಮಹಿಳೆಯರು ಎಂಬುದು ಗಮನಾರ್ಹ. ಹಾಗಾಗಿ ಆರ್ಥಿಕ ಅಸಮಾನತೆ ಮತ್ತು ಅನಿವಾರ್ಯತೆಗಳಿಂದಾಗಿ ಅನೇಕ ಮಹಿಳೆಯರು, ಗೃಹ ಕಾರ್ಮಿಕರಾಗಿ ದಿನವಿಡೀ ದುಡಿಯುವ ಪರಿಸ್ಥಿತಿಯಿದೆ. ಇವರಲ್ಲಿ ಒಬ್ಬಂಟಿ ಮಹಿಳೆಯರು, 60 ವರ್ಷ ದಾಟಿದ ವಯೋವೃದ್ಧೆಯರು ಸೇರಿದ್ದಾರೆ ಎಂದು ಎಐಯುಟಿಯುಸಿ ಪಿ.ಎಸ್. ಸಂಧ್ಯಾ ಮನವಿ ಮಾಡಿದ್ದಾರೆ.

ಗೃಹ ಕಾರ್ಮಿಕರ ಹಿತರಕ್ಷಣೆಗಾಗಿ ಪ್ರತ್ಯೇಕ ಕಲ್ಯಾಣ ಮಂಡಳಿಯನ್ನು ರಚಿಸಬೇಕು. ಗೃಹ ಕಾರ್ಮಿಕರ ಬದುಕಿಗೆ ಸೂಕ್ತವಾದ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಖಾತ್ರಿಪಡಿಸಬೇಕು. ಇತರೆ ವಲಯದ ಕಾರ್ಮಿಕರಿಗೆ ನೀಡುವ ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಒದಗಿಸಬೇಕು. ಗೃಹ ಕಾರ್ಮಿಕರಿಗೆ ವಾರಕ್ಕೊಮ್ಮೆ ಕಡ್ಡಾಯ ವೇತನ ಸಹಿತ ರಜೆ ಘೋಷಿಸಬೇಕು. ಮಹಿಳಾ ಕಾರ್ಮಿಕರ ಆರೋಗ್ಯ ದೃಷ್ಟಿಯಿಂದ ತಿಂಗಳಿಗೊಂದು ದಿನ ಮುಟ್ಟಿನ ರಜೆ ನೀಡುವಂತೆ ಆದೇಶಿಸಬೇಕು ಎಂದು ಆಗ್ರಹಿಸಿದ್ದಾರೆ.

ಕೆಲಸದ ಸ್ಥಳಗಳಲ್ಲಿ ನಡೆಯುವ ಕಿರುಕುಳ, ಅವಮಾನ ಹಾಗೂ ಅಗೌರವ ಘಟನೆಗಳನ್ನು ತಡೆಯಲು ಮತ್ತು ದೂರು ದಾಖಲಿಸಲು ಸುರಕ್ಷಾ ಸಮಿತಿ ರಚಿಸಬೇಕು. ಗೃಹ ಕಾರ್ಮಿಕರಿಗೆ ಹಾಗೂ ಅವರ ಅವಲಂಬಿತ ಕುಟುಂಬದವರಿಗೆ ಉಚಿತ, ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ವೇಳೆ ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಎಐಯುಟಿಯುಸಿ ಅಧ್ಯಕ್ಷರಾದ ಯಶೋಧರ್, ಎಐಎಂಎಸ್‌ಎಸ್ ಜಿಲ್ಲಾ ಉಪಾಧ್ಯಕ್ಷೆ ಜಿ.ಎಸ್.ಸೀಮಾ ಉಪಸ್ಥಿತರಿದ್ದರು.

ನಾಳೆ ಜನ ಸಂಪರ್ಕ ಸಭೆ



ಜಿ.ಟಿ.ದೇವೇಗೌಡ

ಮೈಸೂರು, ಮೇ 5– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ರಾಮಕೃಷ್ಣನಗರ 'ಹೆಚ್' ಬ್ಲಾಕ್(58ನೇ ವಾರ್ಡ್)ನ ಸಾಲುಮರದ ತಿಮ್ಮಕ್ಕ ಉದ್ಯಾನದಲ್ಲಿ ಮೇ 7ರಂದು ಸಂಜೆ 5 ಗಂಟೆಗೆ 'ಜನ ಸಂಪರ್ಕ ಸಭೆ' ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರು, ಎಂಡಿಎ ಆಯುಕ್ತರು, ನಗರ ಪೊಲೀಸ್ ಆಯುಕ್ತರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿರಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಗಿದೆ.

ಭೂಮಿಪುತ್ರ ಚಂದನ್‌ಗೌಡರಿಗೆ ನೇಗಿಲಯೋಗಿ ಪ್ರಶಸ್ತಿ

ಮೈಸೂರು,ಮೇ5–ನಾಡಿನ ನೆಲ–ಜಲ ಹಾಗೂ ಅನ್ನದಾತರ ಪರವಾಗಿ ಶ್ರಮಿಸುತ್ತಿರುವ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅವರು 'ನೇಗಿಲಯೋಗಿ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕರ್ನಾಟಕ ನೇತಾಜಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಕೊಡಮಾಡುವ ಈ ಪ್ರಶಸ್ತಿಯನ್ನು ಬೆಂಗಳೂರಿನ ಜೆ.ಸಿ.ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ಮೇ 7ರಂದು ಸಂಜೆ 4 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಚಂದನ್‌ಗೌಡ ಅವರಿಗೆ ಪ್ರದಾನ ಮಾಡಲಾಗುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪೂಜ್ಯ ಮಠಾಧೀಶರು, ಸಾಹಿತಿಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ರವಿಕುಮಾರ್, ಗೌರವಾಧ್ಯಕ್ಷ ಪುಟ್ಟೇಗೌಡ ತಿಳಿಸಿದ್ದಾರೆ.



ಚಂದನ್‌ಗೌಡ

ಪಿಹೆಚ್.ಡಿ ಪದವಿ



ಮೈಸೂರು: ಪ್ರೊ.ಪಿ.ಎಸ್.ಕೆ. ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಪ್ರಜ್ಞಾ ಸೀತಾ ರಾವ್ ರೈ ಅವರು ಗಣಿತ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಾರ್ಮಿಕರೇ ದೇಶದ ಬೆನ್ನೆಲುಬು; ಅವರ ರಕ್ಷಣೆ ಸರ್ಕಾರಗಳ ಜವಾಬ್ದಾರಿ



ಕಾರ್ಮಿಕರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮೈಸೂರು: ಕರುನಾಡ ಕಾರ್ಮಿಕರ ವೇದಿಕೆ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಕಾರ್ಮಿಕರ ದಿನಾಚರಣೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಚಿತ ಕಣ್ಣಿನ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಶಿಬಿರ, ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಶಿಬಿರ ಸೂಯೇಜ್ ಫಾರಂ ರಸ್ತೆಯ ಕರುಮಾರಿಯಮ್ಮ ದೇವಸ್ಥಾನದ ಸಭಾಂಗಣದಲ್ಲಿ ಜರುಗಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಎಚ್.ವಿ.ರಾಜೀವ್, ಮೈಸೂರು ಜಿಲ್ಲಾಧ್ಯಕ್ಷ ಕೆ.ಪಳನಿ, ಜಿಲ್ಲಾ ಗೌರವಾಧ್ಯಕ್ಷ ಮಂಜುನಾಥ್, ರಾಜ್ಯಾಧ್ಯಕ್ಷ ಚಂದ್ರೇಗೌಡ, ಕರ್ನಾಟಕ ಮಹಿಳಾ ರಾಜ್ಯಾಧ್ಯಕ್ಷೆ ಲಕ್ಷ್ಮಿ ಗೌಡ, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಎಂ.ಸುನೀಲ್, ಪದಾಧಿಕಾರಿಗಳಾದ ಉದಯ್ ಕುಮಾರ್, ಪರ್ವೇಜ್, ರಾಜು, ರಾಮಲಿಂಗೇಗೌಡ, ಸುಬ್ರಮಣ್ಯಂ, ಕೇಶವನ್, ಅನಿಲ್ ಕುಮಾರ್, ಪುಟ್ಟಸ್ವಾಮಿ, ಆರ್.ನಾರಾಯಣ್, ಬಸವರಾಜು, ಮಹದೇವ್, ಮಲ್ಲೇಶ್, ಸಿದ್ದರಾಜು, ನಯಾಜ್, ಪರಶಿವಮೂರ್ತಿ, ಮುಖಂಡರಾದ ರಘುನಾಥ್ ಇತರರಿದ್ದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಪರಿಸರ ಪ್ರೇಮಿಗಳಾದ ರಮೇಶ್, ಜಿಲ್ಲಾ ವಾಲ್ಮೀಕಿ ಸಂಘ ಮಹಿಳಾ ಅಧ್ಯಕ್ಷೆ ರಾಜೇಶ್ವರಿ, ಅತೀ ಹೆಚ್ಚು ಅಂಕ ಗಳಿಸಿದ ಕುಮಾರಿ ಗುಲ್ನಾಮ್, ರಂಜಿತ ಅವರನ್ನು ಅಭಿನಂದಿಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕಾರ್ಮಿಕರು ಹಗಲು ರಾತ್ರಿ, ಮಳೆ, ಗಾಳಿ, ಚಳಿ ಎನ್ನದೇ ಜೀವನೋಪಾಯಕ್ಕಾಗಿ ತಮ್ಮನ್ನು ತೊಡಗಿಸಿಕೊಂಡು ಕುಟುಂಬ ನಿರ್ವಹಣೆಗಾಗಿ ಶ್ರಮಿಸುತ್ತಾರೆ. ಕಾರ್ಮಿಕರು ದೇಶದ ಆರ್ಥಿಕ ಪ್ರಗತಿಗೆ, ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದು ದೇಶದ ಬೆನ್ನೆಲುಬಾಗಿದ್ದಾರೆ. ಅಂತಹ ಕಾರ್ಮಿಕರ ರಕ್ಷಣೆ ಮಾಡಬೇಕಾಗಿರುವುದು ಸರ್ಕಾರಗಳ ಜವಾಬ್ದಾರಿ. ಸರ್ಕಾರದ ವಿವಿಧ ಕಾರ್ಯಕ್ರಮಗಳು ಮತ್ತು ವಿಶೇಷ ಆರ್ಥಿಕ ನೆರವನ್ನು ಪಡೆಯಲು ಕಾರ್ಮಿಕರು ಮುಂದಾಗಬೇಕು ಎಂದರು.

ರಮ್ಮನಹಳ್ಳಿ ಪಪಂ ಮುಖ್ಯಾಧಿಕಾರಿ ಮಹೇಶ್, ಕಂದಾಯ ನಿರೀಕ್ಷಕ ಮಂಜುನಾಥ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ



ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಂಭಾಗ ಕರ್ನಾಟಕ ಕ್ರಾಂತಿ ಸೇನೆ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 5(ಎಂಕೆ)– ಮೈಸೂರಿನ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹೇಶ್ ಹಾಗೂ ಕಂದಾಯ ನಿರೀಕ್ಷಕ ಮಂಜುನಾಥ್‌ರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡುವಂತೆ ಆಗ್ರಹಿಸಿ ಕರ್ನಾಟಕ ಕ್ರಾಂತಿ ಸೇನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಸರ್ಕಾರಿ ಜಮೀನುಗಳನ್ನು ಖಾಸಗಿ ವ್ಯಕ್ತಿಗಳಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವುದಲ್ಲದೆ ಅಮಾಯಕ ಸಾರ್ವಜನಿಕರ ಕೆಲಸಗಳನ್ನು ಮಾಡಿಕೊಡದೆ ತೊಂದರೆ ಕೊಡುತ್ತಿರುವ ಈ ಇಬ್ಬರು ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಜಮೀನಿಗೆ ಕೆಲವೇ ದಿನಗಳಲ್ಲಿ ಅಕ್ರಮ ಖಾತೆ ಮಾಡಿಕೊಡುವ ಈ ಇಬ್ಬರು ಅಧಿಕಾರಿಗಳು, ಎಲ್ಲವೂ ಸರಿ ಇರುವ ಸ್ವತ್ತುಗಳಿಗೆ ಖಾತೆ ಮಾಡಿಕೊಡದೆ ಸಾಮಾನ್ಯ ಜನರು, ನಿವೃತ್ತ ಸರ್ಕಾರಿ ನೌಕರರು, ಬಡವರನ್ನು ತಿಂಗಳುಗಟ್ಟಲೆ ಅಲೆದಾಡಿಸಿ, ಕೊನೆಗೂ ಖಾತೆ ಮಾಡಿಕೊಡದೆ ತೊಂದರೆ ಕೊಡುತ್ತಿದ್ದಾರೆ. ಸೂಕ್ತ ದಾಖಲೆಗಳನ್ನು ಸಲ್ಲಿಸಿದ್ದರೂ ನೂರೆಂಟು ನೆಪ ಹೇಳಿ ಅರ್ಜಿಗಳನ್ನು ತಿರಸ್ಕರಿಸುತ್ತಿದ್ದಾರೆ ಎಂದು ದೂರಿದರು.

ಅಧಿಕಾರಿಗಳ ದರ್ಪದಿಂದಾಗಿ ಬೇರೆ ದಾರಿ ಇಲ್ಲದೆ ಮಧ್ಯವರ್ತಿಗಳಿಗೆ ಸಾವಿರಾರು ರೂಪಾಯಿ ಕೊಟ್ಟು ಖಾತೆ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಸಲಾಗಿದೆ. ಈ ಅಧಿಕಾರಿಗಳಿಬ್ಬರ ವಿರುದ್ಧ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸರ್ಕಾರವೇ ಈ ಇಬ್ಬರು ಅಧಿಕಾರಿಗಳನ್ನು ಸೇವೆಯಿಂದ ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರಲ್ಲದೆ, ತಪ್ಪಿದ್ದಲ್ಲಿ ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ಎದುರು ಪ್ರತಿ ಭಟನೆ ನಡೆಸಲಾಗುವುದು ಎಂದು ಎಚ್ಚರಿಸಿ ದರು. ಕರ್ನಾಟಕ ಕ್ರಾಂತಿ ಸೇನೆ ಅಧ್ಯಕ್ಷ ಎಂ.ಸಿ.ಬಾಬು, ಪದಾಧಿಕಾರಿಗಳಾದ ಇರ್ಫಾನ್, ಅಕ್ಬರ್‌ಖಾನ್, ಮುಖಂಡರಾದ ಗೋವಿಂದ, ವೇಣುಗೋಪಾಲ್, ರಮೇಶ, ಸುರೇಶ್ ಮತ್ತಿತರರಿದ್ದರು.

ನಾಯಕ ಸಮುದಾಯದ ಮುಖಂಡ ಎಸ್‌ಸಿ.ಬಸವರಾಜುಗೆ ವಿಧಾನಪರಿಷತ್ ಸದಸ್ಯ ಸ್ಥಾನ ಕಲ್ಪಿಸಲು ಆಗ್ರಹ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ನಾಯಕ ಸಮಾಜದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ನಾಯಕ ಸಮುದಾಯದ ಮುಖಂಡ ಎಸ್.ಸಿ.ಬಸವರಾಜು ಅವರಿಗೆ ವಿಧಾನಪರಿಷತ್ ಸದಸ್ಯತ್ವ ನೀಡುವಂತೆ ಒಕ್ಕೊರಲ ಆಗ್ರಹ ಮಾಡಲಾಯಿತು.

ಮೈಸೂರು, ಮೇ 5(ಎಂಟಿವೈ)– ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರನ್ನು ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಪರಿಗಣಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ವರಿಷ್ಠರ ಬಳಿಗೆ ನಿಯೋಗ ಹೋಗಲು ನಾಯಕ ಸಮುದಾಯದ ಮುಖಂಡರು ಸರ್ವಾನುಮತದಿಂದ ತೀರ್ಮಾನಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಜಿಲ್ಲೆಗಳ ನಾಯಕ ಸಮಾಜದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಕಳೆದ 40 ವರ್ಷದಿಂದ ಪಕ್ಷದಲ್ಲಿ ಸೇವೆ ಸಲ್ಲಿಸುತ್ತಿರುವ ಎಸ್.ಸಿ.ಬಸವರಾಜು ಅವರಿಗೆ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಆಯ್ಕೆ ಮಾಡಬೇಕು ಎಂದು ಮುಖಂಡರು ಆಗ್ರಹಿಸಿದ್ದಾರೆ.

ಸಿಎಂ ಗಮನಕ್ಕೆ ತರುತ್ತೇನೆ: ಸಭೆಯಲ್ಲಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಮುಖಂಡ ಎಸ್.ಸಿ.ಬಸವರಾಜು ಅವರನ್ನು ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಬೇಕೆಂಬ ಬೇಡಿಕೆಗೆ ನಮ್ಮ ಸಹಮತವಿದೆ. ತಂದೆಯವರೊಂದಿಗೆ ನಿರಂತರವಾಗಿ ಹೆಜ್ಜೆ ಹಾಕುವುದರೊಂದಿಗೆ ನನ್ನ ಗೆಲುವಿಗೂ ಕೆಲಸ ಮಾಡಿದ್ದಾರೆ. ಸಾಮಾಜಿಕ ನ್ಯಾಯ ದೊರೆಯಬೇಕಾದರೆ ರಾಜಕೀಯ ಸ್ಥಾನಮಾನ ಕಲ್ಪಿಸಬೇಕು. ವಾಲ್ಮೀಕಿ ಸಮುದಾಯಕ್ಕೆ ಪ್ರಾತಿನಿಧ್ಯ ದೊರೆಯುವಂತೆ ಒತ್ತಡ ಹೇರಲಾಗುವುದು. ಬಸವರಾಜು ಅವರಿಗೆ ಅವಕಾಶ ದೊರೆತರೆ ನಮಗೆ ಹೊರೆ ಕಡಿಮೆಯಾಗಲಿದೆ ಎಂದರು.

ಹೋರಾಟದಿಂದಲೇ ರಾಜಕೀಯ ಅಧಿಕಾರ: ಶಾಸಕ ಹಾಗೂ ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ಅಧ್ಯಕ್ಷ ಅನಿಲ್ ಚಿಕ್ಕಮಾದು ಮಾತನಾಡಿ, ಜಿಲ್ಲಾ ಪರಿಷತ್ ಸದಸ್ಯರಾಗಿದ್ದ ಜಿ.ಟಿ.ದೇವೇಗೌಡ, ಬೀಚನಹಳ್ಳಿ ಚಿಕ್ಕಣ್ಣ ಸೇರಿದಂತೆ ಅನೇಕರು ಶಾಸಕರಾಗಿದ್ದಾರೆ. ಆದರೆ, ಎಸ್.ಸಿ.ಬಸವರಾಜು ಅವರಿಗೆ ಅವಕಾಶ ಸಿಕ್ಕಿಲ್ಲ. ನಾಯಕ ಸಮಾಜಕ್ಕೆ ದೊಡ್ಡ ಶಕ್ತಿ ಮತ್ತು ಇತಿಹಾಸವಿದೆ. ಹೋರಾಟದಿಂದಲೇ ನ್ಯಾಯ ಪಡೆಯಬೇಕಾಗಿದೆ. ಬಸವರಾಜು ಅವರಿಗೆ ಅವಕಾಶ ದೊರೆತರೆ ನನಗಾಗಲೀ ಅಥವಾ ಡಾ.ಯತೀಂದ್ರ ಅವರ ಪ್ರಾಬಲ್ಯ ಕುಗ್ಗುತ್ತದೆ ಎನ್ನುವ ಭಾವನೆ ಸರಿಯಲ್ಲ ಎಂದರು.

ಡಾ.ಯತೀಂದ್ರಗೆ ಸಚಿವ ಸ್ಥಾನ ನೀಡಲಿ: ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಬಸವರಾಜು ಅವರನ್ನು ಪರಿಗಣಿಸಲು ಮನವಿ ಮಾಡಲಾಗುವುದು. ನಮ್ಮ ಭಾಗದಲ್ಲಿ ನಾಯಕ ಸಮಾಜಕ್ಕೆ ಅವಕಾಶ ಇಲ್ಲ ಎನ್ನುವ ಕೊರಗನ್ನು ನೀಗಿಸಬೇಕು. ಡಾ.ಯತೀಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂದು ಹೇಳಿದರು.

ಶಾಸಕರಾದ ದರ್ಶನ್ ಧ್ರುವನಾರಾಯಣ್, ಹೆಚ್.ಎಂ.ಗಣೇಶ್‌ಪ್ರಸಾದ್, ಮಾಜಿ ಮೇಯರ್ ಆರೀಫ್ ಹುಸೇನ್ ಮಾತನಾಡಿದರು. ಸಭೆಯಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಚಾಮರಾಜನಗರ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ಚಂದ್ರು ಮತ್ತಿತರರು ಪಾಲ್ಗೊಂಡಿದ್ದರು.

ಬಾಕಿ ಪ್ರೋತ್ಸಾಹ ಧನವೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ–ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿ ಮುಂಭಾಗ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ಮಾಡಿದರು.

ಮೈಸೂರು, ಮೇ 5(ಎಂಟಿವೈ)– ಬಾಕಿಯಿರುವ ಪ್ರೋತ್ಸಾಹಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಆವರಣದಲ್ಲಿ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ಆಶಾ ಕಾರ್ಯಕರ್ತರು ಸರ್ಕಾರ ಕೂಡಲೇ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದರು.

ಬಾಕಿ ಇರುವ 3–4 ತಿಂಗಳ ಕೇಂದ್ರದ ಪ್ರೋತ್ಸಾಹಧನ, 1–2 ತಿಂಗಳ ಗೌರವ ಧನವನ್ನು ಕೂಡಲೇ ನೀಡಬೇಕು. ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಾಂಪೋನೆಂಟ್‌ಗಳ ಹಣ ಬಿಡುಗಡೆ ಆಗಿಲ್ಲ. (ಟಿಬಿ, ಟಿವಿಎ, ಎನ್ಸಿಡಿ ಇತ್ಯಾದಿ) ಹಲವಾರು ಆಶಾ ಕಾರ್ಯಕರ್ತೆಯರ ಗೌರವ ಧನ, ಪ್ರೋತ್ಸಾಹ ಧನ ಕಡಿತಮಾಡಲಾಗಿದೆ. ಈ ಹಣ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

> **ಜನವರಿ 2025ರಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಗೌರವಧನ ಒಟ್ಟಿಗೆ ಸೇರಿಸಿ ಕನಿಷ್ಠ ಮಾಸಿಕ ರೂ. 10,000 ಗೌರವಧನ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು. 2025 ಮಾರ್ಚ್ ಬಜೆಟ್‌ನಲ್ಲಿ ರಾಜ್ಯ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ಒಂದು ಸಾವಿರ ರೂ. ಹೆಚ್ಚಳ ಮಾಡಿರುವುದಾಗಿ ಘೋಷಿಸಿರುವಂತೆ ಎಲ್ಲಾ ಆಶಾ ಕಾರ್ಯಕರ್ತೆಯರಿಗೂ ನೀಡಿರುವ ಭರವಸೆಯಂತೆ ಹೆಚ್ಚುವರಿ ಹಣ ನೀಡಬೇಕು.**
> –ಪ್ರತಿಭಟನಾಕಾರರು

ಸಮಸ್ತ ಆ್ಯಪ್ ಮೂಲಕ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು. ಮೌಲ್ಯಮಾಪನ ಹೆಸರಲ್ಲಿ ಆಶಾಗಳಿಗೆ ಆಗುತ್ತಿರುವ ಶೋಷಣೆ ನಿಲ್ಲಿಸಬೇಕು. ನಿವೃತ್ತರಾಗಿರುವ ಆಶಾಗಳಿಗೆ ಇರುವ ಇಡಿಗಂಟು ನೀಡಬೇಕು. ಆಶಾ ಸುಗಮ ಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕೆ ಆಗಮಿಸಿದ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಆಶಾ ಕಾರ್ಯಕರ್ತೆಯರ ಸಮಸ್ಯೆ ಆಲಿಸಿದರು. ಅಲ್ಲದೆ, ಹತ್ತು ದಿನಗಳಲ್ಲಿ ಪ್ರೋತ್ಸಾಹ ಧನ ಬಿಡುಗಡೆಯಾಗಲಿದೆ. ಹತ್ತು ದಿನದೊಳಗೆ ಕೊಂದು ಕೊರತೆ ಸಭೆ ನಡೆಸುತ್ತೇವೆ ಎಂಬುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಉಪಾಧ್ಯಕ್ಷೆ ಎಂ.ಉಮಾದೇವಿ, ಸಂಧ್ಯಾ ಪಿ.ಎಸ್, ಮೈಸೂರು ನಗರ ಸಲಹೆಗಾರರಾದ ಸೀಮಾ ಜಿ.ಎಸ್, ಜಿಲ್ಲಾಧ್ಯಕ್ಷೆ ಭಾಗ್ಯಮ್ಮ, ಪದಾಧಿಕಾರಿಗಳಾದ ಕೋಮಲ, ಸವಿತಾ, ಮಣಿಲಾ, ಸುಧಾ, ಮಂಜುಳಾ, ಸುನೀತಾ, ಲಕ್ಷ್ಮಿ, ಲೀಲಾವತಿ ಇನ್ನಿತರರು ಪಾಲ್ಗೊಂಡಿದ್ದರು.

ಹುಟ್ಟೂರಿಗೆ ಸೇವೆ ನೀಡುವ ಔದಾರ್ಯ ಬೆಳೆಸಿಕೊಳ್ಳಿ

ತಾಯಮ್ಮ ಹನಕೆರೆ ಕೆ.ಬೋರಯ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವೆಂಕಟಪ್ಪ ಸಲಹೆ

ಮಂಡ್ಯ, ಮೇ 5– ಸೌಲಭ್ಯದ ಕೊರತೆಯಿಂದ ಸರ್ಕಾರಿ ಶಾಲೆಗಳು ಹಾಗೂ ಆಸ್ಪತ್ರೆಗಳು ಹಿಂದಕ್ಕೆ ಸರಿಯುತ್ತಿವೆ. ಅದನ್ನು ಸರಿಪಡಿಸಿ ನಡೆಸುವುದು ಕಷ್ಟದ ಕೆಲಸ. ಆದರೂ ಅದೆಲ್ಲವನ್ನೂ ಮೀರಿ ನನ್ನ ಹುಟ್ಟೂರಿನಲ್ಲಿ ಶಾಲೆ ಕಟ್ಟಿಸಿ ಶಿಕ್ಷಣದ ಎಲ್ಲಾ ಸೌಲಭ್ಯ ಸಿಗುವಂತೆ ಮಾಡಿದೆವು. ಇದರಿಂದ ಸುತ್ತಮುತ್ತಲ ಗ್ರಾಮದ ವಿದ್ಯಾರ್ಥಿಗಳಿಗೆ ನೆರವಾಗಿದೆ ಎಂದು ಕಣ್ವ ಫೌಂಡೇಷನ್ ಸಂಸ್ಥಾಪಕ ಹೆಚ್.ಎಂ.ವೆಂಕಟಪ್ಪ ತಿಳಿಸಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾ ಮಂದಿರದಲ್ಲಿ ಕರ್ನಾಟಕ ಸಂಘ, ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ನಡೆದ ತಾಯಮ್ಮ ಹನಕೆರೆ ಕೆ.ಬೋರಯ್ಯ ಸಮಾಜಮುಖಿ ಪುರಸ್ಕಾರ 1ನೇ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಪ್ರತಿ ಜಿಲ್ಲಾ ಕೇಂದ್ರದಲ್ಲಿ ಗ್ರಾಮೀಣ ಭಾಗದ ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರಿಗೆ 4ನೇ ತರಗತಿಯಿಂದ ಪಿಯುಸಿ ವರೆಗೆ ವಸತಿ ಸೌಲಭ್ಯದೊಂದಿಗೆ ಉಚಿತ ಶಿಕ್ಷಣ ನೀಡಲು ನಿರ್ಮಲಾನಂದನಾಥ ಸ್ವಾಮೀಜಿ ಮನಸ್ಸು ಮಾಡಿದ್ದಾರೆ. ಮೊಟ್ಟ ಮೊದಲಿಗೆ ಚಿಕ್ಕಬಳ್ಳಾಪುರದಲ್ಲಿ ಆರಂಭಿಸುತ್ತಿದ್ದಾರೆ. ನಮ್ಮ ಸಮುದಾಯದ ದೊಡ್ಡ ಶಕ್ತಿಯಂತಿರುವ ಶ್ರೀಮಠದ ಯೋಜನೆ ಸಾಕಾರಗೊಳ್ಳಲಿ ಎಂದು ಆಶಿಸಿದರು.

ನಾನು ಮೊಟ್ಟ ಮೊದಲ ಬಾರಿಗೆ ವೈದ್ಯ ವೃತ್ತಿ ಶುರು ಮಾಡಿದ್ದೇ ಮದ್ದೂರಿನ ಕೆಸ್ತೂರಿನಲ್ಲಿ, ನಂತರ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಎಂಡಿ ಮುಗಿಸಿಕೊಂಡು ನಂತರ ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ 11 ವರ್ಷ ವೈದ್ಯ ವೃತ್ತಿ ನಡೆಸಿದೆ. ಈ ದಿನಗಳನ್ನು ನಾನು ಮರೆಯಲು ಸಾಧ್ಯವಿಲ್ಲ. ಅಷ್ಟು ಕೆಲಸದ ಒತ್ತಡದ ನಡುವೆಯೇ ನನಗೆ ಎಷ್ಟೇ ಹೊತ್ತಿನಲ್ಲಿ ಚಿಕಿತ್ಸೆಗೆ ಬಂದರೂ ಯಾವ ರೋಗಿಗಳನ್ನೂ ವಾಪಸ್ ಕಳುಹಿಸಿರುವ ಒಂದೂ ಉದಾಹರಣೆ ಇಲ್ಲ. ಜೊತೆಗೆ ಜನಪ್ರಿಯತೆ ತಂದುಕೊಟ್ಟಿದ್ದು ಮಂಡ್ಯದಲ್ಲಿಯೇ, ನನಗೆ ವರ್ಗಾವಣೆ ಆಗಬಾರದೆಂದೂ ಜನಪ್ರತಿನಿಧಿಗಳು ಪ್ರೀತಿಯಿಂದ ಉಳಿಸಿಕೊಂಡಿದ್ದನ್ನು ಮರೆಯುವಂತಿಲ್ಲ ಎಂದು ಸ್ಮರಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಎಂಎಲ್ಸಿ ಬಿ.ರಾಮಕೃಷ್ಣ, ತಾಯಮ್ಮ ಹನಕೆರೆ ಕೆ.ಬೋರಯ್ಯ ಪುತ್ರ ಹೆಚ್.ಬಿ.ನಾಗಪ್ಪ ಹನಕೆರೆ, ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ಸಂಘದ ಕಾರ್ಯದರ್ಶಿ ಚಂದಗಾಲು ಲೋಕೇಶ್, ಖಜಾಂಚಿ ಮಂಜುಳಾ ಉದಯಶಂಕರ್ ಭಾಗವಹಿಸಿದ್ದರು.



ಕಾರ್ಯಕ್ರಮದಲ್ಲಿ ಹೆಚ್.ಎಂ.ವೆಂಕಟಪ್ಪ ಅವರನ್ನು ಸನ್ಮಾನಿಸಲಾಯಿತು.

> ವೈದ್ಯಕೀಯ ಕ್ಷೇತ್ರ ವ್ಯಾಪಾರೀಕರಣ ಆಗಿರುವ ಹೊತ್ತಿನಲ್ಲಿ ಅಪರೂಪದಲ್ಲಿ ಅಪರೂಪಕ್ಕೆ ಸಿಗುವಂತಹ ವೈದ್ಯ ವೆಂಕಟಪ್ಪ ಅವರು ರೋಗಿಗಳಿಗೆ ಉತ್ತಮ ಸೇವೆ ನೀಡುವ ಮೂಲಕ ಜನಮಾನಸದಲ್ಲಿ ನೆಲೆಸಿದ್ದಾರೆ. ಆಸ್ಪತ್ರೆಯನ್ನು ಅಭಿವೃದ್ಧಿ ಪಡಿಸಿ ಬಡರೋಗಿಗಳಿಗೆ ನೆರವಾಗಿದ್ದಾರೆ. ತಾವು ಓದಿದ ಶಾಲೆಗೆ 15 ಕೋಟಿ ಹಣ ಖರ್ಚು ಮಾಡಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲೆ ನಿರ್ಮಿಸಿ ರಾಜ್ಯದಲ್ಲಿ ಸುಸಜ್ಜಿತ ಶಾಲೆ ಕಟ್ಟಿಸಿದ್ದಾರೆ. ಹೀಗೆ ಶಿಕ್ಷಣ ಕ್ಷೇತ್ರಕ್ಕೂ ಸೇವೆ ಮುಂದುವರಿಸಿರುವುದು ಶ್ಲಾಘನೀಯ ಹಾಗೂ ಅವರಿಗೆ ಸಿಕ್ಕಿರುವ ಪ್ರಶಸ್ತಿ ಗೌರವಯುತವಾದುದು.
>
> –ಕೆಟಿ.ಶ್ರೀಕಂಠೇಗೌಡ, ಮಾಜಿ ಎಂಎಲ್ಸಿ

ಸ್ವಾವಲಂಬಿ ಗ್ರಾಪಂ ಕಾರ್ಯಕ್ರಮಗಳಿಗೆ ಚಾಲನೆ



ಸ್ವಾವಲಂಬಿ ಗ್ರಾಪಂ ಕಾರ್ಯಕ್ರಮಗಳಿಗೆ ಶಾಸಕ ರಮೇಶ್‌ಬಾಬು ಚಾಲನೆ ನೀಡಿದರು.


ಶ್ರೀರಂಗಪಟ್ಟಣ, ಮೇ 5– ಪಿಡಿಓ ಹಾಗೂ ಗ್ರಾಪಂ ಸದಸ್ಯರು ಮನಸ್ಸು ಮಾಡಿದರೇ ಜನರ ಕಷ್ಟಕ್ಕೆ ಸ್ಪಂದಿಸಿ ಅವರ ಧ್ವನಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದಕ್ಕೆ ಕೆ.ಶೆಟ್ಟಹಳ್ಳಿ ಎಂಬುದಕ್ಕೆ ಕೆ.ಶೆಟ್ಟಹಳ್ಳಿ ಗ್ರಾಪಂ ಮಾದರಿಯಾಗಿದೆ ಎಂದು ಶಾಸಕ ರಮೇಶ್‌ಬಾಬು ತಿಳಿಸಿದರು.

ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಪಂನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೆ.ಶೆಟ್ಟಹಳ್ಳಿ ಗ್ರಾಪಂ ಜಂಟಿಯಾಗಿ ಆಯೋಜಿಸಿದ್ದ ಸ್ವಾವಲಂಬಿ ಗ್ರಾಪಂ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ತಾಲೂಕು ವ್ಯಾಪ್ತಿಯ 21 ಗ್ರಾಪಂಗಳಲ್ಲಿ ಇಂತಹ ವಿನೂತನ ಕಾರ್ಯಕ್ರಮಗಳನ್ನು ತಾಪಂ ಇಓ ನೇತೃತ್ವದಲ್ಲಿ ಹಮ್ಮಿಕೊಂಡು ಅಂಗವಿಕಲರು, ಹಿಂದುಳಿದವರು ಸೇರಿದಂತೆ ಬಡ ಜನರ ಶ್ರೇಯೋಭಿವೃದ್ಧಿಗೆ ಮುಂದಾಗಬೇಕು. ಗ್ರಾಪಂ ವ್ಯಾಪ್ತಿಯಲ್ಲಿ ಅನುದಾನ ಬಳಸಿಕೊಳ್ಳಬೇಕು ಎಂದರು.

ಇದೇ ವೇಳೆ ಗ್ರಾಪಂನಿಂದ ಆಯೋಜಿಸಿದ್ದ ಮಕ್ಕಳ ಬೇಸಿಗೆ ಶಿಬಿರದಲ್ಲಿ ಮಕ್ಕಳು, ಅಂಗನವಾಡಿ ಮಕ್ಕಳಿಗೆ ಶಾಲಾ ಪರಿಕರಗಳು, ಸಮವಸ್ತ್ರಗಳನ್ನು ವಿತರಿಸಲಾಯಿತು. ಅಲ್ಲದೇ ಪ.ಜಾತಿ, ಪಂಗಡದ ಕಲ್ಯಾಣ ನಿಧಿಯ ಸಹಾಯಧನದ ಚೆಕ್, ಸೋಲಾರ್ ರೂಫ್‌ಟಾಪ್, ಇ–ಚಾರ್ಜಿಂಗ್ ಸ್ಟೇಷನ್, ಮಳೆ ನೀರು ಕೊಯ್ಲು, ಬಯೋಗ್ಯಾಸ್ ಪ್ಲಾಂಟ್, ಏರೋಬಿಕ್ ಕಾಂಪೋಸ್ಟರ್ ಘಟಕಗಳನ್ನು ಶಾಸಕರು ಫಲಾನುಭವಿಗಳಿಗೆ ವಿತರಿಸಿದರು.

ಈ ವೇಳೆ ತಾಪಂ ಇಓ ಚಂದ್ರು, ಸಿಡಿಪಿಓ ಕಮಲೇಶ್, ಪಿಡಿಓ ಡಾ.ಶೋಭಾರಾಣಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಬೋರಪ್ಪ, ರಾಜಣ್ಣ, ಹರ್ಷಿತಾ, ಮಾಜಿ ಉಪಾಧ್ಯಕ್ಷೆ ಕವಿತಾ, ಮಾಜಿ ಸದಸ್ಯ ಅಪ್ಪಾಜಿ, ಕೀರ್ತಿ, ಮುಖಂಡ ಗಂಗಾಧರ್ ಸೇರಿದಂತೆ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ



ಮಂಡ್ಯ, ಮೇ 5– 66/11 ಕೆವಿ ವಿ.ಸಿ.ಫಾರಂ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ವಿ.ಸಿ.ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಬಿಳಗುಲಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮೇ 7 ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ರಮ ಮದ್ಯ ಮಾರಾಟ ತಡೆಗೆ ಸೂಕ್ತ ಕ್ರಮ ಕೈಗೊಳ್ಳಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ಹೆಚ್.ಟಿ.ಮಂಜು ಸೂಚನೆ

ಕೆ.ಆರ್.ಪೇಟೆ, ಮೇ 5– ತಾಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅಬಕಾರಿ ಅಧಿಕಾರಿಗಳಿಗೆ ಶಾಸಕ ಹೆಚ್.ಟಿ.ಮಂಜು ಸೂಚಿಸಿದರು.

ಪಟ್ಟಣದ ಹೊರವಲಯದ ಚಿಕ್ಕೋನಹಳ್ಳಿ ರೇಷ್ಮೆ ತರಬೇತಿ ಕೇಂದ್ರದಲ್ಲಿ ನಡೆದ ವಿವಿಧ ಇಲಾಖೆಗಳ (ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನ ಮೂಡನಹಳ್ಳಿ, ದೊಡ್ಡ ಸೋಮನಹಳ್ಳಿಯಲ್ಲಿ ಅಕ್ರಮ ಮದ್ಯ ಮಾರಾಟದಿಂದ ಕಲುಷಿತ ವಾತಾವರಣ ನಿರ್ಮಾಣವಾಗುತ್ತಿದೆ. ಈ ಬಗ್ಗೆ ಗ್ರಾಮದ ಮಹಿಳೆಯರು ನಮಗೆ ದೂರು ನೀಡಿದ್ದಾರೆ. ಹೀಗಾಗಿ ಅಬಕಾರಿ ಅಧಿಕಾರಿಗಳು ಈ ಸಂಬಂಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದರು.

ನಾಗಮಂಗಲ ಆರ್‌ಟಿಓ ಕಚೇರಿಯಲ್ಲಿ ಮಧ್ಯವರ್ತಿಗಳ ಮೂಲಕ ಅಧಿಕಾರಿಗಳು ಲಂಚ ಪಡೆದು ಎಲ್ಲಾ ಕೆಲಸ ಮಾಡಿಕೊಡುತ್ತಿದ್ದಾರೆ. ಆದರೆ ಗ್ರಾಹಕರು ನೇರವಾಗಿ ಹೋದರೆ ಯಾವುದೇ ಕೆಲಸ ನಡೆಯುತ್ತಿಲ್ಲ ಎಂದು ಹೆರಗನಹಳ್ಳಿ ಪ್ರಶಾಂತ್ ನೀಡಿದ ದೂರನ್ನು ಉಲ್ಲೇಖಿಸಿ ಮಾತನಾಡಿದ ಶಾಸಕರು ಸಭೆಯಲ್ಲಿದ್ದ ನಾಗಮಂಗಲ ಆರ್‌ಟಿಓ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಕೂಡಲೇ ಹೊರ ರಾಜ್ಯಗಳ ವಾಹನಗಳಿಗೆ ಎಫ್‌ಸಿ ನೀಡುವ ವಿಚಾರದಲ್ಲಿ ನೇರವಾಗಿ ತಮ್ಮ ಕಚೇರಿಗೆ ಬರುವ ಸಾರ್ವಜನಿಕರಿಗೆ ಕೆಲಸ ಮಾಡಿಕೊಡುವ ಮೂಲಕ ಮುಂದಿನ ದಿನಗಳಲ್ಲಿ ಈ ರೀತಿಯ ದೂರುಗಳು ಬಾರದಂತೆ ನೋಡಿಕೊಳ್ಳುವಂತೆ ನಿರ್ದೇಶನ ನೀಡಿದರು.

ತಾಲೂಕಿನ ಹಲವೆಡೆ ಜೆಜೆಎಂ ಕೆಲಸ ಪೂರ್ಣಗೊಳ್ಳದಿದ್ದರೂ ಗ್ರಾಪಂಗಳು ಕೆಲಸ ಪೂರ್ಣಗೊಂಡಿದೆ ಎಂದು ಛಾರ್ಜ್ ತೆಗೆದುಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಈ ರೀತಿ ಮಾಡಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಟ್ಟು ಸಾರ್ವಜನಿಕರ ಕೆಲಸ ಅರ್ಧಕ್ಕೆ ನಿಂತು ತೊಂದರೆಯಾದರೆ ಸಂಬಂಧಪಟ್ಟ ಪಿಡಿಓ ಹಾಗೂ ಜಿಪಂ ಕುಡಿಯುವ ನೀರು ವಿಭಾಗದ ಇಂಜಿನಿಯರ್ ಅವರನ್ನು ಹೊಣೆಗಾರರನ್ನಾಗಿ ಮಾಡಿ ಸೂಕ್ತ ಕಾನೂನು ಕ್ರಮಕ್ಕೆ ಮೇಲಧಿಕಾರಿಗಳಿಗೆ ಪತ್ರ ಬರೆಯಬೇಕಾಗುತ್ತದೆ ಎಂದು ಶಾಸಕರು ಎಚ್ಚರಿಸಿದರು.

ಹಾಲಿನ ಡೇರಿಗಳಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುವ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಆದರೆ ಮನ್‌ಮುಲ್ ನಿರ್ದೇಶಕರ ತಾಳಕ್ಕೆ ತಕ್ಕಂತೆ ಕುಣಿಯುವ ಕೆಲಸ ಮಾಡುತ್ತಿರುವುದಕ್ಕೆ ತೀವ್ರ ತರಾಟೆ ತೆಗೆದುಕೊಂಡ ಶಾಸಕರು ಸರ್ಕಾರ ಹಾಗೂ ಒಕ್ಕೂಟದಿಂದ ಸಿಗುವ ಸೌಲಭ್ಯಗಳನ್ನು ಪಾರದರ್ಶಕವಾಗಿ ಹಂಚಿಕೆ ಮಾಡಬೇಕು. ಮನ್‌ಮುಲ್ ನಿರ್ದೇಶಕ ಹೇಳಿದಂತೆ ಕಾನೂನು ಮೀರಿ ಕೆಲಸ ಮಾಡಿದರೆ ನಿಮ್ಮ ಮೇಲಾಧಿಕಾರಿಗಳಿಗೆ ಪತ್ರ ಬರೆಯುವ ಮೂಲಕ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ ಎಂದರು.

ಇದೇ ವೇಳೆ ಶಾಸಕ ಹೆಚ್.ಟಿ.ಮಂಜು ಅವರು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ ಸಲಹೆ ನೀಡಿದರು. ಅಲ್ಲದೇ ಸಭೆಗೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸುವಂತೆ ತಾಪಂ ಇಓ ಕೆ.ಸುಷ್ಮಾ ಅವರಿಗೆ ಸೂಚಿಸಿದರು.

ಸಭೆಯಲ್ಲಿ ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾಪಂ ಆಡಳಿತಾಧಿಕಾರಿ, ಬಾಬಾಸಾಬ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಮನ್‌ಮುಲ್ ಮಾರ್ಗದ ವಿಸ್ತರಣಾಧಿಕಾರಿ ಶಶಿಕುಮಾರ್, ತಾಲೂಕು ಯೋಜನಾಧಿಕಾರಿ ಎಂ.ಶ್ರೀನಿವಾಸ್, ತಾಲೂಕು ಕೆಡಿಪಿ ಸಮಿತಿ ಸದಸ್ಯ ಆಕಾಶ್, ಇಲ್ಯಾಸ್ ಪಾಷಾ, ಮಲ್ಲಿಕಾರ್ಜುನ್ ಇತರರಿದ್ದರು.

> ರೈತರು ಸ್ವಾಧೀನದಲ್ಲಿರುವ ಭೂಮಿಯಿಂದ ಅವರನ್ನು ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸಲು ಪ್ರಯತ್ನಿಸಿದರೆ ನಾನು ಸಹಿಸುವುದಿಲ್ಲ. ರೈತರು ಅರಣ್ಯದ ಬಳಿ ಹತ್ತಾರು ವರ್ಷಗಳಿಂದ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಜಂಟಿ ಸರ್ವೇ ಮಾಡಿಸದೇ ಸದರಿ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸಿದರೆ ನಾನೇ ರೈತರೊಡಗೂಡಿ ಅರಣ್ಯ ಇಲಾಖೆಯ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ.
>
> – ಹೆಚ್.ಟಿ.ಮಂಜು, ಶಾಸಕ.



ಶಾಸಕ ಹೆಚ್.ಟಿ.ಮಂಜು ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ನಡೆಯಿತು.

ಮಗುವಿನ ಚಿಕಿತ್ಸೆಗೆ ಆರ್ಥಿಕ ನೆರವು



ಲಿವರ್ ಸಮಸ್ಯೆಯಿಂದ ಬಳಲುತ್ತಿರುವ ಶ್ರೀರಂಗಪಟ್ಟಣ ನಿವಾಸಿ ಮನೋಜ್–ಸಹನಾ ದಂಪತಿ ಪುತ್ರ ಅನ್ವಿಕ್ ಚಿಕಿತ್ಸೆಗೆ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಆರ್ಥಿಕ ನೆರವು ನೀಡಿದರು. ಈ ವೇಳೆ ಬಿಜೆಪಿ ಅಧ್ಯಕ್ಷ ಜಿ.ಈ.ಸುಧಾಕರ್, ಪುರಸಭೆ ಮಾಜಿ ಸದಸ್ಯರಾದ ಶಿವು, ರಾಜೇಂದ್ರ, ಎಂ.ಶ್ರೀನಿವಾಸ್, ಕೆ.ಆರ್.ಸೊಸೈಟಿ ಮಾಜಿ ಅಧ್ಯಕ್ಷ ಎಸ್.ರಘು, ಉಮೇಶ್‌ಕುಮಾರ್, ಕಿರಣ್ ಸಿಂಗ್ ಇತರರಿದ್ದರು.

ಒಂದನೇ ಪುಟದಿಂದ

2028ಕ್ಕೂ ನಾವೇ ಬರ್ತೇವೆ!!

ಅವರು ಹೇಳುವ ಪ್ರಕಾರ ಡಬಲ್ ಇಂಜಿನ್ ಸರ್ಕಾರ ಇತ್ತು. ಬಿಜೆಪಿಯವರು ಸಿಬ್ಬಂದಿ ಮೂಲಕ ಮತಪತ್ರಗಳನ್ನು ತಿದ್ದಿರುವುದು ಖಚಿತವಾಗಿದೆ. ಇದು ಕ್ರಿಮಿನಲ್ ಸಂಚು ಎಂದರು. ನಮ್ಮ ಪಕ್ಷದಿಂದ ಸುಧೀರ್ ಕುಮಾರ್ ಮರೋಳಿ ಅವರು ಏಜೆಂಟ್ ಆಗಿದ್ದರು. ಎಲ್ಲಾ ಏಜೆಂಟರು 2023ರಲ್ಲಿ ಸಹಿ ಹಾಕಿದ ದಾಖಲೆಯಿದೆ. ಮತಗಳು ಅನರ್ಹವಾಗಿದ್ದರೆ ಆಗಲೇ ಎಲ್ಲರೂ ಆಕ್ಷೇಪ ಎತ್ತಬಹುದಾಗಿತ್ತು. ಆಗ ಯಾರೂ ಆಕ್ಷೇಪ ಎತ್ತಲಿಲ್ಲ ಯಾಕೆ ಎಂದು ಪ್ರಶ್ನಿಸಿದರು. ಚುನಾವಣಾಧಿಕಾರಿಗಳು ಚುನಾವಣಾ ವೀಕ್ಷಕರ ಅನುಮತಿಯಿಲ್ಲದೇ ಆತುರಾತುರವಾಗಿ ಫಲಿತಾಂಶ ಘೋಷಿಸಿ ದ್ದಾರೆ. ತಪ್ಪು ಮಾಡಿದ ಯಾರೇ ಆಗಿದ್ದರೂ, ಅಂತಹ ಅಧಿಕಾರಿಗೆ ಶಿಕ್ಷೆಯಾಗಬೇಕು. ರಾಜೇಗೌಡ ಅವರು ನೀಡಿದ ದೂರಿನ ಮೇಲೆ ಎಫ್‌ಐಆರ್ ಆಗಿದೆ. ಇದು ನಿಷ್ಪಕ್ಷಪಾತವಾಗಿ ತನಿಖೆ ನಡೆಯಬೇಕು ಎಂದು ಮುಖ್ಯಮಂತ್ರಿ ಆಗ್ರಹಿಸಿದರು.

ಕಲ್ಲು ಎತ್ತಿಹಾಕಿ ಕೊಂದ ದುಷ್ಕರ್ಮಿಗಳು

ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜಿನ ಶವಾಗಾರಕ್ಕೆ ಸಾಗಿಸಿ, ಹಂತಕರ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಹತ್ಯೆ ನಡೆದ ರಸ್ತೆಯ ಮಳಿಗೆಗಳಲ್ಲಿರುವ ಸಿಸಿ ಕ್ಯಾಮರಾ ದೃಶ್ಯಾವಳಿ ಪರಿಶೀಲಿಸಿದ್ದಾರೆ. ಅಲ್ಲದೆ, ಕೃತ್ಯ ನಡೆದ ಸ್ಥಳದಲ್ಲಿ ಕೆಲ ಸಾಕ್ಷಿ ಸಂಗ್ರಹಿಸಿದ್ದಾರೆ.

ಮರಣೋತ್ತರ ಪರೀಕ್ಷೆ: ಪೊಲೀಸರು, ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಿದ್ದಾರೆ. ಈ ಸಂಬಂಧ ಉದಯಗಿರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ನಮ್ಮ ಹುಡುಗ ಬಲಿಯಾಗಿದ್ದಾನೆ...

ಕಡಿವಾಣ ಹಾಕಬೇಕು. ಇಲ್ಲದಿದ್ದರೆ, ಮುಂದೆಯೂ ಕೊಲೆಗಳು ನಡೆಯುತ್ತಲೇ ಇರುತ್ತವೆ ಎಂದು ಅಳಲು ತೋಡಿಕೊಂಡರು. ನಮ್ಮ ಹುಡುಗ ಉಮರ್ ಅಡುಗೆ ಕೆಲಸ, ಇತರೆ ಕೂಲಿ ಕೆಲಸ ಮಾಡುತ್ತಿದ್ದ. ಕೊಲೆ ಯಾವ ಕಾರಣಕ್ಕೆ ಆಗಿದೆ ಎಂದು ತಿಳಿದಿಲ್ಲ. ಕೊಲೆ ಮಾಡಿರುವವರ ಬಗ್ಗೆಯೂ ನಮಗೆ ಮಾಹಿತಿ ಇಲ್ಲ. ರಾತ್ರಿ ಮನೆಗೆ ಬಂದು ಮುಂಜಾನೆ ಎದ್ದು ಕೆಲಸಕ್ಕೆ ಹೋಗುತ್ತಿದ್ದ. ಆದರೆ ಇಂದು ಕೊಲೆಯಾಗಿದೆ. ಹಳೆ ದ್ವೇಷದಲ್ಲಿ ಕೊಲೆ ಆಗಿದೆ ಅಂತ ಹೇಳುತ್ತಿದ್ದಾರೆ. ಗಾಂಜಾ ನಶೆಯಲ್ಲಿ ಬಂದವರು ಆತನನ್ನು ಕೊಲೆ ಮಾಡಿದ್ದಾರೆ ಎಂಬ ಅನುಮಾನವಿದೆ ಎಂದರು.

ಮೂರು ದಿನ ಗುಡುಗು ಸಹಿತ ಭಾರೀ ಮಳೆ

ರಾಜ್ಯದ ಬಹುಪಾಲು ಎಲ್ಲಾ ಜಿಲ್ಲೆಗಳಿಗೂ ಹಳದಿ ಎಚ್ಚರಿಕೆ ನೀಡಲಾಗಿದೆ. ಕರಾವಳಿಯ ಉಡುಪಿ ಜಿಲ್ಲೆಗೂ ಅಲರ್ಟ್ ವಿಸ್ತರಣೆಯಾಗಿದೆ. ರಾಜ್ಯದಾದ್ಯಂತ ವ್ಯಾಪಕವಾಗಿ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗುವ ಎಚ್ಚರಿಕೆ ಇದೆ. ಜನರು ಮಳೆಯ ಸಂದರ್ಭದಲ್ಲಿ ಸುರಕ್ಷಿತ ಸ್ಥಳಗಳಲ್ಲಿರಲು ಸೂಚಿಸಲಾಗಿದೆ.

ಮೇ 8ರಂದು ಕರಾವಳಿ ಕರ್ನಾಟಕ, ಮಧ್ಯ ಕರ್ನಾಟಕ ಮತ್ತು ದಕ್ಷಿಣ ಒಳನಾಡಿನ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಹಳದಿ ಮುನ್ನೆಚ್ಚರಿಕೆ ಮುಂದುವರಿದಿದೆ. ಈ ಭಾಗಗಳಲ್ಲಿ ಗುಡುಗು, ಮಿಂಚು ಸಹಿತ ಸಾಧಾರಣ ಮಳೆ ಮತ್ತು ಬಿರುಗಾಳಿ ಮುಂದುವರಿಯಲಿದೆ. ಮೇ 15ರ ಸುಮಾರಿಗೆ ನೈರುತ್ಯ ಮುಂಗಾರು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನ ತಲುಪಲಿದೆ. ಅಲ್ಲಿಂದ ಕೇರಳಕ್ಕೆ ಬಂದು ನಂತರ ಕರ್ನಾಟಕಕ್ಕೆ ಪ್ರವೇಶ ಮಾಡಲಿದೆ. ಜೂನ್ ಮೊದಲ ವಾರದಲ್ಲಿ ಕರ್ನಾಟಕದಲ್ಲಿ ಮುಂಗಾರು ಪ್ರವೇಶ ಮಾಡುವ ಸಾಧ್ಯತೆಯಿದೆ.


ರಾಜೀನಾಮೆ ನೀಡೋ ಮಾತೇ ಇಲ್ಲ

ಹೆಚ್ಚು ಸ್ಥಾನಗಳನ್ನು ಲೂಟಿ ಮಾಡಿದೆ. ನಾವು ಚುನಾವಣೆಯಲ್ಲಿ ಸೋತಿಲ್ಲ. ಮರು ಮತ ಎಣಿಕೆ ನಡೆಯಬೇಕು. ಅಲ್ಲಿಯವರೆಗೂ ನಾನೂ ರಾಜೀನಾಮೆ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ಕಿತ್ತೊಗೆಯುತ್ತಾರೆ: ಮಮತಾ ಬ್ಯಾನರ್ಜಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ, ರಾಜೀನಾಮೆ ನೀಡದಿದ್ರೆ ಕಿತ್ತೆಸಲಾಗುವುದು. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ದೇಶ ಅವರ ಇಚ್ಛೆಯಂತೆ ನಡೆಯುವುದಿಲ್ಲ. ಅವರು ರಾಜೀನಾಮೆ ನೀಡದಿದ್ದರೆ ವಜಾಗೊಳಿಸಲಾಗುತ್ತದೆ. ಒಂದು ನಿರ್ದಿಷ್ಟ ಅವಧಿಯವರೆಗೆ ರಾಜ್ಯಪಾಲರು ಕಾಯುತ್ತಾರೆ. ತದನಂತರ ಅವರನ್ನು ವಜಾಗೊಳಿಸಲಾಗುತ್ತದೆ. ಅದು ಅಷ್ಟು ಸರಳ ವಿಚಾರ ಎಂದಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಮೇ 5– ಕ್ರೀಡಾ ಸಂಸ್ಕೃತಿ, ದೈಹಿಕ ಸದೃಢತೆ ಮತ್ತು ಯುವಜನರು ಭಾಗವಹಿಸುವಿಕೆ ಉತ್ತೇಜಿಸುವ ಮತ್ತು ಯುವಜನರು ಮೈ ಭಾರತ್‌ನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸುವ ಉದ್ದೇಶದಿಂದ ಕ್ರೀಡಾ ಸಾಮಗ್ರಿಗಳ ವಿತರಣೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅಗತ್ಯ ದಾಖಲೆಗಳೊಂದಿಗೆ ಮೇ 15ರೊಳಗೆ ಜಿಲ್ಲಾ ಯುವ ಅಧಿಕಾರಿ, ಮೈ ಭಾರತ್ ಕೇಂದ್ರ ಮಂಡ್ಯ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ: 08232–220839 ಸಂಪರ್ಕಿಸಬಹುದು.




ದೃಶ್ಯವನ್ನು ಕೂಡ ಸಿದ್ಧಪಡಿಸಲಾಗಿದೆ. ಅಲ್ಲದೆ ಎಲಿವೇಟೆಡ್ ಕಾರಿಡಾರ್ ನಿರ್ಮಾಣವಾಗುವ ಮಾರ್ಗದಲ್ಲಿ ಅವಶ್ಯವಿರುವ ಖಾಸಗಿ ಹಾಗೂ ಸರ್ಕಾರಿ ಆಸ್ತಿಗಳ ಭೂಸ್ವಾಧೀನಕ್ಕೆ ಸ್ಥಳಗಳನ್ನು ಕೂಡ ಗುರುತಿಸಲಾಗಿದೆ. ಒಟ್ಟಾರೆ ಈ ಯೋಜನೆಗೆ 4,200 ಕೋಟಿ ರೂಪಾಯಿಗಳ ಅಂದಾಜು ಪಟ್ಟಿ ತಯಾರಿಸಲಾಗಿದೆ. ಇದರಲ್ಲಿ ಎಲಿವೇಟೆಡ್ ಕಾರಿಡಾರ್ ಮಾರ್ಗದಲ್ಲಿ ಸ್ವಾಧೀನಪಡಿಸಿಕೊಳ್ಳುವ ಭೂಮಿ

ಎಲಿವೇಟೆಡ್ ಕಾರಿಡಾರ್‌ಗೆ ಡಿಪಿಆರ್ ರೆಡಿ

ಮಾಲೀಕರಿಗೆ ಪರಿಹಾರ ನೀಡಲು 2,600 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಈ ಯೋಜನೆಯಲ್ಲಿ ಎಲಿವೇಟೆಡ್ ಕಾರಿಡಾರ್‌ಗೆ 1,600 ಕೋಟಿ ವೆಚ್ಚವಾದರೆ, ಉಳಿದ 2,600 ಕೋಟಿ ಭೂಸ್ವಾಧೀನಕ್ಕೆ ವೆಚ್ಚವಾಗುತ್ತದೆ. ಅಂದರೆ ಶೇಕಡ 60 ರಷ್ಟು ಹಣ ಭೂಸ್ವಾಧೀನಕ್ಕೆ ಖರ್ಚಾಗಲಿದೆ.

ಈ ಯೋಜನೆಗೆ ವಿಶೇಷ ಅನುದಾನದಲ್ಲಿ ಅಗತ್ಯ ಹಣ ನೀಡಿದರೆ ಎರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿಯನ್ನು ಲೋಕೋಪಯೋಗಿ ಇಲಾಖೆ ಹೊಂದಿದೆ.



ಮೆಟ್ರೊ ಮಾರ್ಗ ನಿರ್ಮಿಸಲು ಡಬ್ಬಲ್ ಡೆಕ್ಕರ್ ಡಿಸೈನ್

ಮೈಸೂರು: ಸಿಲಿಕಾನ್ ಸಿಟಿ ಬೆಂಗಳೂರಿನ ಸಿಲ್ಕ್ ಬೋರ್ಡ್ ಮಾದರಿಯಲ್ಲಿ ಎಲಿವೇಟೆಡ್ ಕಾರಿಡಾರ್‌ನಲ್ಲಿ ಮೆಟ್ರೊ ಮಾರ್ಗ ಹಾದು ಹೋಗುವ ಡಬ್ಬಲ್ ಡೆಕ್ಕರ್ ನಿರ್ಮಾಣದ ಡಿಸೈನ್ ಮಾಡಲಾಗಿದೆ. ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ಭವಿಷ್ಯದ 20 ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ರೂಪಿಸಲಾಗಿದೆ. ಫ್ಲೈ ಓವರ್ ಮಧ್ಯೆ ಮೆಟ್ರೊ ಮಾರ್ಗಕ್ಕೂ ಸ್ಥಳಾವಕಾಶ ಕಲ್ಪಿಸಿ ಡಿಸೈನ್ ಮಾಡಲಾಗಿದೆ. ಫ್ಲೈಓವರ್‌ನಲ್ಲಿ ನಾಲ್ಕು ಪಥ (ಫೋರ್ ಲೇನ್) ಗಳಿದ್ದು, ಸುಮಾರು 16 ಮೀಟರ್ ಅಗಲವಿರುತ್ತದೆ. ರಸ್ತೆಯ ಎರಡು ಪಥಗಳು ತಲಾ 7 ಮೀಟರ್ ಅಗಲವಿರುತ್ತದೆ. ಇದರ ಮಧ್ಯೆ ಮೆಟ್ರೊ ನಿರ್ಮಾಣಕ್ಕಾಗಿ ಎರಡು ಮೀಟರ್ ಜಾಗವನ್ನು ಬಿಡಲಾಗಿದೆ. ಫ್ಲೈ ಓವರ್ ಮೇಲೆ ಪಿಲ್ಲರ್ ನಿರ್ಮಿಸಿ, ಅದರ ಮೇಲೆ ಮೆಟ್ರೊ ಮಾರ್ಗ ನಿರ್ಮಾಣ ಮಾಡಬಹುದು. ಇದರಿಂದ ಭವಿಷ್ಯದಲ್ಲಿ ಮೆಟ್ರೊ ಮಾರ್ಗದ ಯೋಜನಾ ವೆಚ್ಚ ಕಡಿಮೆಯಾಗಲಿದೆ. ಉಳಿದಂತೆ ಮೇಲ್ಸೇತುವೆ ಕೆಳಗಿನ ಹಾಲಿ ರಸ್ತೆಯನ್ನು ಸ್ಥಳೀಯ ಸಂಚಾರಕ್ಕೆ ಬಳಸಬಹುದಾಗಿದೆ. ಇಷ್ಟೆಲ್ಲಾ ಬಹುಪಯೋಗಿಯಾದ ಈ ಯೋಜನೆಗೆ ಸದ್ಯ ಗ್ರಹಣ ಹಿಡಿದಿದೆ.

ಯೋಜನೆಗೆ ಸ್ಪಷ್ಟ ರೂಪ ದೊರೆತಿದೆ, ಆದರೆ ಹಣವಿಲ್ಲ...

ಮೈಸೂರು: ಎಲಿವೇಟೆಡ್ ಕಾರಿಡಾರ್ ಯೋಜನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕನಸಿನ ಯೋಜನೆ. ಲೋಕೋಪಯೋಗಿ ಇಲಾಖೆಯಿಂದ ಈ ಯೋಜನೆಗೆ ರೂಪ ಕೂಡ ನೀಡಿದ್ದಾರೆ. ಆದರೆ ಬಜೆಟ್‌ನಲ್ಲಿ ಇದಕ್ಕೆ ಅಗತ್ಯವಿರುವ 4,200 ಕೋಟಿ ಮೀಸಲಿಟ್ಟಿಲ್ಲ. ಆದರೆ, ವಿಶೇಷ ಅನುದಾನದಡಿ ಈ ಯೋಜನೆಗೆ ಹಣ ನೀಡುವುದಾಗಿ ಸಿದ್ದರಾಮಯ್ಯ ಲೋಕೋಪಯೋಗಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಭರವಸೆ ನೀಡಿದ್ದರು. ಆದರೆ ಪ್ರಮುಖವಾಗಿ ಈ ಯೋಜನೆಗೆ ಅಡ್ಡಗಾಲು ಅಂದರೆ ಪರಿಸರವಾದಿಗಳು. ಈ ಯೋಜನೆಯ 11 ಕಿಲೋಮೀಟರ್ ಅಂತರದಲ್ಲಿ ಸುಮಾರು 700 ಮರಗಳನ್ನು ಕತ್ತರಿಸಲು ಗುರುತಿಸಲಾಗಿದೆ. ಇಷ್ಟು ಪ್ರಮಾಣದ ಮರಗಳನ್ನು ಕತ್ತರಿಸಲು ಪರಿಸರವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಅಲ್ಲದೆ ಎಲಿವೇಟೆಡ್ ಕಾರಿಡಾರ್ ಯೋಜನೆಗೆ ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಯೋಜನೆ ಆರಂಭವಾಗುವ ಮೆಟ್ರೊಪೋಲ್ ಸರ್ಕಲ್‌ನಿಂದಲೇ ಹಲವು ಪಾರಂಪರಿಕ ಕಟ್ಟಡ ಅಕ್ಕ ಪಕ್ಕದಲ್ಲಿವೆ. ಮಹಾರಾಣಿ ಕಾಲೇಜು, ಪ್ರಾದೇಶಿಕ ಆಯುಕ್ತರ ಕಚೇರಿ, ಜಿಲ್ಲಾಧಿಕಾರಿಗಳ ವಸತಿ ಗೃಹ, ಜಲದರ್ಶಿನಿ ಅತಿಥಿ ಗೃಹ ಸೇರಿದಂತೆ ಹಲವು ಪಾರಂಪರಿಕ ಕಟ್ಟಡಗಳಿವೆ. ಎಲಿವೇಟೆಡ್ ಕಾರಿಡಾರ್ ಯೋಜನೆಯಿಂದ ಈ ಪಾರಂಪರಿಕ ಕಟ್ಟಡಗಳ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ. ಫ್ಲೈಓವರ್‌ನಿಂದ ಪಾರಂಪರಿಕ ಕಟ್ಟಡಗಳು ಮರೆಯಾಗುತ್ತವೆ ಎಂದು ಯದುವೀರ್ ಸೇರಿದಂತೆ ಪಾರಂಪರಿಕ ಪ್ರಿಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಒಂದು ಈ ಯೋಜನೆಗೆ ಹಣವಿಲ್ಲ, ಮತ್ತೊಂದು ಕೆಲವರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ಸದ್ಯಕ್ಕೆ ತಡೆ ಹಿಡಿಯುವಂತೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಪಂಚ ರಾಜ್ಯಗಳಲ್ಲಿ ಸರ್ಕಾರ ರಚನೆ ಸರ್ಕಸ್!

ಸಮಾರಂಭಕ್ಕೆ ಎನ್‌ಡಿಎ ಆಡಳಿತವಿರುವ ಎಲ್ಲ ರಾಜ್ಯಗಳ ಸಿಎಂಗಳಿಗೆ ಆಹ್ವಾನಿಸಿದ್ದಾರೆ ಎನ್ನಲಾಗಿದೆ.

ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಸ್ವತಃ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಪಕ್ಷದ ಕೇಂದ್ರ ವೀಕ್ಷಕರನ್ನಾಗಿ ಮಂಗಳವಾರ ನೇಮಿಸಲಾಗಿದ್ದು, ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಜ್ಹಿ ಸಹ–ವೀಕ್ಷಕರಾಗಿ ಸಾಥ್ ನೀಡಿದ್ದಾರೆ. ಮುಖ್ಯಮಂತ್ರಿ ಆಯ್ಕೆ ಮತ್ತು ಸಚಿವ ಸಂಪುಟದ ಪ್ರಮುಖ ಸ್ಥಾನಗಳ ಕುರಿತು ಪ್ರಧಾನಿ ಮೋದಿ ಅವರು ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಮತ್ತು ಸಂಸದೀಯ ಮಂಡಳಿಯ ಸದಸ್ಯರು ದೆಹಲಿಯಲ್ಲಿ ಸರಣಿ ಸಭೆಗಳನ್ನು ನಡೆಸುತ್ತಿದ್ದಾರೆ. ಪ್ರಚಾರದ ಸಮಯದಲ್ಲಿ ಅಮಿತ್ ಶಾ ಬಂಗಾಳದ ಮಣ್ಣಿನಲ್ಲೇ ಹುಟ್ಟಿ ಬೆಳೆದ, ಬಂಗಾಳಿ ಮಾಧ್ಯಮದಲ್ಲಿ ಶಿಕ್ಷಣ ಪಡೆದ ವ್ಯಕ್ತಿಯೇ ರಾಜ್ಯದ ಮುಖ್ಯಮಂತ್ರಿಯಾಗಲಿದ್ದಾರೆ ಎಂದಿದ್ದರು. ಮೂಲಗಳ ಪ್ರಕಾರ, ಪಕ್ಷವು ಮಧ್ಯಪ್ರದೇಶ ಮತ್ತು ರಾಜಸ್ಥಾನದಂತೆ ಇಲ್ಲಿಯೂ ಸಹ ಅಚ್ಚರಿಯ ಅಥವಾ ಹೆಚ್ಚು ಪರಿಚಿತವಲ್ಲದವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡುವ ಸಾಧ್ಯತೆಯಿದೆ. ಪ್ರಮುಖ ನಾಯಕರಾದ ಸಮಿಕ್ ಭಟ್ಟಾಚಾರ್ಯ ಮತ್ತು ಸುವೇಂದು ಅಧಿಕಾರಿಯನ್ನು ದೆಹಲಿಯಲ್ಲೇ ಉಳಿಯುವಂತೆ ಪಕ್ಷದ ಹೈಕಮಾಂಡ್ ಸೂಚನೆ ನೀಡಿದೆ.

ಮೇ 7ಕ್ಕೆ 'ವಿಜಯ ಪತಾಕೆ'?: ತಮಿಳುನಾಡಿನಲ್ಲಿ 108 ಸ್ಥಾನಗಳನ್ನು ಗೆದ್ದಿರುವ ತಮಿಳುನಾಡು ವೆಟ್ರಿ ಕಳಗಂ(ಟಿವಿಕೆ) ಮುಖ್ಯಸ್ಥ ವಿಜಯ್, ಹೊಸದಾಗಿ ಆಯ್ಕೆಯಾದ ತಮ್ಮ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ. ಟಿವಿಕೆ ಪಕ್ಷದ ಪ್ರಧಾನ ಕಚೇರಿಯಲ್ಲಿ ಪೆರಿಯಾರ್ ಇ.ವಿ.ರಾಮಸಾಮಿ, ಬಿ.ಆರ್.ಅಂಬೇಡ್ಕರ್, ಕೆ.ಕಾಮರಾಜ್, ವೇಲು ನಾಚಿಯಾರ್ ಮತ್ತು ಅಂಜಲೈ ಅಮ್ಮಲ್ ಅವರಿಗೆ ಪುಷ್ಪ ನಮನ ಸಲ್ಲಿಸಿದ ವಿಜಯ್, ಹಲವು ಮಹತ್ವದ ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ. ಸಭೆಯಲ್ಲಿ ವಿಜಯ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದ್ದು, ಈ ಮೂಲಕ ಅವರು ಮುಖ್ಯಮಂತ್ರಿ ಗದ್ದುಗೆ ಏರಲು ಸಜ್ಜಾಗಿದ್ದಾರೆ. ಮೇ 7ರಂದು ನಡೆಯಲಿರುವ ಬೃಹತ್ ಸಮಾರಂಭದಲ್ಲಿ ಹಿರಿಯ ರಾಜಕೀಯ ನಾಯಕರು, ಸೆಲೆಬ್ರಿಟಿಗಳು ಮತ್ತು ಅಪಾರ ಜನಸಮೂಹದ ಸಮ್ಮುಖದಲ್ಲಿ ವಿಜಯ್, ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಇವರೊಂದಿಗೆ 20 ಮಂದಿ ಸಚಿವರಾಗಿ ಶಪಥಗೈಯ್ಯಲ್ಲಿದ್ದಾರೆ ಎಂದು ಮೂಲಗಳಿಂದ ತಿಳಿದುಬಂದಿದೆ. ಇಂದು ಬೆಳಗ್ಗೆ ವಿಜಯ್, ಲೋಕಭವನಕ್ಕೆ ಪತ್ರ ಬರೆದು ರಾಜ್ಯಪಾಲರ ಭೇಟಿಗೆ ಪತ್ರ ಬರೆದಿದ್ದು, ಈ ವೇಳೆ ಸರ್ಕಾರ ರಚನೆ ಹಕ್ಕು ಮಂಡಿಸಲಿದ್ದಾರೆ. ಟಿವಿಕೆ ಮೂಲದ ಪ್ರಕಾರ, ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಪಕ್ಷವು ಎರಡು ವಾರಗಳ ಕಾಲಾವಕಾಶ ಕೋರಿದೆ.

ಟಿವಿಕೆ ಸರ್ಕಾರ ರಚಿಸಲು 118 ಶಾಸಕರು ಅಗತ್ಯವಿದೆ. ವಿಜಯ್ ಅವರ ಪಕ್ಷವು 108 ಶಾಸಕರನ್ನು ಹೊಂದಿರುವುದರಿಂದ, ಉಳಿದ 10 ಸ್ಥಾನಗಳಿಗೆ ಅವರಿಗೆ ಮತ್ತೊಂದು ಪಕ್ಷದ ಬೆಂಬಲ ಬೇಕಾಗುತ್ತದೆ. ಟಿವಿಕೆ ಕಾಂಗ್ರೆಸ್ ಮತ್ತು ಇತರ ಕೆಲವು ಸಣ್ಣಪುಟ್ಟ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಬಹುದು ಎಂದು ಮಾಧ್ಯಮಗಳು ವರದಿ ಮಾಡಿವೆ. ಕಾಂಗ್ರೆಸ್ ಐದು ಸ್ಥಾನಗಳನ್ನು, ವಿಸಿಕೆ ಎರಡು, ಮತ್ತು ಸಿಪಿಐ ಮತ್ತು ಸಿಪಿಐ(ಎಂ) ತಲಾ ಎರಡು ಸ್ಥಾನಗಳನ್ನು ಹೊಂದಿವೆ. ಅವರು ಒಟ್ಟಿಗೆ ಬಂದರೆ, ಅವರು 11 ಶಾಸಕರ ಬಲವಾದ ಒಕ್ಕೂಟವನ್ನು ರಚಿಸುತ್ತಾರೆ. ಐಯುಎಂಎಲ್, ಡಿಎಂಡಿಕೆ ಅಥವಾ ಪಿಎಂಕೆಯ ಕೆಲವು ಭಾಗಗಳಿಂದ ಟಿವಿಕೆಗೆ ಹೆಚ್ಚುವರಿ ಬೆಂಬಲ ಸಿಗಬಹುದು ಎಂದು ನಿರೀಕ್ಷಿಸಲಾಗಿದೆ. ಮೈತ್ರಿ ಮಾಡಿಕೊಂಡರೆ ಕಾಂಗ್ರೆಸ್ ಎರಡು ಸಚಿವ ಸ್ಥಾನ ಪಡೆಯುವ ಸಾಧ್ಯತೆಯಿದೆ. ಆದರೆ ಇತರ ಸಣ್ಣ ಪಕ್ಷಗಳು ತಲಾ ಒಂದು ಸ್ಥಾನವನ್ನು ಪಡೆಯುತ್ತವೆ ಎಂದು ಮೂಲಗಳು ತಿಳಿಸಿವೆ. ಒಟ್ಟಾರೆ ಟಿವಿಕೆ ತನ್ನ ಮಿತ್ರಪಕ್ಷಗಳಿಗೆ ನಾಲ್ಕರಿಂದ ಆರು ಸಚಿವ ಸ್ಥಾನಗಳನ್ನು ನೀಡಬಹುದು.

ವೇಣುಗೋಪಾಲ್ ಸಿಎಂ?: ಕೇರಳದಲ್ಲೂ ಸಿಎಂ ಆಯ್ಕೆ ಕಸರತ್ತು ಜೋರಾಗಿ ನಡೆದಿದೆ. ಕಾಂಗ್ರೆಸ್ ನೇತೃತ್ವದಲ್ಲಿ ಭರ್ಜರಿ ಜಯ ಸಾಧಿಸಿರುವ ಯುಡಿಎಫ್, ಮುಂದಿನ ಮುಖ್ಯಮಂತ್ರಿ ವಿಚಾರವಾಗಿ ತೀವ್ರ ಚರ್ಚೆ ನಡೆಸಿದೆ. ಈ ನಡುವೆ ಕೇರಳ ರಾಜಕೀಯದ ಆಯಕಟ್ಟಿನ ಜಾಗದಲ್ಲಿ ಈಗ ಸಂಚಲನ ಸೃಷ್ಟಿಯಾಗಿದೆ. ಕಾಂಗ್ರೆಸ್‌ನ ಹಿರಿಯ ನಾಯಕ ಕೆ.ಸಿ.ವೇಣುಗೋಪಾಲ್ ದೆಹಲಿಗೆ ಭೇಟಿ ನೀಡಿರುವುದು ವಿಶೇಷ ಗಮನ ಸೆಳೆದಿದೆ. ದೆಹಲಿಗೆ ಬಂದಾಗ ಅವರಿಗೆ ಭಾರೀ ಸ್ವಾಗತ ದೊರೆತಿದ್ದು, ಇದು ಅವರ ರಾಜಕೀಯ ಬಲವನ್ನು ಸೂಚಿಸುವಂತಾಗಿದೆ. ಕೆಲವು ವರದಿಗಳ ಪ್ರಕಾರ, ಸುಮಾರು 50ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ವೇಣುಗೋಪಾಲ್ ಅವರ ಬೆಂಬಲಕ್ಕೆ ನಿಂತಿದ್ದಾರೆ. ಆದರೆ, ಗೆಲುವಲ್ಲಿ ಮಹತ್ವದ ಪಾತ್ರ ವಹಿಸಿರುವ ವಿ.ಡಿ.ಸತೀಶನ್, ರಮೇಶ್ ಚೆನ್ನಿತ್ತಲ, ಶಶಿ ತರೂರ್, ಸನ್ನಿ ಜೋಸೆಫ್ ಹಾಗೂ ಕೆ.ಸುಧಾಕರನ್ ಹೆಸರುಗಳು ಚಾಲ್ತಿಯಲ್ಲಿವೆ. ಅಂತಿಮವಾಗಿ ಹೈಕಮಾಂಡ್ ಯಾರ ಹೆಸರು ಸೂಚಿಸಲಿದೆ ಎಂಬುದನ್ನು ಕಾದುನೋಡಬೇಕಿದೆ.


ಹ್ಯಾಟ್ರಿಕ್ ಸಿಎಂ ಸಾಧ್ಯತೆ: ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಜಯಭೇರಿ ಬಾರಿಸಿದ್ದು, ಹಿಮಂತ್ ಬಿಸ್ವಾ ಶರ್ಮಾ ಹ್ಯಾಟ್ರಿಕ್ ಸಿಎಂ ಆಗುವ ಸಾಧ್ಯತೆ ದಟ್ಟವಾಗಿದೆ. ಅಸ್ಸಾಂ ಮುಖ್ಯಮಂತ್ರಿಗಳ ಕಚೇರಿ ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಒಂದು ಪೋಸ್ಟ್, ಹಿಮಂತ್ ಮೂರನೇ ಬಾರಿ ಮುಖ್ಯಮಂತ್ರಿಯಾಗುತ್ತಾರೆ ಎಂಬುದಕ್ಕೆ ಪೂರಕವಾಗಿದೆ. ಹಿಮಂತ ಬಿಸ್ವಾ ಶರ್ಮಾ ಅವರ ಭಾವಚಿತ್ರದೊಂದಿಗೆ 'ನಮ್ಮನ್ನ ಮಿಸ್ ಮಾಡಿಕೊಂಡ್ರಾ, ನಾವು ಮತ್ತೆ ಹಿಂತಿರುಗಿದ್ದೇವೆ' ಎನ್ನುವ ಬರಹ ಹಂಚಿಕೊಳ್ಳಲಾಗಿದೆ. ಪಶ್ಚಿಮ ಬಂಗಾಳದ ಬಗ್ಗೆ ತಲೆಕೆಡಿಸಿಕೊಂಡಿರುವ ಬಿಜೆಪಿ, ಇನ್ನೆರಡು ದಿನಗಳಲ್ಲಿ ಅಸ್ಸಾಂ ಸರ್ಕಾರ ರಚನೆಯ ತಾಲೀಮು ಪ್ರಕ್ರಿಯೆ ಆರಂಭಿಸಬಹುದು ಎನ್ನಲಾಗಿದೆ.

ಮತ್ತೆ ರಂಗಸಾಮಿಯೇ?: ಪುದುಚೇರಿಯಲ್ಲಿ ಎಐಎನ್‌ಆರ್‌ಸಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಭರ್ಜರಿ ಗೆಲುವು ದಾಖಲಿಸಿದ್ದು, ಎಐಎನ್‌ಆರ್‌ಸಿ ಸಂಸ್ಥಾಪಕ ನಾಯಕ ಎನ್.ರಂಗಸಾಮಿಯೇ ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ. ಈ ಮೂಲಕ ಐದನೇ ಬಾರಿ ಸಿಎಂ ಆಗಿ ದಾಖಲೆ ಬರೆಯಲಿದ್ದಾರೆ. ಗೆದ್ದಿರುವ ಶಾಸಕರು ಸದ್ಯ ವಿಶ್ರಾಂತಿಯಲ್ಲಿದ್ದು, ಇಲ್ಲಿಯೂ ಎರಡು ದಿನಗಳಲ್ಲಿ ಸರ್ಕಾರ ರಚನೆ ಬಗ್ಗೆ ನಿರ್ಧಾರವಾಗಲಿದೆ.

ಆಡಳಿತಗಾರರು ಬುದ್ಧರ ಚಿಂತನೆಗಳ ಓದಬೇಕು

2570ನೇ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಆರ್.ಮಹದೇವಪ್ಪ

ಮೈಸೂರು,ಮೇ 5– ಆಡಳಿತಗಾರರಿಗೆ ಜನಸಂಪರ್ಕ ಇರುವುದರಿಂದ ಜನರ ಸಮಸ್ಯೆಗಳನ್ನು ಬಗೆಹರಿಸಲು ಬುದ್ಧರ ಚಿಂತನೆಗಳನ್ನು ಓದಬೇಕು, ಅರ್ಥ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಬುದ್ಧ ಧಮ್ಮ ಸಮಿತಿ ಪ್ರಧಾನ ಕಾರ್ಯದರ್ಶಿ ಆರ್.ಮಹದೇವಪ್ಪ ಹೇಳಿದರು.



ವಿಜಯನಗರ ಒಂದನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ 2570ನೇ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದಲ್ಲಿ ಬುದ್ಧರ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದರು.

ಬುದ್ಧರು ಹೇಳಿದಂತೆ ಜನಪ್ರತಿನಿಧಿ ಅಥವಾ ಉತ್ತಮ ಆಡಳಿತಗಾರನಿಗೆ ತಾಳ್ಮೆ, ಕರುಣೆ, ಪ್ರೀತಿ, ಮೈತ್ರಿ ಇರಬೇಕು. ಆಗಾದಾಗ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯ. ಹಣ, ಅಧಿಕಾರ, ಭೂಮಿಗಾಗಿ ಜಗತ್ತಿನಲ್ಲಿ ಕಿತ್ತಾಟ ನಡೆಯುತ್ತಿದ್ದು, ಇದರಿಂದ ಅಶಾಂತಿಯ ವಾತಾವರಣ ಸೃಷ್ಟಿಯಾಗಿ ಭಯದಿಂದ ಬದುಕುವಂತಾಗಿದೆ. ಜಗತ್ತಿನಲ್ಲಿ ಶಾಂತಿ ನೆಲೆಸಿ ಎಲ್ಲರೂ ಸುಖವಾಗಿರಬೇಕು. ಯುದ್ಧ ನಿಲ್ಲಲ್ಲಿ ಶಾಂತಿ ನೆಲೆಸಲಿ ಎಂಬ ಬುದ್ಧರ ಸಂದೇಶವನ್ನು ಎಲ್ಲೆಡೆ ಪಸರಿಸಬೇಕಿದೆ ಎಂದರು.

> ಬರೋಡಾದ ಮಹಾರಾಜ ಸಂಯ್ಯಾಜಿರಾವ್ ಗಾಯಕ್ವಾಡ ಅವರು ಬುದ್ಧರ ಚಿಂತನೆಗಳನ್ನು ಅಪಾರವಾಗಿ ಅರ್ಥ ಮಾಡಿಕೊಂಡಿದ್ದರು. ಆದ್ದರಿಂದಲೇ ಅಂಬೇಡ್ಕರ್‌ರ ಪ್ರತಿಭೆಯನ್ನು ಗುರುತಿಸಿ ಅವರಿಗೆ ವಿದ್ಯಾರ್ಥಿವೇತನ ನೀಡಿ, ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ಕಳುಹಿಸಿಕೊಟ್ಟರು. ಈ ಸಹಾಯದಿಂದಲೇ ಡಾ.ಅಂಬೇಡ್ಕರ್ ಅವರು ಉನ್ನತ ಶಿಕ್ಷಣ ಪಡೆದು ಭಾರತದ ಮಹಾನ್ ನಾಯಕರಾದರು. **–ಆರ್.ಮಹದೇವಪ್ಪ, ಸಮಿತಿ ಪ್ರಧಾನ ಕಾರ್ಯದರ್ಶಿ**

ಕಾರ್ಯಕ್ರಮಕ್ಕೂ ಮುನ್ನ ಶ್ರೀಲಂಕಾದ ನವಯಾನ ಫಾರೆಸ್ಟ್ ಮೊನಾಸ್ಟರಿಯ ಬಿಕ್ಕು ಬೋಧಿಧಮ್ಮ ಬಂತೇಜಿಯವರು ಬೋಧಿವೃಕ್ಷಕ್ಕೆ ಪೂಜೆ ಸಲ್ಲಿಸಿ ಬುದ್ಧ ವಂದನೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಮಿತಿ ಸಹ ಕಾರ್ಯದರ್ಶಿ ಎಚ್.ಶಿವರಾಜು, ಉಪಾಧ್ಯಕ್ಷ ಪಿ.ಮಹದೇವ್, ಎಂ.ಸಾವಕಯ್ಯ, ಆರ್.ನಟರಾಜು, ಚಿದಂಬರಮೂರ್ತಿ, ಅಹಿಂದ ಜವರಪ್ಪ, ವಾಸು, ಗೋಪಾಲ್, ಸಿದ್ದರಾಜು, ಬಿ.ಎಂ.ಲಿಂಗರಾಜು, ಡಾ.ಟಿ.ಮಂಜು, ವಸಂತಕುಮಾರ್, ಮಾ.ನಾಗಯ್ಯ, ಪುಟ್ಟಸ್ವಾಮಿ, ಪುನೀತ್‌ಕುಮಾರ್, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಆಂಟಿಬಯೋಟಿಕ್ ಚಿಕಿತ್ಸೆ ಕುರಿತು ಅಂತಾರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ಮೇ5(ಜಿಎ)–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯಿಂದ ಜೆಎಸ್‌ಎಸ್ ಔಷಧ ವಿಜ್ಞಾನ ಕಾಲೇಜಿನಲ್ಲಿ ಸೂಕ್ಷ್ಮಜೀವಿ ನಿರೋಧಕ ಪ್ರತಿರೋಧದ ಯುಗದಲ್ಲಿ ನಿಖರ ಆಂಟಿಬಯೋಟಿಕ್ ಚಿಕಿತ್ಸಾ ವಿಷಯ ಕುರಿತ ಜೆಎಸ್‌ಎಸ್ ಥೆರಪಿಟಿಕ್ ಡ್ರಗ್ ಮಾನಿಟರಿಂಗ್(ಜೆಎಸ್‌ಎಸ್ ಟಿಡಿಎಂ) ಅಂತರರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕಾಲೇಜಿನ ಉಪ ಪ್ರಾಂಶುಪಾಲ ಜಿ.ವಿ.ಪೂಜಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಾಗಾರವನ್ನು ಮೇ 8ರಂದು ಬೆಳಿಗ್ಗೆ 11ಕ್ಕೆ ಮಲೇಶಿಯಾದ ಆರೋಗ್ಯ ಸಚಿವಾಲಯದ ಕ್ಲಿನಿಕಲ್ ಫಾರ್ಮಾಸಿಸ್ಟ್ ಜಿಯಾನ್ ಲಿನ್ ಅವರು ವರ್ಚುವಲ್ ಮೂಲಕ ಉದ್ಘಾಟಿಸುವರು. ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಜೆಎಸ್‌ಎಸ್ ಟಿಡಿಎಂ ಕೇಂದ್ರವನ್ನೂ ಉದ್ಘಾಟಿಸುವರು. ಅಕಾಡೆಮಿಯ ಸಮ ಕುಲಪತಿ ಬಿ.ಸುರೇಶ್ ಅಧ್ಯಕ್ಷತೆ ವಹಿಸುವರು ಎಂದರು.

ವಿಚಾರ ಸಂಕಿರಣದಲ್ಲಿ ಅಂತರರಾಷ್ಟ್ರೀಯ ತಜ್ಞರು ಹಾಗೂ 15 ರಾಷ್ಟ್ರೀಯ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಔಷಧಶಾಸ್ತ್ರ, ಜಿನೋಮಿಕ್ಸ್ ಮತ್ತು ಆಂಟಿಬಯೋಟಿಕ್ ಪ್ರತಿರೋಧ ವಿಷಯಗಳನ್ನು ಚರ್ಚಿಸುವರು. ಮೇ 9ರಂದು ಮಧ್ಯಾಹ್ನ 12 ಕ್ಕೆ ಸಮಾರೋಪ ನಡೆಯಲಿದೆ. ಮೇ 7ರಂದು ಆಸ್ಪತ್ರೆಯಲ್ಲಿ ಪೂರ್ವಭಾವಿ ಕಾರ್ಯಕ್ರಮವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಸಂಚಾಲಕರಾದ ಬಿ.ಎಂ.ಗುರುಪಾದಯ್ಯ, ಸಹ ಸಂಚಾಲಕರಾದ ಆರ್.ಎಸ್.ಸವಿತಾ, ಅಖಿಲಾ ಪ್ರಶಾಂತ್ ಉಪಸ್ಥಿತರಿದ್ದರು.

ವಿಶಿಷ್ಟ ರೀತಿ ಬುದ್ಧ ಜಯಂತಿ...



ಮೈಸೂರಿನ ಶ್ರೀರಾಂಪುರದಲ್ಲಿರುವ ಬೆಳಕು ವಾತ್ಸಲ್ಯ ಧಾಮದ ಹಿರಿಯ ನಾಗರಿಕರಿಗೆ ಎಳನೀರು,ಡ್ರೈ ಫ್ರೂಟ್ಸ್, ಹಣ್ಣು ಹಂಪಲು ವಿತರಿಸಿ ಬುದ್ಧ ಜಯಂತಿ ಆಚರಿಸಲಾಯಿತು. ಈ ವೇಳೆ ಜೆಡಿಎಸ್ ಮುಖಂಡ ಪ್ರಕಾಶ್ ಪ್ರಿಯಾದರ್ಶನ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ವಾತ್ಸಲ್ಯ ಸೇವಾ ಫೌಂಡೇಶನ್ ಸಂಸ್ಥಾಪಕ ರವಿಕುಮಾರ್ ,ಬ್ಲಡ್ ಆನ್ ಕಾಲ್ ಕ್ಲಬ್, ಮೈಸೂರು ಸಂಸ್ಥಾಪಕ ದೇವೇಂದ್ರ ಪರಿಹಾರಿಯಾ, ಸಮಾಜ ಸೇವಕಿ ವಿದ್ಯಾ ಅಶ್ವಿನಿ, ಬಿಜೆಪಿ ಮುಖಂಡ ಪುರುಷೋತ್ತಮ್, ಗಾಯಕ ಯಶ್ವಂತ್‌ಕುಮಾರ್, ರಾಜೇಶ್‌ಕುಮಾರ್, ಮಹೇಶ, ದತ್ತ, ನಿರೀಕ್ಷಿತ್ ಇನ್ನಿತರರು ಉಪಸ್ಥಿತರಿದ್ದರು.

ಮಹಿಳೆ ನಾಪತ್ತೆ



ಮೈಸೂರು: ಅವಿವಾಹಿತ ಬುದ್ಧಿಮಾಂದ್ಯರೆನ್ನಲಾದ ಜಯಲಕ್ಷ್ಮಿ ಅವರು ಕಾಣೆಯಾಗಿದ್ದಾರೆಂದು ಕುಟುಂಬದವರು ನರಸಿಂಹ ರಾಜ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ವಯಸ್ಸು 63 ವರ್ಷ, 150 ಸೆಂ.ಮೀ ಅಡಿ ಎತ್ತರ ಬಿಳಿ ಕೂದಲು, ಸಾಧಾರಣ ಮೈಬಣ್ಣ ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಇವರ ಬಗ್ಗೆ ಮಾಹಿತಿ ತಿಳಿದು ಬಂದಲ್ಲಿ ನರಸಿಂಹರಾಜ ಪಿಎಸ್‌ಗೆ ಅಥವಾ ಪೊಲೀಸ್ ನಿಯಂತ್ರಣ ಕೊಠಡಿ ಅಥವಾ ದೂ.ಸಂ.: 2418312, 2418311, 0821–2418100, 22212108, ಅನ್ನು ಸಂಪರ್ಕಿಸಬಹುದು.

ಬಸವೇಶ್ವರ, ಅಕ್ಕಮಹಾದೇವಿ, ಡಾ.ಶಿವಕುಮಾರ ಸ್ವಾಮೀಜಿ ಜಯಂತಿ ಆಚರಣೆ

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಸಾಧಕರಿಗೆ ಸನ್ಮಾನ



ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಶಕ್ತಿ ಸಾಮಾಜಿಕ–ಶೈಕ್ಷಣಿಕ ಟ್ರಸ್ಟ್‌ನಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮೈಸೂರು, ಮೇ.5(ಜಿಎ)–ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಶಿವಶಕ್ತಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್‌ನ 2ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಶ್ರೀ ಬಸವೇಶ್ವರ ಜಯಂತಿ, ಅಕ್ಕ ಮಹಾದೇವಿ ಜಯಂತಿ, ಶ್ರೀಶಿವಕುಮಾರ ಸ್ವಾಮೀಜಿ ಜಯಂತಿ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಸವಾದಿ ಶರಣರು ಹಾಕಿಕೊಟ್ಟಿರುವ ಆದರ್ಶಗಳನ್ನು ಇಂತಹ ಕಾರ್ಯಕ್ರಮಗಳ ಮೂಲಕ ಸ್ಮರಿಸಿ, ಪಾಲಿಸುವ ಮೂಲಕ ಅವರನ್ನು ಜೀವಂತವಾಗಿರಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದರು.

12ನೇ ಶತಮಾನದಲ್ಲಿಯೇ ಸಮಾನತೆ, ಸಹಬಾಳ್ವೆಗೆ ಕರೆ ನೀಡಿದವರು ಬಸವಣ್ಣ. ಸಮಾಜದಲ್ಲಿನ ತಾರತಮ್ಯ, ಸಮಾನತೆ, ಸಮ ಸಮಾಜದ ಕಲ್ಪನೆಯನ್ನು ಅಂದೇ ನೀಡಿದ ಮಹಾತ್ಮರು ಎಂದು ಹೇಳಿದರು.

ಶಿವಕುಮಾರ ಸ್ವಾಮೀಜಿಗಳಿಗೆ ಭಾರತ ರತ್ನ ನೀಡುವ ಕೆಲಸ ಮಾಡಬೇಕಿದೆ. ಅವರು ಮಠವನ್ನು ಮುನ್ನಡೆಸುವುದು ಮಾತ್ರವಲ್ಲದೆ ಜಾತ್ಯಾತೀತವಾಗಿ, ಅನ್ನ, ಅಕ್ಷರವನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೀಡುತ್ತಾ ಬಂದಿದ್ದರು. ಅಂತಹ ಸಮಾಜ ಸುಧಾರಕರನ್ನು ಸ್ಮರಿಸುವ ಮೂಲಕ ಅವರ ನಡೆಯನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಬಸವಾದಿ ಶರಣರು ಅಂದೇ ಮೌಢ್ಯಗಳ ವಿರುದ್ಧ ಸಮರ ಸಾರಿದರು. ಬಸವಣ್ಣನವರು ತಂಗಿಗೆ ಲಿಂಗಾಧರಣೆ ಮಾಡದಿದ್ದಕ್ಕೆ ತಾವು ಸಹ ಲಿಂಗಧಾರಣೆ ನಿರಾಕರಿಸಿದರು. ಆ ಮೂಲಕ ಸ್ತ್ರೀ ಸಮಾನತೆಗೆ ಒತ್ತು ನೀಡಿದವರಾಗಿದ್ದಾರೆ. ಹಾಗಾಗಿ ಮಹನೀಯರ ಆದರ್ಶಗಳನ್ನು ನಾವೆಲ್ಲರೂ ಪಾಲಿಸುವ ಕೆಲಸ ಆಗಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಕ್ಷೇತ್ರದ ಸಾಧಕರಾದ ಮಂಗಳ ಮುದ್ದುಮಾದಪ್ಪ ಮತ್ತು ಜೆ.ವೃಷಬೇಂದ್ರಪ್ಪ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಇದೇ ವೇಳೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಕುದೇರು ಮಠಾಧ್ಯಕ್ಷ ಶ್ರೀ ಗುರುಶಾಂತಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನಂಜನಗೂಡಿನ ಅನುರಾಗ ಮಕ್ಕಳ ಮನೆಯ ಸಂಸ್ಥಾಪಕ ಅಧ್ಯಕ್ಷ ಸೋಮಶೇಖರ್ ಮೂರ್ತಿ, ಜಿಲ್ಲಾ ಬಿಜೆಪಿ ಘಟಕದ ಮಹಿಳಾಧ್ಯಕ್ಷೆ ರೇಣುಕಾರಾಜು, ಸಮಾಜ ಸೇವಕಿ ಶಾರದ ಸತ್ಯನಾರಾಯಣ, ಶಿವಶಕ್ತಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್ ಅಧ್ಯಕ್ಷೆ ಶಿವಮ್ಮ ಮಂಜುನಾಥ್, ಸಂಸ್ಥೆಯ ಕಾರ್ಯದರ್ಶಿ ಚೈತ್ರ ಸಂತೋಷ್ ಕುಮಾರ್, ಖಜಾಂಚಿ ಭಾರತಿ ಬಸವಣ್ಣ, ಪದಾಧಿಕಾರಿಗಳಾದ ಜಗದಾಂಬ ನಾಗಣ್ಣ, ಸವಿತ ಜಗದೀಶ್, ದಿವ್ಯಚೇತನ, ಸಾವಿತ್ರಿ ಮಹದೇವು, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ ಇನ್ನಿತರರಿದ್ದರು.

ಶ್ರೀ ಕುಮಾರನ್ ಜ್ಯುವೆಲರ್ಸ್ ಎರಡನೇ ವಾರ್ಷಿಕೋತ್ಸವ...



ಶ್ರೀ ಕುಮಾರನ್ ಜ್ಯುವೆಲರ್ಸ್ 2ನೇ ವಾರ್ಷಿಕೋತ್ಸವ, ದಿ ಚೆನ್ನೈ ಸಿಲ್ಕ್ಸ್ ರೇಷ್ಮೆ ಸೀರೆ ವಿಭಾಗದ ಉದ್ಘಾಟನೆಯನ್ನು ವ್ಯವಸ್ಥಾಪಕ ನಿರ್ದೇಶಕರಾದ ಕೆ.ವಿನಾಯಗಂ, ಮೀನಾಕ್ಷಿ ವಿನಾಯಗಂ, ಕಾರ್ಯನಿರ್ವಹಣಾ ನಿರ್ದೇಶಕ ವಿ.ವಿಕ್ರಮ್‌ನಾರಾಯಣ್ ನೆರವೇರಿಸಿದರು.

ನಾಮಪತ್ರ ಸಲ್ಲಿಕೆ...



ಮೈಸೂರು ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆಯ ಅಂಗವಾಗಿ ಮೈಸೂರು ಜಿಲ್ಲಾ ನಿರ್ದೇಶಕರು ಹಾಗೂ ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷರಾದ ಹಡಜನ ಟಿ. ಲಿಂಗರಾಜು ಅವರು ಚುನಾವಣಾ ಅಧಿಕಾರಿಗಳಾದ ಸಿ.ಬಿ.ಬಸವರಾಜು ಅವರಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಯರಹಳ್ಳಿ ಬಸವಣ್ಣ, ಅಲನಹಳ್ಳಿ ಮಹದೇವಸ್ವಾಮಿ, ಸೋಮಶೇಖರ್, ಎಲ್.ಮಹದೇವಸ್ವಾಮಿ ಹಾಗೂ ಹಡಜನ ಮಹದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶಾತಿ ಅರ್ಜಿ ಆಹ್ವಾನ

ಮೈಸೂರು: ಸರ್ಕಾರಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸಾದ ಅಭ್ಯರ್ಥಿಗಳ ಆಗಸ್ಟ್–2026ನೇ ಸಾಲಿನ CTS ಮತ್ತು PPP ವಿಭಾಗದಲ್ಲಿ ಮೆರಿಟ್ ರಿಸರ್ವೇಷನ್ ಫಿಟ್ಟರ್, ಟರ್ನರ್, ಕೊಪ, ಎಲೆಕ್ಟ್ರಿಷಿಯನ್, ಇ/ಎಂ ಪ್ರವೇಶಗಳಿಗಾಗಿ ಕ್ರಮವಾಗಿ ಆನ್‌ಲೈನ್ ಮತ್ತು ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ 8ರೊಳಗೆ ಕಚೇರಿಯಲ್ಲಿ ಅರ್ಜಿ ಪಡೆದು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಬೆಳಕವಾಡಿ ಇಮೇಲ್–gitim8@gmail.com, www.gitibelavadi.in, ದೂ.ಸಂ: 0821–2950951 ಸಂಪರ್ಕಿಸಬಹುದು.

ತಿಲಕ್‌ನಗರದ ಮಹಿಳೆ ನಾಪತ್ತೆ



ಮೈಸೂರು: ಮೈಸೂರಿನ ತಿಲಕ್‌ನಗರದ ನಿವಾಸಿ ಗೌರಿ.ಸಿ ಅವರು ಏಪ್ರಿಲ್ 18ರಂದು ಕೆಲಸಕ್ಕೆಂದು ಮನೆಯಿಂದ ಹೊರ ಹೋದವರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ಗೌರಿ ಅವರ ವಯಸ್ಸು 36 ವರ್ಷ, ದುಂಡುಮುಖ, ಸಾಧಾರಣ ಮೈಕಟ್ಟು, ಬಿಳಿ ಮೈಬಣ್ಣ ಉಳ್ಳವರಾಗಿದ್ದು, ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆ ಮಾತನಾಡುತ್ತಾರೆ. ಕಾಣೆಯಾದ ವೇಳೆ ನೀಲಿ ಬಣ್ಣದ ಟಾಪ್, ಕಪ್ಪು ಬಣ್ಣದ ಪ್ಯಾಂಟು, ಚೂಡಿದಾರ ಧರಿಸಿರುತ್ತಾರೆ. ಇವರ ಸುಳಿವು ಸಿಕ್ಕಲ್ಲಿ ಮೈಸೂರು ನಗರ, ಮಂಡಿ ಪೊಲೀಸ್ ಠಾಣೆ ದೂ. 0821–2418113,2418313, 2418339, 9480802237 ಮಾಹಿತಿ ನೀಡುವಂತೆ ಕೋರಿದೆ.

ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಸಿ.ರಮೇಶ್ ಅವರನ್ನು ಕನ್ನಡ ಸ್ನೇಹ ಬಳಗದ ಬಂದೀಗೌಡ, ರಾಜ್‌ಕುಮಾರ್, ಕೃಷ್ಣಪ್ಪ, ಮಂಜು, ಜೆಪಿ ಹಾಗೂ ಭೈರವ ಗ್ರೂಪ್ಸ್‌ನ ಮಹದೇವ, ಕುಮಾರ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಯುದ್ಧ–ಶಾಂತಿ ಕುರಿತಾದ ವ್ಯಂಗ್ಯ ಚಿತ್ರಕಲಾ ಪ್ರದರ್ಶನ



ವಿಶ್ವ ವ್ಯಂಗ್ಯ ಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯ ಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು ರಚಿತ 'ಯುದ್ಧ ಹಾಗೂ ಶಾಂತಿ' ಪ್ರತಿಬಿಂಬಿಸುವ ವ್ಯಂಗ್ಯ ಚಿತ್ರಕಲಾ ಪ್ರದರ್ಶನ ನಡೆಯಿತು.

ಮೈಸೂರು, ಮೇ 5(ಎಂಕೆ)– ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಬ್ಯಾಂಟರ್ ಬಾಬು ಪಬ್ಲಿಕೇಷನ್ ವತಿಯಿಂದ ಆಯೋಜಿಸಿದ್ದ ಖ್ಯಾತ ವ್ಯಂಗ್ಯಚಿತ್ರಕಾರ ಎಂ.ವಿ.ನಾಗೇಂದ್ರ ಬಾಬು ರಚಿತ 'ಯುದ್ಧ ಹಾಗೂ ಶಾಂತಿ' ಪ್ರತಿಬಿಂಬಿಸುವ ವ್ಯಂಗ್ಯ ಚಿತ್ರಕಲಾ ಪ್ರದರ್ಶನ ಮಂಗಳವಾರ ನಡೆಯಿತು.

ವ್ಯಂಗ್ಯ ಚಿತ್ರಗಳನ್ನು ವೀಕ್ಷಿಸುವ ಮೂಲಕ ಪ್ರದರ್ಶನಕ್ಕೆ ಚಾಲನೆ ನೀಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮಧ್ಯಪ್ರಾಚ್ಯ ಯುದ್ಧ, ಮಹಿಳಾ ಮೀಸಲಾತಿ ಮಸೂದೆ, ಜಾತಿ ವ್ಯವಸ್ಥೆ ಸೇರಿದಂತೆ ಹತ್ತು–ಹಲವು ವ್ಯಂಗ್ಯಚಿತ್ರಗಳು ಯುದ್ಧದಿಂದಾಗುವ ಪರಿಣಾಮಗಳ ಜೊತೆಗೆ ಶಾಂತಿ ಸ್ಥಾಪನೆಯ ಮಹತ್ವವನ್ನು ತಿಳಿಸುತ್ತಿವೆ ಎಂದರು.

ಜನಪ್ರತಿನಿಧಿಗಳು ಅಧಿಕಾರಕ್ಕೂ ಮುನ್ನ ಮತ್ತು ಅಧಿಕಾರ ದೊರೆತ ನಂತರ ಮಾತನಾಡುವ ವಿಚಾರಗಳನ್ನು ಆಧರಿಸಿ ವಿಡಂಬನಾತ್ಮಕ ವ್ಯಂಗ್ಯ ಚಿತ್ರಗಳನ್ನು ಚಿತ್ರಿಸಲಾಗಿದೆ. ವ್ಯಂಗ್ಯಚಿತ್ರಗಳ ಮೂಲಕ ಪ್ರಸ್ತುತ ಸಮಾಜದ ವಿದ್ಯಮಾನಗಳ ಕುರಿತು ತಮ್ಮ ಅಭಿಪ್ರಾಯ ಹೊರಹಾಕಿರುವ ವ್ಯಂಗ್ಯಚಿತ್ರಕಾರ ಬಾಬು ಅವರಿಂದ ಮತ್ತಷ್ಟು ವ್ಯಂಗ್ಯ ಚಿತ್ರಗಳು ರಚನೆಗೊಳ್ಳಲಿ ಎಂದು ಆಶಿಸಿದರು.

ಬಳಿಕ ಕಾರ್ಟೂನ್ ಸೂಪರ್ ಹೀರೋ 'ಆ್ಯಂಫಿಮ್ಯಾನ್' ಭಿತ್ತಿ ಚಿತ್ರ ಬಿಡುಗಡೆಗೊಳಿಸಿದ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಮಾತನಾಡಿ, ವಿಶ್ವದಲ್ಲಿ ಶಾಂತಿ ಸ್ಥಾಪನೆಯಾಗಬೇಕು ಎಂಬುದನ್ನು ವ್ಯಂಗ್ಯಚಿತ್ರಗಳ ಮೂಲಕ ಪ್ರತಿಪಾದಿಸಿರುವುದು ಶ್ಲಾಘನೀಯ. ಒಂದು ಚಿತ್ರ ನೂರು ಪದಗಳಿಗೆ ಸಮ ಎಂಬಂತೆ ಯುದ್ಧ ಮತ್ತು ಶಾಂತಿಯ ಕುರಿತಾ ವ್ಯಂಗ್ಯ ಚಿತ್ರಗಳು ಅಚ್ಚುಕಟ್ಟಾಗಿ ಮೂಡಿಬಂದಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರತಿಷ್ಠೆಯೇ ಕಾರಣ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಯುದ್ಧಗಳು ನಡೆಯುತ್ತಿರುವುದು ಹಸಿವು ಮತ್ತು ಬದುಕಿನ ಕಾರಣಕ್ಕಲ್ಲ. ಕೇವಲ ಪ್ರತಿಷ್ಠೆಯ ಕಾರಣಕ್ಕೆ ಮಕ್ಕಳೆಂಬ ಕರಣೆಯೂ ಇಲ್ಲದೆಯೇ ಬಾಂಬ್‌ಗಳನ್ನು ಹಾಕಲಾಗುತ್ತಿದೆ ಎಂದು ವಿಷಾದಿಸಿದರು.

ಹಿರಿಯ ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಟರ್ ಬಾಬು ಪಬ್ಲಿಕೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಆರ್.ಯೋಗನರಸಿಂಹನ್, ಕಾರ್ಯದರ್ಶಿ ಆರ್.ಚಕ್ರಪಾಣಿ, ಸಂಚಾಲಕ ಎನ್.ಅನಂತ್ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಪಶ್ಚಿಮ ಬಂಗಾಳದಲ್ಲಿ ಹಲವು ವರ್ಷ ಮುಚ್ಚಿದ್ದ ದೇವಾಲಯ ಮುಕ್ತ



ಕೊಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಐತಿಹಾಸಿಕ ಜಯ ದಾಖಲಿಸಿದ ಬೆನ್ನಲ್ಲೇ ಹಲವಾರು ವರ್ಷಗಳಿಂದ ಮುಚ್ಚಲ್ಪಟ್ಟಿದ್ದ ಶ್ರೀ ದುರ್ಗಾಮಾತಾ ಚಾರಿಟಬಲ್ ಟ್ರಸ್ಟ್ ನಿರ್ವಹಣೆಯ ದುರ್ಗಾ ದೇವಾಲಯವನ್ನು ಪುನಃ ತೆರೆಯಲಾಗಿದೆ. ದೀರ್ಘ ಕಾಲದ ಬಳಿಕ ದೇವಾಲಯ ತೆರೆದಿರುವುದರಿಂದ ಸ್ಥಳೀಯ ನಿವಾಸಿಗಳ ಸಂತಸ ಹೆಚ್ಚಿದ್ದು, ಅಧಿಕ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಿದ್ದಾರೆ. ದೇವಾಲಯದ ಸಮಿತಿ ಸದಸ್ಯೆಯೂ ಆಗಿರುವ ಬಿಜೆಪಿ ನಾಯಕಿ ನಿಲು ಚಕ್ರವರ್ತಿ ಮಾತನಾಡಿ, ಈ ಹಿಂದೆ ದೇವಾಲಯದ ಪ್ರವೇಶಕ್ಕೆ ನಿರ್ಬಂಧವಿತ್ತು ಮತ್ತು ಕೇವಲ ಹಬ್ಬಗಳ ಸಮಯದಲ್ಲಿ ಮಾತ್ರ ತೆರೆಯಲಾಗುತ್ತಿತ್ತು. ಈ ಬಗ್ಗೆ ಕೇಂದ್ರ ನಾಯಕತ್ವಕ್ಕೆ ಹಲವು ಬಾರಿ ಮನವಿ ಮಾಡಲಾಗಿತ್ತು. ಈಗ ರಾಜ್ಯದಲ್ಲಿ ಸರ್ಕಾರ ಬದಲಾಗಿದ್ದರಿಂದ ದೇವಾಲಯದ ಪುನರಾರಂಭ ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ. ಚುನಾವಣಾ ಪ್ರಚಾರದ ವೇಳೆ ಅಸನ್ಸೋಲ್ ಉತ್ತರ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಕೃಷ್ಣೇಂದು ಮುಖರ್ಜಿ, ತಾವು ಗೆದ್ದರೆ ದೇವಾಲಯವು ಭಕ್ತರಿಗಾಗಿ ತೆರೆದಿರುವಂತೆ ಮಾಡುವುದಾಗಿ ಭರವಸೆ ನೀಡಿದ್ದರು. ಈಗ ಶಾಸಕರಾಗಿ ಆಯ್ಕೆಯಾದ ಬೆನ್ನಲ್ಲೇ ದೇವಾಲಯಕ್ಕೆ ಭೇಟಿ ನೀಡಿ ಭರವಸೆ ಈಡೇರಿಸಿದ್ದಾರೆ.


ಲಘು ವಿಮಾನ ಕಟ್ಟಡಕ್ಕೆ ಡಿಕ್ಕಿ; ಮೂವರು ದುರ್ಮರಣ



ಬ್ರೆಜಿಲ್: ಐದು ಜನರನ್ನು ಹೊತ್ತೊಯ್ಯುತ್ತಿದ್ದ ಸಣ್ಣ ವಿಮಾನವೊಂದು ಆಗ್ನೇಯ ಬ್ರೆಜಿಲ್‌ನ ಬೆಲೊ ಹೊರಿಜಾಂಟೆಯಲ್ಲಿ ಸೋಮವಾರ ವಸತಿ ಕಟ್ಟಡಕ್ಕೆ ಅಪ್ಪಳಿಸಿದ ಪರಿಣಾಮ ಮೂವರು ಸಾವನ್ನಪ್ಪಿ ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನವು ಕಟ್ಟಡಕ್ಕೆ ಡಿಕ್ಕಿ ಹೊಡೆದ ವೀಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ತೀವ್ರವಾಗಿ ಗಾಯಗೊಂಡ ವ್ಯಕ್ತಿ ಕಟ್ಟಡದೊಳಗಿನ ಮೆಟ್ಟಿಲುಗಳ ಮೇಲೆ ಕುಳಿತಿರುವುದನ್ನು ದೃಶ್ಯಗಳಲ್ಲಿ ಕಾಣಬಹುದು. ನಗರ ಕೇಂದ್ರದಿಂದ ಸುಮಾರು 8 ಕಿ.ಮೀ ದೂರದಲ್ಲಿರುವ ಪಂಪುಲ್ಹಾ ವಿಮಾನ ನಿಲ್ದಾಣದಿಂದ ವಿಮಾನ ಹಾರಿದ ಸ್ವಲ್ಪ ಸಮಯದ ನಂತರ ಮೂರು ಅಂತಸ್ತಿನ ಕಟ್ಟಡಕ್ಕೆ ಡಿಕ್ಕಿ ಹೊಡೆದಿದೆ. ಈ ವಿಮಾನವು ಸಾವೊ ಪಾಲೊಗೆ ತೆರಳುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ. ಅಪಘಾತದಲ್ಲಿ ಪೈಲಟ್ ಮತ್ತು ಸಹ–ಪೈಲಟ್ ಸ್ಥಳದಲ್ಲೇ ಸಾವನ್ನಪ್ಪಿದ್ದು, ಪ್ರಯಾಣಿಕರೊಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಜಾಗತಿಕ ಮಾಧ್ಯಮಗಳಲ್ಲಿ ಪಂಚ ರಾಜ್ಯ ಚುನಾವಣೆ ಫಲಿತಾಂಶ ವಿಶ್ಲೇಷಣೆ



ನವದೆಹಲಿ: ಭಾರತದ ಪಂಚ ರಾಜ್ಯ ಚುನಾವಣಾ ಫಲಿತಾಂಶ, ಜಾಗತಿಕ ಮಟ್ಟದ ಮಾಧ್ಯಮಗಳಲ್ಲೂ ಪ್ರಮುಖ ವರದಿಯಾಗಿ ಪ್ರಕಟಗೊಂಡಿದೆ.

ಪಶ್ಚಿಮ ಬಂಗಾಳವನ್ನು ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಗೆದ್ದುಕೊಂಡಿದೆ. ಮೋದಿಯವರ 12 ವರ್ಷಗಳ ಅಧಿಕಾರಾವಧಿಯಲ್ಲಿ ಇದು ಅತ್ಯಂತ ಮಹತ್ವದ ಸಾಧನೆ. ಇದು ಒಬ್ಬ ಮುಖ್ಯಮಂತ್ರಿಯ ಸೋಲಲ್ಲ, ಬದಲಿಗೆ ಈಶಾನ್ಯ ಭಾರತದಲ್ಲಿ ಬಿಜೆಪಿಯ ಸುದೀರ್ಘ ಪಯಣದ ಯಶಸ್ಸು ಎಂದು 'ಬಿಬಿಸಿ' ಬಣ್ಣಿಸಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಮೊದಲ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಜಯಭೇರಿ ಭಾರಿಸಿದೆ. ಈ ಫಲಿತಾಂಶ ಭಾರತದ ರಾಜಕೀಯ ಚಿತ್ರಣವನ್ನು ಬದಲಿಸಿದೆ ಮತ್ತು ಈಗಾಗಲೇ ದುರ್ಬಲವಾಗಿರುವ ವಿರೋಧ ಪಕ್ಷಗಳಿಗೆ ಮತ್ತೊಂದು ಹೊಡೆತ ಬಿದ್ದಿದೆ ಎಂದು 'ದಿ ಗಾರ್ಡಿಯನ್' ವಿಶ್ಲೇಷಿಸಿದೆ. ಪ್ರಧಾನಿ ಮೋದಿಯವರು ಹಿಂದುತ್ವ, ರಾಷ್ಟ್ರೀಯವಾದ ನೀತಿಯಿಂದ ಟಿಎಂಸಿ ಭದ್ರಕೋಟೆಯನ್ನು ವಶಪಡಿಸಿಕೊಂಡಿದ್ದಾರೆ. ಬಂಗಾಳದ ಜಯ ಐತಿಹಾಸಿಕ ಗೆಲುವು. ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆಯು ಸ್ಥಾಪಿತ ಪಕ್ಷಗಳಿಗಿಂತ ಉತ್ತಮ ಪ್ರದರ್ಶನ ನೀಡಿರುವುದು ದೊಡ್ಡ ಅಚ್ಚರಿ ಎಂದು 'ನ್ಯೂಯಾರ್ಕ್ ಟೈಮ್ಸ್' ವರದಿ ಮಾಡಿದೆ.

ಚೀನಾದ ಪಟಾಕಿ ಘಟಕದಲ್ಲಿ ಭಾರೀ ಸ್ಫೋಟ: 21 ಕಾರ್ಮಿಕರು ಸಾವು



ಬೀಜಿಂಗ್: ಚೀನಾದ ಹುನಾನ್ ಪ್ರಾಂತ್ಯದ ಲಿಯುಯಾಂಗ್ ನಗರದಲ್ಲಿರುವ ಪಟಾಕಿ ಉತ್ಪಾದನಾ ಘಟಕದಲ್ಲಿ ಪ್ರಬಲ ಸ್ಫೋಟ ಸಂಭವಿಸಿದೆ.

ಹುನಾನ್ ಪ್ರಾಂತ್ಯದ ಲಿಯುಯಾಂಗ್ ನಗರದಲ್ಲಿ ಸಂಭವಿಸಿದ ಈ ದುರ್ಘಟನೆಯಲ್ಲಿ 21 ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದು, 61 ಜನ ಗಾಯಗೊಂಡಿದ್ದಾರೆ. ಸ್ಫೋಟದಿಂದ ಪಟಾಕಿ ತಯಾರಿಕಾ ಘಟಕ ಹಾಗೂ ಸುತ್ತಮುತ್ತ ತೀವ್ರ ಹಾನಿಯಾಗಿದ್ದು, ಅವಶೇಷಗಳು ಹಲವಾರು ಕಿಲೋ ಮೀಟರ್‌ಗಳಷ್ಟು ದೂರ ಹರಡಿಕೊಂಡಿವೆ. ಕಪ್ಪು ಪುಡಿ ಸಂಗ್ರಹಿಸಿದ್ದ ಎರಡು ಗೋದಾಮುಗಳ ಬಳಿ ಸ್ಫೋಟ ಸಂಭವಿಸಿರುವುದರಿಂದ ಸುತ್ತಮುತ್ತಲ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ. 480ಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದು, ಕಂಪನಿಯ ಹಿರಿಯ ಕಾರ್ಯನಿರ್ವಾಹಕರನ್ನು ಬಂಧಿಸಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಹಾಗೂ ಪ್ರಮುಖ ಕೈಗಾರಿಕೆಗಳಲ್ಲಿ ಕಠಿಣ ಸುರಕ್ಷಾ ತಪಾಸಣೆಗೆ ಚೀನಾ ಅಧ್ಯಕ್ಷ ಜಿನ್‌ಪಿಂಗ್ ಆದೇಶಿಸಿದ್ದಾರೆ.

ಮೋಸ್ಟ್ ವಾಂಟೆಡ್ ಮೊಹಮ್ಮದ್ ನವಾಸ್‌ನ ಕರೆತಂದ ಸಿಬಿಐ



ನವದೆಹಲಿ: ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ಪರಾರಿಯಾಗಿದ್ದ, ಇಂಟರ್‌ಪೋಲ್ ರೆಡ್ ನೋಟಿಸ್‌ಗೆ ಒಳಪಟ್ಟಿದ್ದ, ಭಾರತಕ್ಕೆ ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಮೊಹಮ್ಮದ್ ನವಾಸ್ ಕಕ್ಕತ್ ಇಸ್ಮಾಯಿಲ್ ಎಂಬಾತನನ್ನು ಯುಎಇಯಿಂದ ಸಿಬಿಐ ವಶಕ್ಕೆ ಪಡೆದಿದ್ದಾರೆ.

ಇಸ್ಮಾಯಿಲ್‌ನನ್ನು ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರೆತರಲಾಯಿತು. ಅಲ್ಲಿ ಆತನನ್ನು ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ಸುಲಿಗೆ ಮಾಡುತ್ತಿದ್ದ ದಂಧೆಯ ಪ್ರಮುಖ ಸಂಚುಕೋರನಾಗಿದ್ದ ಇಸ್ಮಾಯಿಲ್‌ನನ್ನು ಸುಲಿಗೆ, ವಂಚನೆ, ಕ್ರಿಮಿನಲ್ ದುರುಪಯೋಗ, ನಕಲಿ ದಾಖಲೆ ಸೃಷ್ಟಿ, ಸಂಘಟಿತ ಅಪರಾಧ ಸಿಂಡಿಕೇಟ್‌ನಲ್ಲಿ ಭಾಗವಹಿಸುವುದು ಇತ್ಯಾದಿ ಪ್ರಕರಣಗಳಿಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಹುಡುಕುತ್ತಿದ್ದರು. ದೆಹಲಿ ಪೊಲೀಸರ ಕೋರಿಕೆ ಮೇರೆಗೆ ಸಿಬಿಐ, ಇಂಟರ್‌ಪೋಲ್ ಚಾನೆಲ್‌ಗಳ ಮೂಲಕ ಆತನ ವಿರುದ್ಧ ರೆಡ್ ನೋಟಿಸ್ ಪ್ರಕಟಿಸಿತ್ತು. ಬಳಿಕ ಯುಎಇ ಅಧಿಕಾರಿಗಳು ಆ ವ್ಯಕ್ತಿಯು ಇರುವ ಸ್ಥಳವನ್ನು ಗುರುತಿಸಿ ಬಂಧಿಸಿದ್ದರು ಎಂದು ಫೆಡರಲ್ ಏಜೆನ್ಸಿಯ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಇಂಟರ್‌ಪೋಲ್ ಚಾನೆಲ್‌ಗಳ ಮೂಲಕ ಸಮನ್ವಯದ ಮೂಲಕ 150ಕ್ಕೂ ಹೆಚ್ಚು ವಾಂಟೆಡ್ ಕ್ರಿಮಿನಲ್‌ಗಳನ್ನು ಯಶಸ್ವಿಯಾಗಿ ಭಾರತಕ್ಕೆ ಮರಳಿ ಕರೆತರಲಾಗಿದೆ ಎಂದು ತಿಳಿದುಬಂದಿದೆ.

ಮೈಸೂರು ಮಿತ್ರ ಬುಧವಾರ 6 ಮೇ 2026

ಕೊಡವ ಸಮುದಾಯ ಮೂಲ ಸಂಸ್ಕೃತಿ ಸಂರಕ್ಷಿಸಿದೆ

ಮಡಿಕೇರಿ, ಮೇ 5– ತಮ್ಮ ಶ್ರೀಮಂತವಾದ ಮೂಲ ಸಂಸ್ಕೃತಿಯನ್ನು ಪ್ರಾಮಾಣಿಕ ರೀತಿಯಲ್ಲಿ ಸಂರಕ್ಷಿಸುವ ಮೂಲಕ ಕೊಡವ ಸಮುದಾಯದವರು ಮಾದರಿಯಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ಲಾಘಿಸಿದ್ದಾರೆ.

ಮಾದಾಪುರ ಕೊಡವ ಸಮಾಜದ ನೂತನ ಭವನ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಎಲ್ಲರೂ ಆಧುನೀಕತೆಯತ್ತ ನಾಗಾಲೋಟದಲ್ಲಿ ಸಾಗುತ್ತಿರುವಾಗ, ಕೊಡವರು ಮಾತ್ರ ತಮ್ಮ ಹಳೇ ಸಂಸ್ಕೃತಿಯ ಬುನಾದಿಯೊಂದಿಗೆ ಆಧುನಿಕತೆಯನ್ನೂ ಅಳವಡಿಸಿಕೊಂಡು ಪ್ರಬಲ ಮತ್ತು ಶ್ರೀಮಂತ ಸಂಸ್ಕೃತಿಯನ್ನು ಹೊಂದಿದ ಜನಾಂಗವಾಗಿ ಎಲ್ಲಾ ಸಮುದಾಯಕ್ಕೂ ಮಾದರಿಯಾಗಿದ್ದಾರೆ ಎಂದರು.

ತಮ್ಮ ಆಡಳಿತ ಅವಧಿಯಲ್ಲಿ ಕೊಡಗಿನ ಅಭಿವೃದ್ದಿಗಾಗಿ ಸಾಕಷ್ಟು ಅನುದಾನ ನೀಡಿದ್ದನ್ನು ಸ್ಮರಿಸಿಕೊಂಡ ಬೊಮ್ಮಾಯಿ, ಅನುದಾನ ನೀಡಿದ್ದು ಖಂಡಿತಾ ಸಾಧನೆಯಲ್ಲ. ಕೊಡಗಿನ ಜನರು ಸರ್ಕಾರಕ್ಕೆ ನೀಡಿದ್ದ ಆರ್ಥಿಕ ಸಂಪನ್ಮೂಲವನ್ನು ಮತ್ತೆ ಕೊಡಗಿನ ಜನತೆಗೇ ನೀಡುವ ಮೂಲಕ ಪುಣ್ಯ ಸಂಪಾದನೆಯ ಅವಕಾಶ ಮಾತ್ರ ತನ್ನದಾಯಿತು ಎಂದು ಭಾವನಾತ್ಮಕವಾಗಿ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಂಸದ ಯದುವೀರ್ ಮಾತನಾಡಿ, ಮಾದಾಪುರ ಕೊಡವ ಸಮಾಜದ ಭವನಕ್ಕೆ ಸಂಸದರ ಅನುದಾನದಲ್ಲಿ 25 ಲಕ್ಷ ರೂ. ನೀಡುವುದಾಗಿ ಘೋಷಿಸಿದರು. ಇದು ಕೊಡವರಿಗೆ ಸಲ್ಲಬೇಕಾದ ಗೌರವದ ಅನುದಾನ ಎಂದರಲ್ಲದೇ, ಕೊಡವ ಸಂಸ್ಕೃತಿ ಸಂರಕ್ಷಣೆಗೆ ಈ ಭವನ ಸೂಕ್ತ ವೇದಿಕೆಯಾಗಲಿ ಎಂದು ಆಶಿಸಿದರು. ಮೂಲ ಸಂಸ್ಕೃತಿ ಸಂರಕ್ಷಣೆ ನಿಟ್ಟಿನಲ್ಲಿ ಕೊಡವರ ಪ್ರಯತ್ನ ಕರ್ನಾಟಕದ ಇತರ ಸಮುದಾಯದರಿಗೂ ಪ್ರೇರಣೆಯಾಗಿದೆ ಎಂದು ಶ್ಲಾಘಿಸಿದರು.



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

> ದೆಹಲಿಗೆ ತೆರಳಿದಾಗಲೆಲ್ಲಾ ತಾನು ಕೊಡಗನ್ನು ಪ್ರತಿನಿಧಿಸುವ ಸಂಸದ ಎಂದಾಗ ಪ್ರತಿಯೋರ್ವರೂ ಕೊಡಗಿನ ಹೆಸರು ಕೇಳಿದೊಡನೆ ಗೌರವದಿಂದ ನೋಡುತ್ತಾರೆ. ಕೊಡಗಿನ ಕೀರ್ತಿ ಸರ್ವರಿಗೂ ಪರಿಚಿತವಾಗಿರುವುದು ಹೆಮ್ಮೆ ತಂದಿದೆ ಎಂದು ಹೇಳಿದರು. – **ಯದುವೀರ್, ಸಂಸದ**

ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ಕೊಡವರ ಸಂಸ್ಕೃತಿ ಹಿರಿಮೆಯ ಸಂರಕ್ಷಣೆಗಾಗಿ ಕೊಡವ ಸಮಾಜಗಳು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತಿವೆ ಎಂದು ಹೇಳಿದರು. ಮಾದಾಪುರ ಕೊಡವ ಸಮಾಜದ ಕಟ್ಟಡದ ಉಳಿದ ಕಾಮಗಾರಿಗಳಿಗೆ ಶಾಸಕರ ಅನುದಾನದಿಂದ 10 ಲಕ್ಷ ರೂ. ನೀಡುವುದಾಗಿ ಘೋಷಿಸಿದರು.

> ಕೊಡಗಿಗೆ ಯಾರೇ ಬಂದರೂ ಇಲ್ಲಿನವರನ್ನು ಗೆಲ್ಲಲು ಸಾಧ್ಯವಿಲ್ಲ; ಕೊಡವರು ತಮ್ಮ ಪ್ರೀತಿ, ವಿಶ್ವಾಸ, ಆತಿಥ್ಯದಿಂದ ಎಲ್ಲರನ್ನೂ ಸೋಲಿಸಿ ಬಿಡುತ್ತಾರೆ. ಕೊಡವರ ಸಾಂಪ್ರದಾಯಿಕ ಧಿರಿಸು, ಆಚಾರ, ವಿಚಾರಗಳು ಕೂಡ ಎಲ್ಲರ ಮನ ಗೆಲ್ಲುವಂತಿದೆ. ಹೀಗಾಗಿಯೇ ಯಾರೂ ಗೆಲ್ಲಲಾಗದ ಕೊಡವರು ನಿಜವಾದ ಅರ್ಥದಲ್ಲಿಯೂ ವೀರರಾಗಿದ್ದಾರೆ. – **ಬಸವರಾಜ ಬೊಮ್ಮಾಯಿ**

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ, ಮಾಜಿ ಸಚಿವ ಅಪ್ಪಚ್ಚು ರಂಜನ್, ಮಾಜಿ ಶಾಸಕಿ ಶಾಂತೆಯಂಡ ವೀಣಾ ಅಚ್ಚಯ್ಯ, ಎಸ್‌ಎಲ್‌ಎನ್ ಸಂಸ್ಥೆಯ ಉದ್ಯಮಿ ಸಾತಪ್ಪನ್, ಸಮಾಜದ ಅಧ್ಯಕ್ಷ ಮಂಡೇಪಂಡ ಮನುಮೇದಪ್ಪರವರುಗಳು ಮಾತನಾಡಿದರು. ಮಾಜಿ ಶಾಸಕ ಮಂಡೇಪಂಡ ಸುನಿಲ್ ಸುಬ್ರಮಣಿ, ಉದ್ಯಮಿಗಳಾದ ವಿಶ್ವಾಥನ್, ನಾಪಂಡ ಮುತ್ತಪ್ಪ, ತೆರಿಗೆ ಇಲಾಖೆ ಆಯುಕ್ತ ಜಯರಾಮ್, ಪದ್ಮಶ್ರೀ ಮಚ್ಚಂಡ ರೋಹನ್ ಬೋಪಣ್ಣ ಅವರ ತಂದೆ ಮಚ್ಚಂಡ ಬೋಪಣ್ಣ, ಸಮಾಜದ ಉಪಾಧ್ಯಕ್ಷ ಪಾಸುರ ಎನ್. ಉತ್ತಪ್ಪ, ಆಡಳಿತ ಮಂಡಳಿಯ ನಿರ್ದೇಶಕರು ಹಾಜರಿದ್ದರು.

ಗುಂಡು ಹಾರಿಸಿಕೊಂಡು ಕೊಡಗಿನ ಯೋಧ ಆತ್ಮಹತ್ಯೆ

ಮೃತರ ಸ್ವಗ್ರಾಮದಲ್ಲಿ ಇಂದು ಅಂತ್ಯಕ್ರಿಯೆ


ನವೀನ್

ಮಡಿಕೇರಿ, ಮೇ 5– ಕರ್ತವ್ಯದಲ್ಲಿದ್ದಾಗಲೇ ಮೂಲತಃ ಕೊಡಗಿನ ಸಿಆರ್‌ಪಿಎಫ್ ಯೋಧನೊಬ್ಬ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ದಕ್ಷಿಣ ಕಾಶ್ಮೀರದ ಪುಲ್ವಾಮದಲ್ಲಿ ನಿನ್ನೆ ನಡೆದಿದೆ.


ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮ ನಿವಾಸಿ ಕೀಜನ ಜೋಯ್ಯಪ್ಪ, ವಿಶಾಲಾಕ್ಷಿ ದಂಪತಿ ಪುತ್ರ ಕೆ.ಜಿ.ನವೀನ್ (40) ಮೃತ ಯೋಧರಾಗಿದ್ದಾರೆ.

ಘಟನೆ ಹಿನ್ನೆಲೆ: ಸಿಆರ್‌ಪಿಎಫ್ 108ನೇ ಬೆಟಾಲಿಯನ್ ಯೋಧರಾಗಿದ್ದ ಕೆ.ಜಿ. ನವೀನ್, 2007ರಲ್ಲಿ ಅರೆ ಸೇನಾಪಡೆಗೆ ಸೇರ್ಪಡೆಯಾಗಿದ್ದರು. 2026ರ ಮಾರ್ಚ್ 20ರಿಂದ ಏ.17ರವರೆಗೆ ರಜೆ ಪಡೆದು ಸ್ವಗ್ರಾಮಕ್ಕೆ ಬಂದಿದ್ದರು. ರಜೆ ಬಾಕಿಯಿದ್ದರೂ ಕಚೇರಿ ಆದೇಶದಂತೆ ಏ. 2ರಂದೇ ಕರ್ತವ್ಯಕ್ಕೆ ಹಾಜರಾಗಿದ್ದರು. ನವೀನ್ ಅವರನ್ನು ದಕ್ಷಿಣ ಕಾಶ್ಮೀರದ ಟ್ರಾಲ್ ಏರಿಯಾದ ಲಡಿಯಾರ ಕ್ಯಾಂಪ್ ರಕ್ಷಣಾ ವಾಚ್ ಟವರ್‌ನಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು.

ಮೇ.4ರ ಮಧ್ಯಾಹ್ನ 2 ಗಂಟೆಯಲ್ಲಿ ತನ್ನ ಬಳಿ ಇದ್ದ ಬಂದೂಕಿನಿಂದ ಕುತ್ತಿಗೆ ಭಾಗಕ್ಕೆ ಗುಂಡು ಹೊಡೆದುಕೊಂಡಿದ್ದಾರೆ. ಗುಂಡಿನ ಶಬ್ದ ಕೇಳಿ ಇತರ ಸಿಬ್ಬಂದಿಗಳು ವಾಚ್ ಟವರ್ ಬಳಿ ಬಂದು ನೋಡಿದಾಗ ನವೀನ್ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡು ಬಂದಿದೆ. ತಕ್ಷಣವೇ ಅವರನ್ನು ಶ್ರೀನಗರದ ಮಿಲಿಟರಿ ಆಸ್ಪತ್ರೆಗೆ ಕರೆತರಲಾಗಿತ್ತು. ಆರ್ಮಿ ಆಸ್ಪತ್ರೆ ವೈದ್ಯರು ನವೀನ್ ಅದಾಗಲೇ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ. ಘಟನಾ ಸ್ಥಳಕ್ಕೆ ಜಮ್ಮು ಕಾಶ್ಮೀರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಿಆರ್‌ಪಿಎಫ್ ಅಧಿಕಾರಿಗಳು ಈ ಬಗ್ಗೆ ಮೃತರ ಪೋಷಕರಿಗೆ ಮಾಹಿತಿ ನೀಡಿದ್ದಾರೆ.

ಶ್ರೀನಗರ ಸೇನಾ ಆಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ದೇಹವನ್ನು ಬೆಂಗಳೂರಿನ ಯಲಹಂಕದಲ್ಲಿರುವ ಸಿಆರ್‌ಪಿಎಫ್ ಕಚೇರಿಗೆ ತಂದು, ಅಲ್ಲಿಂದ ಮೇ.5ರ ರಾತ್ರಿ ಕೊಡಗಿಗೆ ತರಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ. ಬಳಿಕ ಅಲ್ಲಿಂದ ಕುಶಾಲನಗರ ಮಾರ್ಗವಾಗಿ ಸೋಮವಾರಪೇಟೆ ಯಡವಾರೆ ಗ್ರಾಮಕ್ಕೆ ತರಲಾಗುತ್ತದೆ ಎಂದು ತಿಳಿದು ಬಂದಿದೆ. ಮೃತರು ತಂದೆ, ತಾಯಿ, ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಅಂತ್ಯಕ್ರಿಯೆ ಮೇ.6ರಂದು ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ತಿಳಿದು ಬಂದಿದೆ.

ಪಂಚ ರಾಜ್ಯಗಳಲ್ಲಿ ಗೆಲುವು: ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಪ್ರೇರಣೆ


ಬೊಮ್ಮಾಯಿ

ಮಡಿಕೇರಿ,ಮೇ 5–ಪಂಚ ರಾಜ್ಯಗಳ ಚುನಾವಣೆಗಳ ಪೈಕಿ 3 ರಾಜ್ಯಗಳಲ್ಲಿ ಬಿಜೆಪಿಯ ಅಭೂತಪೂರ್ವ ಗೆಲವು ಸಾಧಿಸಿದೆ. ಇದು ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ಪ್ರೇರಣೆಯಾಗಿದೆ ಎಂದು ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಮೇ.9ರಂದು ಚಿತ್ರದುರ್ಗದಲ್ಲಿ ಆಯೋಜಿತ ಯಡಿಯೂರಪ್ಪ ಅಭಿನಂದನೋತ್ಸವದ ಮೂಲಕ ರಾಜ್ಯದಲ್ಲಿ ಬಿಜೆಪಿ ಚುನಾವಣಾ ರಣಕಹಳೆ ಊದಲಿದೆ. ಆ ವಿಜಯೋತ್ಸವ ಕಾಂಗ್ರೆಸ್ ಸರ್ಕಾರದ ಪತನಕ್ಕೆ ದಿನಗಣನೆ ಪ್ರಾರಂಭಿಸಲಿದೆ ಎಂದು ಸುದ್ದಿಗಾರರ ಬಳಿ ಭವಿಷ್ಯ ನುಡಿದರು.

ಮಮತಾ ಬ್ಯಾನರ್ಜಿಯ ಸರ್ವಾಧಿಕಾರವನ್ನು ಅಂತ್ಯಗೊಳಿಸಿದ ಮೋದಿ ಮತ್ತು ಅಮಿತ್ ಷಾ ಜೋಡಿಯ ಕಾರ್ಯತಂತ್ರ ಭಾರತೀಯರ ಮೆಚ್ಚುಗೆಗಳಿಸಿದೆ ಎಂದರು. ರಾಜ್ಯದಲ್ಲಿ ಉಪ ಚುನಾವಣೆಯ ಸಂದರ್ಭ ಮತದಾನಕ್ಕೆ 2 ದಿನಗಳು ಇರುವಾಗ ಕಾಂಗ್ರೆಸ್ ಪಕ್ಷ ಹಣ, ಹೆಂಡವನ್ನು ಹಂಚುವ ಮೂಲಕ ಕರಾಳ ರಾತ್ರಿಯ ನೆನಪನ್ನು ತಂದು ಕುಟಿಲ ತಂತ್ರದಿಂದ ಚುನಾವಣೆಯನ್ನು ಗೆದ್ದಿದೆ ಎಂದು ಅವರು ಆರೋಪಿಸಿದರು.

ಪ.ಬಂಗಾಳ ಕಾರ್ಯ ತಂತ್ರವನ್ನೇ ಬಳಸಲಾಗುವುದು


ಯದುವೀರ್

ಮಡಿಕೇರಿ, ಮೇ 5–ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸಾಧಿಸಿದ ಅದ್ಭುತ ಗೆಲುವಿನ ಕಾರ್ಯತಂತ್ರವನ್ನೇ ರಾಜ್ಯದಲ್ಲೂ ವಿಧಾನಸಭಾ ಚುನಾವಣೆಗೆ ಬಳಸಿಕೊಂಡು ಗೆಲವು ಸಾಧಿಸಲಾಗುತ್ತದೆ ಎಂದು ಸಂಸದ ಯದುವೀರ್ ಹೇಳಿದ್ದಾರೆ. ಮಾದಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯದುವೀರ್, ಪಶ್ಚಿಮ ಬಂಗಾಳದ ಗೆಲವು ಬಿಜೆಪಿಯಲ್ಲಿ ಮತ್ತೆ ಹೊಸ ಸಂಭ್ರಮ, ಉತ್ಸಾಹ ಮೂಡಿಸಿದೆ. ಮುಂದಿನ ಚುನಾವಣೆಯಲ್ಲಿ ಇದೇ ಮಾದರಿಯನ್ನು ಅನುಸರಿಸಿ ಈ ಮೂಲಕ ಜನವಿರೋಧಿ ಕಾಂಗ್ರೆಸ್ ಸರ್ಕಾರದ ಅಂತ್ಯವಾಗಲಿದೆ ಎಂದೂ ಸಂಸದ ಯದುವೀರ್ ಹೇಳಿದರು.

ಕಾಡಾನೆಗಳ ಉಪಟಳ ತಡೆಯದಿದ್ದರೆ ಹೋರಾಟ ಅನಿವಾರ್ಯ

ವಿರಾಜಪೇಟೆ, ಮೇ.5–ತಾಲೂಕಿನಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿದ್ದು, ರೈತರು ತೋಟದಲ್ಲಿ ಬೆಳೆದ ತೆಂಗಿನ ಗಿಡ ಮರ, ಫಸಲಿಗೆ ಬಂದ ಬಾಳೆ, ಹಾಗೂ ಕಾಫಿಗಿಡಗಳನ್ನು ಮುರಿದು ನೆಲಸಮ ಮಾಡುತ್ತಿರುವುದನ್ನು ಅರಣ್ಯ ಅಧಿಕಾರಿಗಳಿಗೆ ತಿಳಿಸಿದರೂ ಗಮನ ಹರಿಸುತ್ತಿಲ್ಲ ಅದರಿಂದ ಸರಕಾರ ಎಚ್ಚೆತ್ತುಕೊಳ್ಳದಿದ್ದರೆ ಹೋರಾಟ ಅನಿವಾರ್ಯವಾಗುತ್ತದೆ ಎಂದು ಕರ್ನಾಟಕ ಕಾಫಿ ರೈತರ ಸಂಘದ ಸಂಚಾಲಕ ಚಾಮಿಯಾಲ ಮೈತಾಡಿಯ ಕೆ.ಹೆಚ್.ಹನೀಫ ಎಚ್ಚರಿಸಿದ್ದಾರೆ.

ತಾಲೂಕಿನ ಮಲ್ಲಂಬಟ್ಟಿ, ಮೈತಾಡಿ, ಹಾಲುಗುಂದ, ಬೆಳ್ಳರಿಮಾಡು, ಚೆಂಬೆಬೆಳ್ಳೂರು, ದೇವಣಗೇರಿ, ಬಟ್ಟಮಕ್ಕಿ ಗ್ರಾಮಗಳ ತೋಟಗಳಿಗೆ ಕಾಡಾನೆಗಳ ಹಿಂಡು ನಿರಂತರ ದಾಳಿನಡೆಸಿ ರೈತರು ಬೆಳೆದ ಫಸಲಿಗೆ ಬಂದ ಗಿಡಗಳನ್ನು ನಾಶಪಡಿಸುತ್ತಿವೆ. ಈ ಸಂಬಂಧ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ದೂರು ನೀಡಿದರೆ ಒಂದು ಊರಿನಿಂದ ಮತ್ತೊಂದು ಊರಿಗೆ ಓಡಿಸುತ್ತಾರೆ. ಮರು ದಿನವೆ ಹಿಂದಿರುಗಿ ಮತ್ತೆ ಅದೇ ಜಾಗಕ್ಕೆ ಆನೆಗಳು ಬರುತ್ತವೆ ನಿರಂತರ ಕಾಡಾನೆಗಳ ಕಾಟದಿಂದಾಗಿ ರೈತರು ಬೇಸತ್ತು ಹೋಗಿದ್ದಾರೆ. ಇತ್ತೀಚೆಗೆ ಕಾಡಾನೆಗಳ ದಾಳಿಯಿಂದ ರೈತರು ನೂರಾರು ಎಕರೆ ಗದ್ದೆಯಲ್ಲಿ ಭತ್ತ ಬೆಳೆಯುವುದನ್ನೆ ಅನೇಕರು ನಿಲ್ಲಿಸಿದ್ದಾರೆ ಎಂದು ಬೇಸರ ವ್ಯಕ್ತ ಪಡಿಸಿದ ಹನೀಫ ಅವರು ಆನೆ ದಾಳಿಯಿಂದ ಕೃಷಿಯಲ್ಲಿ ಲಕ್ಷ ರೂ. ನಷ್ಟ ಸಂಭವಿಸಿರುವುದನ್ನು ಅರಣ್ಯ ಕಚೇರಿಗೆ ಮನವಿ ಸಲ್ಲಿಸಿದರು ಅನೇಕ ಬಾರಿ ಅಲೆದು ನಂತರ 5 ರಿಂದ 7 ಸಾವಿರ ಪರಿಹಾರ ನೀಡುತ್ತಾರೆ ಇದರಿಂದ ಏನು ಮಾಡಲು ಸಾಧ್ಯವಿದೆ ಎಂದು ದೂರಿದ ಅವರು ಕಾಡಾನೆಗಳ ಹಾವಳಿಗೆ ಸರಕಾರ ಶಾಶ್ವತ ಪರಿಹಾರ ಒದಗಿಸುವಂತಾಗಬೇಕು ಎಂದು ಅಗ್ರಹಿಸಿದರು.



ಟಿ.ಟಿ.ಉದಯಕುಮಾರ್, ಮೈತಾಡಿ ಗ್ರಾಮದ ಕೆ.ಹಂಸ ಮಾತನಾಡಿದರು.

ಕರ್ನಾಟಕ ಕಾಫಿ ರೈತ ಸಂಘದ ಡಾ.ಐ.ಆರ್. ದುರ್ಗಾ ಪ್ರಸಾದ್ ಮಾತನಾಡಿ, ಕಾಡಾನೆಗಳು ಮತ್ತು ಹುಲಿಯ ಹಾವಳಿಯಿಂದ ಅನೇಕರು ಮೃತಪಟ್ಟಿದ್ದಾರೆ ಅದನ್ನು ತಡೆಗಟ್ಟಲು ಸರಕಾರ ಅರಣ್ಯದಲ್ಲಿಯೇ ವನ್ಯಜೀವಿಗಳಿಗೆ ಅಹಾರ ಮತ್ತು ಕುಡಿಯಲು ನೀರಿನ ವ್ಯವಸ್ಥೆ ಕಲ್ಪಿಸುವಂತಾಗಬೇಕು ಆಗಮಾತ್ರ ಕಾಡು ಪ್ರಾಣಿಗಳು ನಾಡಿಗೆ ಬರುವುದನ್ನು ಕಡಿಮೆ ಮಾಡಬಹುದು ಎಂದು ಸಲಹೆ ನೀಡಿದರು.

ತಾಲೂಕಿನಲ್ಲಿ ಸಂಜೆ ಭಾರೀ ಮಳೆ

ಮಡಿಕೇರಿ, ಮೇ 5– ನಗರ ಸೇರಿದಂತೆ ತಾಲೂಕು ವ್ಯಾಪ್ತಿಯಲ್ಲಿ ಮಂಗಳವಾರ ಸಂಜೆ ಉತ್ತಮ ಮಳೆಯಾಗುವ ಮೂಲಕ ಬಿಸಿಲಿನ ಬೇಗೆಯಿಂದ ಕಾದು ಕೆಂಡದಂತಾಗಿದ್ದ ಭೂಮಿಗೆ ವರುಣ ತಂಪೆರೆದಿದ್ದಾನೆ. ಮಡಿಕೇರಿ, ಗಾಳಿಬೀಡು, ಮಕ್ಕಂದೂರು, ಮೇಕೇರಿ, ಕಗ್ಗೋಡ್ಲು, ಮೂರ್ನಾಡು, ಕಿಗ್ಗಾಲು ವ್ಯಾಪ್ತಿಯಲ್ಲಿ ಗುಡುಗು ಸಿಡಿಲಿನ ಸಹಿತ ಮಳೆಯಾಗಿದ್ದು, ಜನರಲ್ಲಿ ಹರ್ಷ ಮೂಡಿಸಿದೆ. ಬಿಸಿಲಿನ ತಾಪಕ್ಕೆ ಸಿಲುಕಿ ಒಣಗಿ ನಿಂತಿದ್ದ ಹಸಿರಿನ ಪರಿಸರಕ್ಕೂ ವರುಣ ನೆಮ್ಮದಿ ಕರುಣಿಸಿದ್ದಾನೆ. ಸುಡು ಬಿಸಿಲಿನಿಂದ ಬತ್ತುವ ಹಂತಕ್ಕೆ ತಲುಪಿದ್ದ ನೀರಿನ ಸೆಲೆಗಳು ಕೂಡ ಮರು ಜೀವ ಪಡೆದುಕೊಂಡಂತಾಗಿದೆ.

ಆಟೋ ಚಾಲಕನ ಮೇಲೆ ಮಾರಣಾಂತಿಕ ಹಲ್ಲೆ



ನಾಪೋಕ್ಲು: ಆಟೋ ಚಾಲಕನನ್ನು ಅಪಹರಿಸಿ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆಯೊಂದು ಸೋಮವಾರ ಸಂಜೆ ಬೇತುಗ್ರಾಮದಲ್ಲಿ ನಡೆದಿದೆ.

ಹಲ್ಲೆಗೊಳಗಾದ ಆಟೋಚಾಲಕ (ಪತ್ರಿಕಾ ವರದಿಗಾರ) ಝುಕರಿಯ ತೀವ್ರವಾಗಿ ಗಾಯಗೊಂಡು ರಕ್ತಸ್ರಾವದಿಂದ ಚರಂಡಿಗೆ ಬಿದ್ದಿದ್ದನ್ನು ಗಮನಿಸಿದ ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಪೊಲೀಸರು ಇಲ್ಲಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲು ಮಾಡಿದ್ದಾರೆ

ಆಸ್ತಿ ವೈಷಮ್ಯದ ಹಿನ್ನೆಲೆಯಲ್ಲಿ ಈ ಹಲ್ಲೆ ನಡೆದಿದೆ ಎನ್ನಲಾಗಿದ್ದು ಇಲ್ಲಿಯ ನಾಫಿ ಮತ್ತು ಸಿದ್ದಿಕ್ ಎಂಬ ಯುವಕರ ತಂಡ ಅಪಹರಿಸಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ ಎಂಬ ಆರೋಪ ವ್ಯಕ್ತವಾಗಿದೆ. ಠಾಣಾಧಿಕಾರಿ ಬಿ.ಜಿ.ರಾಘವೇಂದ್ರ ಆಸ್ಪತ್ರೆಗೆ ಭೇಟಿ ನೀಡಿ ಝುಕರಿಯ ಅವರ ಹೇಳಿಕೆಯನ್ನು ಪಡೆದುಕೊಂಡು ಪ್ರಕರಣ ದಾಖಲಿಸಿಕೊಂಡು ಪರಾರಿಯಾಗಿರುವ ಆರೋಪಿಗಳ ಶೋಧನೆಯಲ್ಲಿ ತೊಡಗಿದ್ದಾರೆ.

ಮರ ಬಿದ್ದು ಕೋಳಿಗೂಡು ಹಾನಿ

ನಾಪೋಕ್ಲು, ಮೇ5–ಇಲ್ಲಿಗೆ ಸಮೀಪದ ಬಾವಲಿ ಗ್ರಾಮದಲ್ಲಿ ಭಾರೀ ಮಳೆಗಾಳಿಗೆ ಬೈನೇಮರ ಬಿದ್ದು ಕೋಳಿಗೂಡು ಸಂಪೂರ್ಣ ಧ್ವಂಸವಾಗಿದೆ.

ಪಾರಾಣೆ ಗ್ರಾಪಂನ ಬಾವಲಿ ಗ್ರಾಮದ ನಿವಾಸಿ ದೇವನಈರಪ್ಪ ಎಂಬುವರಿಗೆ ಸೇರಿದ ಕೋಳಿಗೂಡಿನ ಕಟ್ಟಡದ ಮೇಲೆ ಮಂಗಳವಾರ ಸಂಜೆ ವಿಪರೀತ ಗಾಳಿ ಮಳೆಗೆ ಬೈನೇ ಮತ್ತು ಅಡಿಕೆ ಮರ ಬಿದ್ದಿವೆ. ಇದರಿಂದಾಗಿ ಕೋಳಿ ಗೂಡಿನ ಚಾವಣಿಗೆ ಅಳವಡಿಸಿದ್ದ ಸಿಮೆಂಟ್ ಶೀಟ್ ಸೇರಿದಂತೆ ಕಟ್ಟಡ ಸಂಪೂರ್ಣ ಹಾನಿಯಾಗಿದ್ದರೂ ಕೋಳಿಗಳು ಪ್ರಾಣಾಪಾಯದಿಂದ ಪಾರಾಗಿವೆ.

ಶಾಸಕರಿಂದ ನೀರಿನ ಪಾಯಿಂಟ್ ಪರಿಶೀಲನೆ

ಚಾಮರಾಜನಗರ, ಮೇ 5–ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿರುವ ಸಂಬಂಧ ಕೊಳವೆ ಬಾವಿ ಕೊರೆಸಿರುವ ರಾಮಸಮುದ್ರದ 29, 30ನೇ ವಾರ್ಡ್, ಗಾಳಿಪುರ 2ನೇ ವಾರ್ಡಿಗೆ ಸೋಮವಾರ ಪೇಟೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪಾಯಿಂಟ್ ಮಾಡಿಸಿರುವ ಜಾಗದಲ್ಲಿ ನೀರು ಬರುತ್ತಿರುವುದನ್ನು ವೀಕ್ಷಿಸಿದರು.

ಇದೇವೇಳೆ ಶಾಸಕರು ಪಾಯಿಂಟ್ ಮಾಡಿಸಿ, ಕೊಳವೆಬಾವಿ ಕೊರೆಸಿರುವ ಕಡೆ ಕುಡಿಯುವ ನೀರು ಸಿಗುತ್ತಿದ್ದು, ಕೂಡಲೇ ಹೊಸಪೈಪ್‌ಲೈನ್ ಕಾಮಗಾರಿ ಕೈಗೊಳ್ಳಬೇಕು, ಮೋಟಾರ್ ಅಳವಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ನಗರಸಭೆ ಮಾಜಿ ಉಪಾಧ್ಯಕ್ಷ ರಾಜಪ್ಪ, ಮಾಜಿ ಸದಸ್ಯ ಪುಟ್ಟಸ್ವಾಮಿ, ಕುಮಾರ್, ಉಮೇಶ್, ಕರುಣಾಕರ್, ನಂಜುಂಡ, ಶಿವಮೂರ್ತಿ, ನಗರಸಭೆ ಆಯುಕ್ತ ಪರಶುರಾಂ ಛಲವಾದಿ, ಆರೋಗ್ಯ ನಿರೀಕ್ಷಕ ಮಂಜು, ನಿವಾಸಿಗಳು ಹಾಜರಿದ್ದರು.


ಶಾಸಕ ಸಿ.ಪುಟ್ಟರಂಗಶೆಟ್ಟಿ ರೀಪಾಯಿಂಟ್ ಜಾಗದಲ್ಲಿ ನೀರು ಬರುತ್ತಿರುವುದನ್ನು ವೀಕ್ಷಿಸಿದರು.

ಮನವಿ ಸಲ್ಲಿಕೆ : ನಗರಸಭೆ ವ್ಯಾಪ್ತಿಯ ರಾಮಸಮುದ್ರದಲ್ಲಿ ಮೇ 8ರಿಂದ 11ರ ವರಗೆ ರಾಮಲಿಂಗ ಚೌಡೇಶ್ವರಿ ಅಮ್ಮನವರ 47ನೇ ವರ್ಧಂತ್ಯೋತ್ಸವ ಹಾಗೂ ಕತ್ತಿಹಬ್ಬ ನಡೆಯಲಿದ್ದು. ಸಮರ್ಪಕ ನೀರು ಸರಬರಾಜು ಮಾಡುವಂತೆ ಕೋರಿ ಶಾಸಕರಿಗೆ ನಿವಾಸಿಗಳು ಮನವಿ ಸಲ್ಲಿಸಿದರು.

4 ದಿನಗಳ ಕಾಲ ಹಬ್ಬ ನಡೆಯಲಿರುವ ಹಿನ್ನಲೆಯಲ್ಲಿ ಮೆಟ್ಲಿಂಗ್ ಹಾಕಿಬಿಟ್ಟಿರುವ ರಸ್ತೆಗೆ ಡಾಂಬರು ಹಾಕಿಸಬೇಕು, ಕಸವಿಲೇವಾರಿಗೆ ಕ್ರಮವಹಿಸಬೇಕು, ಚರಂಡಿ ಹೂಳೆತ್ತುವಂತೆ, ಸಮರ್ಪಕ ಕುಡಿಯುವ ನೀರು ಪೂರೈಸಲು ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು.

ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಚೆಕ್ ವಿತರಣೆ


ಒಕ್ಕೂಟದ ಅಧ್ಯಕ್ಷ ಹೆಚ್.ಎಸ್.ನಂಜುಂಡ ಪ್ರಸಾದ್ ಚೆಕ್ಕನ್ನು ವಿತರಿಸಿದರು.

ಗುಂಡ್ಲುಪೇಟೆ ಮೇ 5(ಸೋಮ್.ಜಿ)– ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ನೀಡುವ ಕಟ್ಟಡ ಅನುದಾನವನ್ನು ತಾಲೂಕಿನ ಪುತ್ತನಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ 3 ಲಕ್ಷ ಹಾಗೂ ಕುಂದಕೆರೆ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ 3 ಲಕ್ಷದಂತೆ ಒಟ್ಟು 6 ಲಕ್ಷ ರೂಗಳ ಚೆಕ್ಕನ್ನು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್ ಎಸ್ ನಂಜುಂಡ ಪ್ರಸಾದ್ ವಿತರಿಸಿದರು.

ಸಂಘಗಳು ಮೂಲಭೂತ ಸೌಲಭ್ಯಗಳೊಂದಿಗೆ ಸುಸಜ್ಜಿತ ಕಟ್ಟಡ ಹಾಗೂ ಹಾಲು ಶೇಖರಣ ಘಟಕಗಳನ್ನು ಹೊಂದಿ ಗುಣಮಟ್ಟದ ಹಾಲು ಶೇಖರಿಸುವಂತೆ ತಿಳಿಸಿದರು. ನಿರ್ದೇಶಕ ಎಂಪಿ ಸುನಿಲ್ ಮಾತನಾಡಿ ಸಂಘಗಳು ತಮ್ಮಲ್ಲಿರುವ ನಿಧಿಗಳು ಹಾಗೂ ಒಕ್ಕೂಟದ ಸಹಾಯ ಧನವನ್ನು ಪಡೆದು ಸ್ವಂತ ಕಟ್ಟಡ ನಿರ್ಮಿಸಿಕೊಳ್ಳಲು ಅನುದಾನ ನೀಡುತ್ತಿದ್ದು ಅದನ್ನು ಸದುಪಯೋಗಪಡಿಸಿಕೊಳ್ಳಲು ತಿಳಿಸಿದರು. ಈ ಸಂದರ್ಭದಲ್ಲಿ ತಾಲೂಕಿನ ವಿಸ್ತರಣಾಧಿಕಾರಿ ಪ್ರಕಾಶ್ ಹೆಚ್.ಉದಯ್, ಮಂಜೇಶ್ ಹಾಜರಿದ್ದರು.

ಶೌಚಾಲಯ ಸ್ವಚ್ಛಗೊಳಿಸುವಂತೆ ತಾಪಂ ಇಓ ಕಿರುಕುಳ ವಿರೋಧಿಸಿ

ದಲಿತಪರ ಸಂಘಟನೆಗಳ ಪ್ರತಿಭಟನೆ

ಕೊಳ್ಳೇಗಾಲ, ಮೇ 5– ತಾಲೂಕು ಪಂಚಾಯಿತಿ ಇಓ ಗುರುಶಾಂತಪ್ಪ ಹೊರ ಗುತ್ತಿಗೆಯ ನೌಕರರಿಗೆ ಕಚೇರಿಯ ಶೌಚಾಲಯ ಸ್ವಚ್ಛಗೊಳಿಸುವಂತೆ ದಬ್ಬಾಳಿಕೆ ನಡೆಸಿ ಬೆದರಿಕೆವೊಡ್ಡುತ್ತಿರುವ ಅವರನ್ನು ಅಮಾನತ್ತುಗೊಳಿಸಬೇಕು ಎಂದು ಆಗ್ರಹಿಸಿ ನಡೆಸಿದ ದಲಿತ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮಂಗಳವಾರ ಬೆಳಗ್ಗೆ ತಾ.ಪಂ ಇ.ಓ ಗುರುಶಾಂತಪ್ಪ ಬೆಳ್ಳುಂಡಗಿಯವರನ್ನು ಅಮಾನತ್ತುಗೊಳಿಸುವಂತೆ ತಾ.ಪಂ ಕಚೇರಿ ಮುಂಭಾಗದಲ್ಲಿ ಪ್ರಗತಿಪರ ಸಂಘ ಟನೆಗಳ ಒಕ್ಕೂಟ ಅನಿರ್ದಿಷ್ಟ ಪ್ರತಿ ಭಟನೆಗೆ ಮುನ್ನ ಅಂಬೇಡ್ಕರ್ ಪ್ರತಿಮೆ ಮುಂಭಾಗದಿಂದ ಹೊರಟ ಪ್ರತಿಭಟನಾಕಾರರು ಇಓ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಅಮಾನತ್ತಿಗೆ ಆಗ್ರಹಿಸಿದರು.

ಹೊರ ಗುತ್ತಿಗೆಯ ಆಧಾರದ ಮೇಲೆ ಕಂಪ್ಯೂಟರ್ ಆಪರೇಟರ್‌ಗಳು ಮತ್ತು ಡಿ ಗ್ರೂಪ್ ನೌಕರರುಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಸಿಬ್ಬಂದಿಗಳನ್ನು ಶೌಚಾಲಯವನ್ನು ಸ್ವಚ್ಚಗೊಳಿಸಬೇಕೆಂದು ಕಿರುಕುಳ ನೀಡಿ ಇಲ್ಲದಿದ್ದರೆ ಕೆಲಸದಿಂದ ವಜಾಗೊಳಿಸುವುದಾಗಿ ಬೆದರಿಕೆ ಹಾಕುತ್ತಿದ್ದಾರೆಂದು ಪ್ರತಿಭಟನಾಕಾರರು ಆರೋಪಿಸಿದರು

ಕಡ್ಡಾಯ ರಜೆಗೆ ಜಿಪಂ ಉಪಕಾರ್ಯದರ್ಶಿ ಆದೇಶ


ತಾ.ಪಂ. ಇಓ ಅಮಾನತ್ತಿಗೆ ಆಗ್ರಹಿಸಿ ದಲಿತಪರ ಸಂಘಟನೆಗಳು ನಡೆಸಿದ ಪ್ರತಿಭಟನಾ ಸ್ಥಳಕ್ಕೆ ಉಪ ಕಾರ್ಯದರ್ಶಿ ಶೃತಿ, ತಹಸೀಲ್ದಾರ್ ಬಸವರಾಜು ಭೇಟಿ ನೀಡಿದ್ದರು.

ಜಿ.ಪಂ. ಉಪ ಕಾರ್ಯದರ್ಶಿ ಶೃತಿ, ತಹಶೀಲ್ದಾರ್ ಬಸವರಾಜು ಮಾತನಾಡಿ, ಇ.ಓ ಗುರುಶಾಂತಪ್ಪ ಬೆಳ್ಳುಂಡಗಿಯವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸುವ ಕ್ರಮ ವಹಿಸಲಾಗುವುದು. ಸದ್ಯಕ್ಕೆ ತಾಪಂಗೆ ಪ್ರಭಾರಿ ಇಓ ಅವರನ್ನು ನೇಮಿಸಲಾಗುವುದು ಎಂದು ಭರವಸೆ ನೀಡಿದ ಮೇರೆಗೆ ಪ್ರತಿಭಟನೆಯನ್ನು ಸ್ಥಗಿತಗೊಳಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಕಮಲ್, ಭೀಮನಗರ ದೊಡ್ಡ ಯಜಮಾನ ಚಿಕ್ಕಮಾಳಿಗೆ, ಛಲವಾದಿ ಮಹಾಸಭೆ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು, ಕರುವೇ ಅಯಾಜ್ ಕನ್ನಡಿಗ, ಡಿಎಸ್‌ಎಸ್ ರಾಜ್ಯ ಸಂಚಾಲಕ ದೊಡ್ಡಿಂದುವಾಡಿ ಸಿದ್ದರಾಜು, ಅಂಬೇಡ್ಕರ್ ಸ್ಮಾರಕ ಸಂಘದ ಅಧ್ಯಕ್ಷ ಆನಂದ ಮೂರ್ತಿ, ಕೆ.ಕೆ.ಮೂರ್ತಿ, ಶೇಖರ್ ಬುದ್ಧ, ಎಸ್.ರಾಜಶೇಖರ್ ಮೂರ್ತಿ, ದಶರಥ್, ಪುಟ್ಟಗೌರಿ, ಪುಟ್ಟಮ್ಮ, ರಾಣಿ, ಶಿವಮ್ಮ, ಸಾವುಕಯ್ಯ, ದಿಲೀಪ್ ಸಿದ್ದಪ್ಪಾಜಿ, ಎಸ್. ಸಿದ್ದಪ್ಪಾಜಿ, ಬೆಂಜಮಿನ್, ಶಿವಕುಮಾರ್, ಚೆನ್ನರಾಜು, ಕೃಷ್ಣರಾಜು, ಕೆಂಪರಾಜು, ಮುರಳಿ, ಚಾಮರಾಜು, ಶಿವರಾಳಯ್ಯ, ಎಸ್.ಎಲ್.ನಿಂಗರಾಜು, ಪುರುಷೋತ್ತಮ್, ಶ್ರೀನಿವಾಸ್ ಇತರರು ಪಾಲ್ಗೊಂಡಿದ್ದರು.

ಆಡಳಿತ ಯಂತ್ರ ಹಳಿ ತಪ್ಪಿದಾಗ ಮಾಧ್ಯಮಗಳು ಎಚ್ಚರಿಸಲಿ

ಚಾಮರಾಜನಗರ. ಮೇ 5– ಆಡಳಿತ ಯಂತ್ರ ಹಳಿತಪ್ಪಿದಾಗ ಎಚ್ಚರಿಸುವ ಕೆಲಸವನ್ನು ಮಾಧ್ಯಮಗಳು ಮಾಡಬೇಕೆಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಮೈಸೂರಿನ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಹಯೋಗದಲ್ಲಿ ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಪ್ರಕಾಶ್ ಬೆಲ್ಲದ್ ಅವರಿಗೆ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಈ ಕೆಲಸವನ್ನು ಮಾಧ್ಯಮಗಳು ಹಿಂದಿನಿಂದ ಮಾಡಿಕೊಂಡು ಬಂದಿವೆ. ಪ್ರಾಮಾಣಿಕತೆಯಿಂದ ಸೇವೆ ಮಾಡುವವರಿಗೆ ಎಂದಾದರೂ ಫಲಸಿಗುತ್ತದೆ ಎಂಬುದಕ್ಕೆ ಇಂದು ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಸ್ವೀಕರಿಸುತ್ತಿರುವ ಹಿರಿಯ ವರದಿಗಾರರೇ ಸಾಕ್ಷಿ, ಅವರ 30 ವರ್ಷಗಳ ಅವಿರತ ಸೇವೆಗೆ ಸುತ್ತೂರುಮಠ ಉತ್ತಮ ಪ್ರಶಸ್ತಿ ನೀಡಿ ಗೌರವಿಸಿದೆ ಎಂದರು.


ಪ್ರಕಾಶ್ ಬೆಲ್ಲದ್ ಅವರಿಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯನ್ನು ಗಣ್ಯರು ವಿತರಿಸಿದರು.

ಮಾಧ್ಯಮಗಳು ನಿಖರವಾದ ಸುದ್ದಿ ಪ್ರಸಾರ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆಗಳ ಪರಿಹಾರ ಮಾಡಲು ಜಿಲ್ಲಾಡಳಿತಕ್ಕೆ ಸಂಪೂರ್ಣ ಸಹಕಾರ ನೀಡಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಮೈಸೂರಿನ ಸಿ.ಕೆ. ಮಹೇಂದ್ರ ಮಾತನಾಡಿ, ಮುದ್ರಣ ಮಾಧ್ಯಮ ಹೆಚ್ಚು ಪಾವಿತ್ಯತೆ ಉಳಿಸಿಕೊಂಡಿದ್ದು, ಅದರ ವಿವೇಚನಾಶಕ್ತಿಯಿಂದ ಪತ್ರಿಕೋದ್ಯಮಕ್ಕೆ ಭದ್ರಬುನಾದಿ ಹಾಕಿದೆ. ಓದುಗರ ಸಂಖ್ಯೆ ಕಡಿಮೆಯಾಗಿರಬಹುದು, ಜನರ ಅಗತ್ಯತೆಗಳನ್ನು ಪೂರೈಸುವ ಪತ್ರಿಕೋದ್ಯಮ ಇಂದು ಅಗತ್ಯವಾಗಿದೆ. ಇಂದು ಸಂಶೋಧನಾ ವರದಿಗಳು ಸಾಕಷ್ಟು ವರದಿಯಾಗಬೇಕಿವೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಶಿವಕುಮಾರ ಸ್ವಾಮಿ ಮಾತನಾಡಿ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾರಂಗ. ಪ್ರಜಾಸತ್ತೆಯ ಕಾವಲುಗಾರನಾಗಿ ಕೆಲಸ ಮಾಡುತ್ತಿದೆ ಸಾರ್ವಜನಿಕರ ಸಮಸ್ಯೆಗಳಿಗೆ ಸಕಾರವಾಗಿ ಸ್ಪಂದಿಸುವ ವರದಿ ಮಾಡುವ ಮೂಲಕ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದರು. 2011ರಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ವತಿಯಿಂದ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಸ್ಥಾಪಿಸುವ ಮೂಲಕ ಈವರೆಗೆ ಎರಡೂ ಜಿಲ್ಲೆಗಳ 14 ಮಂದಿ ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದು ಹೇಳಿದರು.

ಪ್ರಶಸ್ತಿ ಸ್ವೀಕರಿಸಿದ ಹಿರಿಯ ವರದಿಗಾರ ಪ್ರಕಾಶ್ ಬೆಲ್ಲದ್ ಮಾತನಾಡಿ, ನಾನು ಯಾವಾಗಲೂ ಪ್ರಶಸ್ತಿ ಸನ್ಮಾನದಿಂದ ಬಹಳ ದೂರ, ಸಂಘದ ಪದಾಧಿಕಾರಿಗಳ ಒತ್ತಾಯದ ಮೇರೆಗೆ ಪ್ರಶಸ್ತಿ ಸ್ವೀಕರಿಸಲು ಒಪ್ಪಿದೆ. ನನ್ನ 30 ವರ್ಷಗಳ ಪತ್ರಿಕಾರಂಗದ ಸೇವೆ ನನಗೆ ತೃಪ್ತಿ ನೀಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಆರ್.ಎಸ್. ಸಿದ್ದಲಿಂಗ ಸ್ವಾಮಿ ಮಾತನಾಡಿ, ಜಿಲ್ಲೆಯ ಕ್ರಿಯಾಶೀಲ ಪತ್ರಕರ್ತರನ್ನು ಗುರುತಿಸಿ, ಪ್ರತಿವರ್ಷ ಚಾಮರಾಜನಗರ ಜಿಲ್ಲೆಗೆ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಯನ್ನು ಪ್ರತ್ಯೇಕವಾಗಿ ವಿತರಣೆ ಮಾಡಬೇಕು ಎಂದು ಮನವಿ ಮಾಡಿದರು.

ಜೆಎಸ್‌ಎಸ್ ಸಮೂಹಶಿಕ್ಷಣಸಂಸ್ಥೆಗಳ ಪಿಆರ್‌ಓ ಆರ್.ಎಂ.ಸ್ವಾಮಿ, ಮಹಿಳಾ ಕಾಲೇಜಿನ ಪ್ರಾಂಶುಪಾಲ ಟಿ.ಎಂ.ಮರಿಸ್ವಾಮಿ, ಜಿಲ್ಲಾಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಕೆ.ರವಿಕುಮಾರ್, ಹಿರಿಯ ಪತ್ರಕರ್ತ ಎ.ಡಿ.ಸಿಲ್ವಾ, ಸಾಹಿತಿ ಕೆ. ವೆಂಕಟರಾಜು, ರೈತ ಸಂಘಟನೆಗಳ ಮುಖಂಡರು, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಣಿ ಸದಸ್ಯ ಮಹೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ಸಂಘದ ಸದಸ್ಯರು ಹಾಜರಿದ್ದರು.

ಸೈಕಲ್‌ಗೆ ಟೆಂಪೊ ಡಿಕ್ಕಿ ಸ್ಥಳದಲ್ಲೇ ಬಾಲಕ ಸಾವು

ಕೊಳ್ಳೇಗಾಲ, ಮೇ 5–ಟೆಂಪೊವೊಂದು ಸೈಕಲ್ ಸವಾರನಿಗೆ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಅಸು ನೀಗಿದ ಘಟನೆ ತಾಲೂಕಿನ ಹರಳೆ ಗ್ರಾಮದಲ್ಲಿ ಸಂಭವಿಸಿದೆ.

ಪಟ್ಟಣದ ಹೊಸ ಅಣಗಳ್ಳಿ ನಿವಾಸಿ ಯಶವಂತ್ (11) ಮೃತ ಬಾಲಕ. ಈತ ಹರಳೆ ಗ್ರಾಮದ ರಸ್ತೆಯಲ್ಲಿ ಸೈಕಲ್ ತುಳಿದುಕೊಂಡು ಹೋಗುತ್ತಿದ್ದಾಗ ಎದುರು ದಿಕ್ಕಿನಿಂದ ಬಂದ ಟೆಂಪೊ ಚಾಲಕನ ನಿಯಂತ್ರಣ ತಪ್ಪಿ ಡಿಕ್ಕಿ ಸೈಕಲ್‌ಗೆ ಹೊಡಿದಿದೆ.

ಸ್ಥಳದಲ್ಲಿಯೇ ಬಾಲಕ ಮೃತ ಪಟ್ಟಿದ್ದಾನೆ. ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪಟ್ಟಣ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಎಸ್ಪಿ, ಡಿವೈಎಸ್ಪಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸೋಮಹಳ್ಳಿಯಲ್ಲಿ ಅದ್ಧೂರಿ ಅಂಬೇಡ್ಕರ್ ಜಯಂತಿ

ಬೇಗೂರು, ಮೇ5–ಸಮೀಪದ ಸೋಮಹಳ್ಳಿ ಗ್ರಾಮದಲ್ಲಿ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಯುವ ವಿಜ್ಞಾನಿ ನವೀನ್ ಮೌರ್ಯ ಮಾತನಾಡಿ ಡಾ. ಬಿಆರ್ ಅಂಬೇಡ್ಕರ್ ಅವರು ಎಲ್ಲ ವರ್ಗಕ್ಕೂ ಸಮಾನತೆಯನ್ನು ತಂದುಕೊಟ್ಟವರು ಕಾರ್ಮಿಕರಿಗೆ ಹಕ್ಕು, ಶಿಕ್ಷಣದ, ಮತದಾನ, ಹಕ್ಕನ್ನ ತಂದು ಕೊಟ್ಟವರು ಅವರು ದೇಶದ ವ್ಯಕ್ತಿಯಲ್ಲ ಈ ದೇಶದ ವಿಶ್ವದ ಶಕ್ತಿ ಎಂದರು


ಸೋಮಹಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ನಡೆಯಿತು.

ಶಾಸಕ ಎಚ್.ಎಮ್ ಗಣೇಶ್‌ಪ್ರಸಾದ್, ಮಾಜಿ ಶಾಸಕ ಸಿ.ಎಸ್ ನಿರಂಜನ್ ಕುಮಾರ್, ಗೋಪಾಲ್ ಹೊರೆಯಲ್ ಹಾಗೂ ಗ್ರಾಮದ ಮುಖಂಡರು, ಗ್ರಾಮದ ಯಜಮಾನರು ಮತ್ತು ಅಂಬೇಡ್ಕರ್ ಯುವಕ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

ಇಂದು ಕವನ ಸಂಕಲನ ಬಿಡುಗಡೆ

ಚಾಮರಾಜನಗರ, ಮೇ 5– ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಮೇ 6ರಂದು ಡಾ.ಮಮತಾ ಲೋಕೇಶ್ವರಿ ಅವರ ಕವನ ಸಂಕಲನ ಬಿಡುಗಡೆಯಾಗಲಿದೆ. ಬೆಳಗ್ಗೆ 10ಕ್ಕೆ ನಗರದ ಡಾ.ರಾಜಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಕೃತಿ ಲೋಕಾರ್ಪಣೆ ಮಾಡುವರು. ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ ಉದ್ಘಾಟಿಸುವರು.

ಪ್ರತಿ ಕ್ವಿಂಟಾಲ್ ಕಬ್ಬಿಗೆ 365 ಎಫ್‌ಆರ್‌ಪಿ ಹೆಚ್ಚಿಸಲು ಕೇಂದ್ರ ಅನುಮೋದನೆ

ನವದೆಹಲಿ: ಕರ್ನಾಟಕದ ಸೂರ್ಯಕಾಂತಿ ಬೆಳೆಗಾರರ ಬೆಂಬಲಕ್ಕೆ ನಿಂತ ಬೆನ್ನಲ್ಲೇ ಕೇಂದ್ರ ಸರ್ಕಾರ ಇದೀಗ ಕಬ್ಬು ಬೆಳೆಗಾರರಿಗೂ ಬೆಂಬಲ ಬೆಲೆ ಹೆಚ್ಚಿಸಿ ನೆರವಿಗೆ ಬಂದಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸಚಿವ ಸಂಪುಟ 2026–27ನೇ ಹಂಗಾಮಿಗೆ ಕಬ್ಬಿಗೆ ಶೇ. 10.25 ಮೂಲ ರಿಕವರಿ ದರದ ಮೇಲೆ ಪ್ರತಿ ಕ್ವಿಂಟಾಲ್‌ಗೆ 365 ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆಯನ್ನು ಅನುಮೋದಿಸಿದೆ. ಇದರಿಂದ ಕರ್ನಾಟಕದ ಸರಿ ಸುಮಾರು 8 ರಿಂದ 10 ಲಕ್ಷ ರೈತರಿಗೆ ಪ್ರಯೋಜನವಾಗಲಿದೆ ಎಂದಿದ್ದಾರೆ.

ರಿಕವರಿ ಕಡಿಮೆ ಇದ್ದೂ ಬೆಂಬಲ ಬೆಲೆ: ಕಬ್ಬಿನ ರಿಕವರಿಯಲ್ಲಿ 0.1% ಏರಿಕೆಗೆ 3.56 ಪ್ರತಿ ಕ್ವಿಂಟಾಲ್ ಹೆಚ್ಚುವರಿ ಪ್ರೋತ್ಸಾಹಧನ ನೀಡುವುದರ ಜತೆಗೆ ರಿಕವರಿ 9.5% ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಯಾವುದೇ ಕಡಿತವಿಲ್ಲದೆ ಪ್ರತಿ ಕ್ವಿಂಟಾಲ್‌ಗೆ 338.3 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಕೇಂದ್ರ ಸರ್ಕಾರದ ಈ ಮಹತ್ವದ ನಿರ್ಧಾರದಿಂದ ದೇಶದ ಸುಮಾರು 5 ಕೋಟಿ ಕಬ್ಬು ಬೆಳೆಗಾರರು ಮತ್ತವರ ಕುಟುಂಬಗಳಿಗೆ ನೆರವಾಗಲಿದೆ. ಅದರಂತೆ ಕರ್ನಾಟಕದಲ್ಲೂ ಸುಮಾರು ಎಂಟ್ಹತ್ತು ಲಕ್ಷ ರೈತರು ಈ FRP ದರದ ಲಾಭ ಪಡೆಯಲಿದ್ದಾರೆ ಎಂದಿದ್ದಾರೆ.

ಕೇಂದ್ರದ ಈ ನಿರ್ಣಯ ಕಬ್ಬು ಬೆಳೆಗಾರರು ಮಾತ್ರವಲ್ಲದೆ, ಸಕ್ಕರೆ ಕಾರ್ಖಾನೆಗಳು ಹಾಗೂ ಸಕ್ಕರೆ ಉದ್ಯಮದ 5 ಲಕ್ಷಕ್ಕೂ ಅಧಿಕ ಕಾರ್ಮಿಕರಿಗೂ ನೆರವಾಗಲಿದೆ. ಕಬ್ಬಿನ FRP ಹೆಚ್ಚಳ ಮೂಲಕ ಸಮಸ್ತ ಸಕ್ಕರೆ ಉದ್ಯಮ ಮತ್ತು ಕೃಷಿ ಕ್ಷೇತ್ರವನ್ನು ಮತ್ತಷ್ಟು ಸಶಕ್ತಗೊಳಿಸುವಲ್ಲಿ ಪ್ರಧಾನಿ ಮೋದಿ ಬದ್ಧತೆ ತೋರಿದ್ದಾರೆಂದು ಸಚಿವ ಜೋಶಿ ಪ್ರತಿಪಾದಿಸಿದ್ದಾರೆ.

ರಾಜ್ಯದ ಬೆಳಗಾವಿ, ಬಾಗಲಕೋಟೆ, ಮಂಡ್ಯ, ಮೈಸೂರು, ವಿಜಯಪುರ ಮತ್ತು ಬಳ್ಳಾರಿ, ದಾವಣಗೆರೆ, ಬೀದರ್ ಹೀಗೆ ವಿವಿಧ ಜಿಲ್ಲೆಗಳು ಕಬ್ಬು ಬೆಳೆಯುವಲ್ಲಿ ಮುಂಚೂಣಿಯಲ್ಲಿದ್ದು, ದೇಶದ ಒಟ್ಟು ಸಕ್ಕರೆ ಉತ್ಪಾದನೆಯ ಶೇ.16 ರಷ್ಟು ಕರ್ನಾಟಕದ ಪಾಲಿದೆ. ಹೀಗಾಗಿ ಈ FRP ಹೆಚ್ಚಳವು ರಾಜ್ಯದ ಪಾಲಿಗೂ ಅನನ್ಯ ಕೊಡುಗೆಯಾಗಿದೆ ಎಂದು ಸಚಿವ ಪ್ರಹ್ಲಾದ್ ಜೋಶಿ ಹೇಳಿದ್ದಾರೆ.

'ಪ್ಯಾಲಿಯೇಟಿವ್ ಕೇರ್ ಕೇಂದ್ರ' ರಾಜ್ಯಾದ್ಯಂತ ವಿಸ್ತರಣೆ

ಬೆಂಗಳೂರು, ಮೇ 5– ನಗರದ ಮಲ್ಲೇಶ್ವರಂ ಕೆ ಸಿ ಜನರಲ್ ಆಸ್ಪತ್ರೆಯಲ್ಲಿ ಸರನಂ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಪ್ಯಾಲಿ ಯೇಟಿವ್ ಕೇರ್ ಯುನಿಟ್ ನ್ನು



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಮಂಗಳವಾರ ಉದ್ಘಾಟಿಸಿದರು. ಪ್ಯಾಲಿಯೇಟಿವ್ ಕೇರ್ ಕೇಂದ್ರದಲ್ಲಿ ಚಿಕಿತ್ಸೆ ನೀಡುವುದಿಲ್ಲ. ರೋಗಿಗಳು ಚಿಕಿತ್ಸೆಗೆ ಸ್ಪಂದಿಸದೇ ಇರುವ ಹಂತದಲ್ಲಿ, ಅಸಾಧಾರಣ ನೋವು, ಮಾನಸಿಕ ಒತ್ತಡದಿಂದ ಬಳಲುವ ರೋಗಿಗಳ ಮತ್ತು ಅಂತಹ ರೋಗಿಗಳ ಆರೈಕೆ ಮಾಡುತ್ತಿರುವ ಕುಟುಂಬ ವರ್ಗದವರಿಗೆ ಇದು ವರದಾನವಾಗಲಿದೆ.

ಈ ವೇಳೆ ಮಾತನಾಡಿದ ದಿನೇಶ್ ಗುಂಡೂರಾವ್, ಕೆಸಿ ಜನರಲ್ ಆಸ್ಪತ್ರೆಯಲ್ಲಿ ಪ್ರಾಥಮಿಕವಾಗಿ ಐದು ಬೆಡ್‌ಗಳ ಒಂದು ವಾರ್ಡ್ ನಿರ್ಮಾಣ ಮಾಡಿದ್ದೇವೆ. ಮಾರಣಾಂತಿಕ ಅಥವಾ ತೀವ್ರವಾದ ಕಾಯಿಲೆಗಳಿಂದ ಬಳಲುತ್ತ, ಅಂತಿಮ ಹಂತದಲ್ಲಿರುವ ರೋಗಿಗಳಿಗೆ ಇದು ವಿಶೇಷ ಯೂನಿಟ್ ಆಗಿದೆ. ಕ್ಯಾನ್ಸರ್, ಕಿಡ್ನಿ ವೈಫಲ್ಯ ಸೇರಿದಂತೆ ಇತರ ರೋಗಿಗಳ ಆರೈಕೆಗೆ ಈ ವಾರ್ಡ್ ಸಹಾಯಕವಾಗಿದೆ ಎಂದರು.

ತೀವ್ರವಾದ ನೋವು, ಉಸಿರಾಟ ತೊಂದರೆ, ನರ ಸಂಬಂಧಿ ಕಾಯಿಲೆ ಯಿಂದ ಬಳಲುವವರು, ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರಿಗೆ ಈ ಕೇಂದ್ರ ಅನುಕೂಲ. ರೋಗವನ್ನು ಗುಣಪಡಿಸುವುದಕ್ಕೆ ಸಾಧ್ಯವಿಲ್ಲದ ಹಂತದಲ್ಲಿ ರೋಗಿಯ ದೈಹಿಕ ನೋವು & ಮಾನಸಿಕ ಒತ್ತಡವನ್ನು ಕಡಿಮೆ ಮಾಡುವ ಉದ್ದೇಶದೊಂದಿಗೆ ಇದನ್ನು ಮಾಡಿದ್ದೇವೆ. ರೋಗಿಗಳ ಕುಟುಂಬದವರಿಗೂ ಸೂಕ್ತ ತರಬೇತಿ ನೀಡಲಾಗುತ್ತದೆ ಎಂದು ಹೇಳಿದರು.

ಪ್ಯಾಲಿಯೇಟಿವ್ ಕೇರ್ ಕೇಂದ್ರವನ್ನು ರಾಜ್ಯಾದ್ಯಂತ ಪ್ರಾರಂಭಿಸುವ ಗುರಿ ಹೊಂದಲಾಗಿದೆ. ಈಗಾಗಲೇ ಬೆಂಗಳೂರಿನಲ್ಲಿ ನಾಲ್ಕೈದು ಕಡೆ ಪ್ರಾರಂಭಿಸಿದ್ದೇವೆ ಈ ಯುನಿಟ್‌ನಲ್ಲಿ ತಜ್ಞರ ತಂಡದಿಂದ ಹೊರರೋಗಿ ವಿಭಾಗ, ಡೇ ಕೇರ್ ವಿಭಾಗ, ಸುಸಜ್ಜಿತ ಒಳರೋಗಿ ವಿಭಾಗ ಮತ್ತು ಆಸ್ಪತ್ರೆ ಯಿಂದ 5–8 ಕಿಲೋ ವ್ಯಾಪ್ತಿಯಲ್ಲಿ ಮನೆಗೆ ತೆರಳಿ ಆರೈಕೆ ಮಾಡುವ ಮತ್ತು ಆರೈಕೆಗೆ ಪೂರಕ ತರಬೇತಿ ನೀಡುವ ಮೊಬೈಲ್ ಯುನಿಟ್ ಸಹ ಇರಲಿದೆ ಎಂದು ತಿಳಿಸಿದರು.

ಬೌದ್ಧ ಸನ್ಯಾಸಿ ಕೊಲೆ ಪ್ರಕರಣ ಭೇದಿಸಿದ ಧಾರವಾಡ ಪೊಲೀಸರು

ಧಾರವಾಡ, ಮೇ 5– ಧಾರವಾಡ ಬೈಪಾಸ್ ಬಳಿ ಏಪ್ರಿಲ್ 28ರಂದು ಟಿಬೆಟಿಯನ್ ಮೂಲದ ಬೌದ್ಧ ಸನ್ಯಾಸಿ ತಾಶಿ ಧೊಂದೂಪ ನಿಗೂಢ ಸಾವು ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಸಣ್ಣ ಮಾಹಿತಿಯೂ ಇಲ್ಲದಿದ್ದರೂ ಪ್ರರಕಣದ ಬೆನ್ನು ಬಿದ್ದ ಧಾರವಾಡ ಗ್ರಾಮೀಣ ಪೊಲೀಸರು ಹಂತಕರನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದು, ಹಣಕ್ಕಾಗಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ.

ಆರಂಭದಲ್ಲಿ ಅಪಘಾತದಿಂದ ಈ ಸಾವಾಗಿರಬಹುದು ಎನ್ನಲಾಗಿತ್ತು. ಆದರೆ, ಮುಖದ ಮೇಲಿನ ಗಾಯದಿಂದ ಅನುಮಾನದ ಮೇಲೆ ತನಿಖೆ ನಡೆಸಿದಾಗ ಕೊಲೆ ಎನ್ನುವುದು ಗೊತ್ತಾಗಿದ್ದು, ಇದೀಗ ಮೂವರನ್ನು ಬಂಧಿಸಿದ್ದಾರೆ. ಯಾದವ್(24), ವೈಭವ್ ಚವ್ಹಾಣ(30) ಮತ್ತು ಸಿದ್ಧೇಶ ಭೋಸ್ಲೆ(18) ಬಂಧಿತರು.

ಮುಂಡಗೋಡದಿಂದ ಧಾರವಾಡದ ಮೂಲಕ ಕೊಲ್ಹಾಪುರದ ಕಡೆಗೆ ಕಾರೊಂದು ಹೋಗಿರೋದು ಗೊತ್ತಾಗಿದ್ದು, ಒಂದೆರಡು ಕಡೆ ಸಿಸಿಟಿವಿ ಪರಿಶೀಲಿಸಿದಾಗ ಕಾರಿನ ನಂಬರ್ ಸ್ಪಷ್ಟವಾಗಿ ಕಂಡಿಲ್ಲ. ಆದರೆ ಮುಂಡಗೋಡದ ಬಳಿ ಬಂಕ್‌ನಲ್ಲಿ ಸಿಎನ್‌ಜಿ ತುಂಬಿಸಿಕೊಳ್ಳಲು ಕಾರಿನಿಂದ ಇಳಿದಾಗ ಹಂತಕರು ಸಿಸಿಟಿವಿಯಲ್ಲಿ ಸೆರೆಯಾಗಿದ್ದಾರೆ. ಇದರ ಜಾಡು ಹಿಡಿದು ಹೊರಟ ಪೊಲೀಸರು, ಹಂತಕರನ್ನು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಬಂಧಿಸಿದ್ದಾರೆ.

ಬಸವಣ್ಣನವರ ವಿಚಾರಧಾರೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು

● ಕೇಂದ್ರ ಸಚಿವರಾದ ವಿ.ಸೋಮಣ್ಣ ಕಿವಿಮಾತು ● ಬಸವಣ್ಣ, ಅಲ್ಲಮಪ್ರಭು ಕುರಿತಾದ ಎರಡು ಕೃತಿಗಳ ಬಿಡುಗಡೆ



ಲೇಖಕ ಎಲ್.ಶಿವಲಿಂಗಪ್ಪ ರಚಿತ, ಹಿಂದಿ ಮತ್ತು ಮರಾಠಿ ಭಾಷೆಗೆ ಅನುವಾದಿಸಿರುವ 'ಮಹಾಮಾನವತಾವಾದಿ ಬಸವಣ್ಣ' ಹಾಗೂ 'ವೀರವೈರಾಗ್ಯ ನಿಧಿ ಅಲ್ಲಮ ಪ್ರಭು' ಪುಸ್ತಕಗಳನ್ನು ಕೇಂದ್ರ ಸಚಿವ ವಿ.ಸೋಮಣ್ಣ ಲೋಕಾರ್ಪಣೆಗೊಳಿಸಿದರು.

ಮೈಸೂರು, ಮೇ 5(ಎಸ್‌ಪಿಎನ್)– ಅನುಭವ ಮಂಟಪದಲ್ಲಿ ಪುರುಷರಂತೆ ಮಹಿಳೆಯರಿಗೂ ಸಮಾನ ಅವಕಾಶ ನೀಡಲಾಗಿತ್ತು. ಈ ಪರಿಕಲ್ಪನೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಳೆದ 30 ವರ್ಷಗಳಿಂದ ಜಾರಿಯಾಗದೇ ನೆನೆಗುದಿಗೆ ಬಿದ್ದಿದ್ದ ಮಹಿಳಾ ಮೀಸಲಾತಿ ವಿಧೇಯಕವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಆದರೆ, ವಿಪಕ್ಷಗಳು ಈ ಮಸೂದೆಯನ್ನು ಸಂಸತ್ತಿನಲ್ಲಿ ಸೋಲಿಸಿದವು ಎಂದು ಕೇಂದ್ರ ರಾಜ್ಯ ಸಚಿವ ವಿ.ಸೋಮಣ್ಣ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಸರ್ಕಾರಿ ಅತಿಥಿಗೃಹದ ಸಭಾಂಗಣದಲ್ಲಿ ಮೈಸೂರಿನ ಬಸವ ಬಳಗಗಳ ಒಕ್ಕೂಟದ ಬಸವ ಜಯಂತಿ–2026ರ ವತಿಯಿಂದ ಏರ್ಪಡಿಸಿದ್ದ ಹಿರಿಯ ಕಲಾವಿದ, ಲೇಖಕರೂ ಆದ ಎಲ್.ಶಿವಲಿಂಗಪ್ಪ ರಚಿತ, ಅನುವಾದಕಿ ಪ್ರೊ.ಶಾಲಿನಿ ಶ್ರೀಶೈಲ ದೊಡ್ಡಮನಿ ಹಿಂದಿ ಮತ್ತು ಮರಾಠಿ ಭಾಷೆಗೆ ಅನುವಾದಿಸಿರುವ 'ಮಹಾಮಾನ ವತಾವಾದಿ ಬಸವಣ್ಣ' ಹಾಗೂ 'ವೀರವೈರಾಗ್ಯ ನಿಧಿ ಅಲ್ಲಮ ಪ್ರಭು' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿ ಹಲವು ವಿರೋಧಗಳ ನಡುವೆಯೂ ಮಹಿಳೆಯರಿಗೆ ಸಮಾನ ಅವಕಾಶವನ್ನು ಬಸವಣ್ಣನವರು ನೀಡಿದ್ದರು. ಹೆಣ್ಣು ಮಕ್ಕಳು ಮುಖ್ಯ ವಾಹಿನಿಗೆ ಬರಬೇಕು ಎಂಬ ಸದಾ ಶಯದೊಂದಿಗೆ ಮಹಿಳಾ ಮೀಸಲಾತಿ ಜಾರಿಗೆ ತರಲು ಪ್ರಯತ್ನಿಸಿದ್ದರು. ಆದರೆ, ವಿಪಕ್ಷಗಳು ಈ ಮಸೂದೆಯನ್ನು ಸೋಲಿಸಿದವು. ಅದರ ಪರಿಣಾಮವಾಗಿ ಪಂಚರಾಜ್ಯಗಳ ಚುನಾವಣೆಯಲ್ಲಿ ಮಹಿಳೆಯರಿಗೆ ತಮ್ಮ ಶಕ್ತಿ ಏನು ಎಂದು ತೋರಿಸಿಕೊಟ್ಟಿದ್ದಾರೆ ಎಂದು ಕೆಲ ಘಟನಾವಳಿಗಳನ್ನು ಉಲ್ಲೇಖಿಸಿದರು.

ಮಹಾ ಮಾನವತಾವಾದಿ ಬಸವಣ್ಣನವರ ವಿಚಾರಧಾರೆಗಳನ್ನು ಮಾತನಾಡುವ ನಾವು, ಅವುಗಳನ್ನು ಎಷ್ಟರ ಮಟ್ಟಿಗೆ ಅಳವಡಿಸಿಕೊಂಡಿದ್ದೇವೆ ಎಂಬುದು ದೊಡ್ಡ ಯಕ್ಷ ಪ್ರಶ್ನೆಯಾಗಿದೆ. 950 ವರ್ಷಗಳ ಹಿಂದೆಯೇ ಎಲ್ಲರಿಗೂ ಸಮಾನತೆ, ಭ್ರಾತೃತ್ವ ಜಾರಿಗೊಳಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಸಮಾನತೆ ಇಲ್ಲದೆ ಯಾರೂ ಕೂಡ ಬದುಕು ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಬಸವಣ್ಣನವರ ವಿಚಾರಧಾರೆಗಳನ್ನು ಬರೀ ಓದುವುದಕ್ಕಿಂತ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಷ್ಟೇ ಮುಖ್ಯ ಎಂದು ಕಿವಿಮಾತು ಹೇಳಿದರು.

'ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದಾಡೆ, ಸಿಹಿಯಾಗಬಲ್ಲುದೆ ಕಹಿಯಾಗಲ್ಲದೆ, ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು ಕೂಡಲಸಂಗಮದೇವಾ' ವಚನ ಸೇರಿದಂತೆ ಹಲವು ವಚನಗಳನ್ನು ಹೇಳುತ್ತೇವೆ. ಆದರೆ, ನಮ್ಮ ನಡವಳಿಕೆ ಯಾವ ರೀತಿಯಿದೆ. ಎಷ್ಟು ಜನರಿಗೆ ಕಾಯಕ ಮಾಡಿ ಬದುಕುವುದನ್ನು ಕಲಿಸಿ ಕೊಟ್ಟಿದ್ದೇವೆ. ಜನ ಸಾಮಾನ್ಯರನ್ನು ನಾವು ಇಂದಿಗೂ ಎಷ್ಟರಮಟ್ಟಿಗೆ ನೋಡುತ್ತೇವೆ. ನಮ್ಮವರೇ ಆಗಿದ್ದರೂ ಕೂಡ ಬಡತನದಲ್ಲಿದ್ದರೆ ಅಂತಹವರನ್ನು ನಾವು ಸಮಾನತೆಯಿಂದ ಕಾಣುತ್ತೇವೆಯೇ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ ಎಂದರು.

ಹಿರಿಯ ಕಲಾವಿದ ಶಿವಲಿಂಗಪ್ಪನವರು ನಿಜ ಜೀವನದಲ್ಲಿ ಬಸವಣ್ಣ ಎಂದರೆ ಏನು? ಅವರ ನಿಜ ಕಾಯಕ ಏನು? ಅವರ ತೀರ್ಮಾನಗಳು ಯಾವುವು? ಈ ರೀತಿ ನಡೆದುಕೊಳ್ಳುವುದಕ್ಕೆ ಬರೆದಿರುವಂತಹ ಸಂದೇಶ ನಿಜವಾಗಿಯೂ ಶ್ಲಾಘನೀಯ ವಾಗಿದೆ. ಈ ಕೃತಿಯನ್ನು ಎಷ್ಟು ಮಂದಿ ಓದುತ್ತಾರೆ ಎನ್ನುವುದಕ್ಕಿಂತ, ಅದನ್ನು ಓದಿ ಅರ್ಥೈಸಿಕೊಂಡು ಹತ್ತು ಜನರ ಶರಣರ ದಾರಿಯಲ್ಲಿ ನಡೆದರೇ, ಅದಕ್ಕಿಂತ ದೊಡ್ಡ ಕೆಲಸ ಮತ್ತೊಂದಿಲ್ಲ ಎಂದರು.

ಈ ವೇಳೆ ಹಿರಿಯ ಲೇಖಕ ಡಾ.ಪ್ರಧಾನ ಗುರುದತ್ತ,ಕೃತಿಕಾರ ಎಲ್.ಶಿವಲಿಂಗಪ್ಪ, ಬಸವಬಳಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಜಮುನಾರಾಣಿ ಮಿರ್ಲೆ ಸೇರಿದಂತೆ ಮತ್ತಿತರಿದ್ದರು.

ವಾಲ್ಮೀಕಿ ರಾಮಾಯಣದ ಕೆಟ್ಟ ಪಾತ್ರಗಳನ್ನು ಕುವೆಂಪು ಒಳ್ಳೆಯ ಪಾತ್ರಗಳಾಗಿ ಪರಿವರ್ತಿಸಿದರು

ಖ್ಯಾತ ಕಥೆಗಾರ್ತಿ ಉಷಾ ನರಸಿಂಹನ್ ವಿವರಣೆ



ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಹೇಗೆ ವಿಭಿನ್ನ ಎಂಬ ವಿಷಯ ಕುರಿತು ಕಥೆಗಾರ್ತಿ ಉಷಾ ನರಸಿಂಹನ್ ಮಾತನಾಡಿದರು.

ಮೈಸೂರು,ಮೇ 5(ಎಸ್‌ಪಿಎನ್)– ವಾಲ್ಮೀಕಿ ರಾಮಾಯಣದಲ್ಲಿ ಪಾಪಿ (ಕೆಟ್ಟವರಾಗಿ)ಗಳಾಗಿ ಬಿಂಬಿಸಿದ್ದ ಎಲ್ಲಾ ಪಾತ್ರಗಳನ್ನು ಕುವೆಂಪು ರಾಮಾಯಣದಲ್ಲಿ ಪುಣ್ಯ(ಒಳ್ಳೆಯ) ಪಾತ್ರಗಳಾಗಿ ಪರಿವರ್ತಿಸಿರುವುದು ವಿಶೇಷ ಎಂದು ಕಥೆಗಾರ್ತಿ ಉಷಾ ನರಸಿಂಹನ್ ಅಭಿಪ್ರಾಯಪಟ್ಟರು.

ಮೈಸೂರು ಶ್ರೀ ರಾಮಕೃಷ್ಣ ಪರಮಹಂಸ ವೃತ್ತದ ನೆಲಮಹಡಿಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ವತಿಯಿಂದ ಏರ್ಪಡಿಸಿದ್ದ 'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಹೇಗೆ ವಿಭಿನ್ನ ಎಂಬ ವಿಷಯ ಕುರಿತು ಅವರು ಮಾತನಾಡಿದರು.

ವಾಲ್ಮೀಕಿ ರಾಮಾಯಣದಲ್ಲಿ ಮಂಥರೆಯನ್ನು ದುಷ್ಟಳಂತೆ ಬಿಂಬಿಸದೆ, ಶ್ರೀರಾಮನಿಗಿಂತ ಭರತನ ಮೇಲಿದ್ದ ಅವಳ ಪ್ರೀತಿ ದ್ಯೋತಕ ಎಂದು ಸಮರ್ಥಿಸಿ ಮಂಥರೆಗೆ ಪದೋನ್ನತಿ ನೀಡಿದ್ದ ಪ್ರಸಂಗವನ್ನು ವಿವರಿಸಿದರು.

ಹಾಗೆಯೇ ಪ್ರತಿಯೊಬ್ಬ ಕೆಟ್ಟವನಲ್ಲಿಯೂ ಒಳ್ಳೆಯ ಭಾವಗಳಿರುತ್ತವೆ ಎಂಬುದನ್ನು ಪ್ರತಿಪಾದಿಸಿರುವ ಕುವೆಂಪು, ಗಂಡು ಮತ್ತು ಹೆಣ್ಣಿನ ಸಮಾನತೆ ಕುರಿತು ಪ್ರತಿಪಾದಿಸಿದ್ದಾರೆ. ಮುಂದುವರೆದು ಸೀತೆಗೆ ತನ್ನ ಪ್ರಾವಿತ್ಯತೆ ಕುರಿತು ಸಾರ್ವಜನಿಕವಾಗಿ ಪ್ರಶ್ನೆಗಳು ಎದುರಾದಾಗ ಅಗ್ನಿ ಪ್ರವೇಶಕ್ಕೆ ವಾಲ್ಮೀಕಿ ರಾಮಾಯಣದಂತೆ ಸೀತೆಯನ್ನು ಮಾತ್ರ ಇಳಿಸದೇ ರಾಮನನ್ನು ಇಳಿಸಿರುವುದು ವಿಶೇಷ ಎಂದರು.

'ಶ್ರೀರಾಮಾಯಣ ದರ್ಶನಂ' ಪ್ರಾರಂಭದ ಪೀಠಿಕೆಯಲ್ಲಿ ಕುವೆಂಪು ಸೃಷ್ಟಿಸಿದ ರಾಮಾಯಣ ದರ್ಶನಂ ಎಂದು ಹೇಳಿ, ಒಬ್ಬ ವ್ಯಕ್ತಿ ತನ್ನ ಕೆಲಸದಿಂದ ಮಾತ್ರ ಗುರುತಿಸಲ್ಪಡುತ್ತಾನೆ ವಿನಃ ಅವರ ಹೆಸರಿಂದಲ್ಲ ಎಂಬುದನ್ನು ಪ್ರತಿಪಾದಿಸಿದ್ದಾರಲ್ಲದೆ, ಸರ್ವೋದಯ ಮತ್ತು ಸಮಾನತೆ ಕಾಲಘಟ್ಟದಲ್ಲಿದ್ದ ಕುವೆಂಪು ಅವರ ಸಮಾನತೆ ತತ್ತ್ವ ಈ ಕೃತಿಯಲ್ಲಿ ಅಭಿವ್ಯಕ್ತಿಗೊಂಡಿದೆ ಎಂದರು.

ಹೀಗೆ ಕುವೆಂಪು ಅವರು ವಾಲ್ಮೀಕಿ ರಾಮಾಯಣದಲ್ಲಿ ಪಾಪಗಳನ್ನಾಗಿಸಿದ ಎಲ್ಲಾ ಪಾತ್ರಗಳನ್ನು, ಪುಣ್ಯದ ಪಾತ್ರಗಳನ್ನಾಗಿ ಪರಿವರ್ತಿಸಿ ಕೆಟ್ಟವರು ಮತ್ತು ಪಾಪಿಗಳು ಸಹ ಒಳ್ಳೆಯವರಾಗಿ ಪದೋನ್ನತಿ ಹೊಂದಲು ಸಾಧ್ಯ ಎಂದು ಸಾರಿದ್ದಾರೆ ಹಾಗೂ ಈ ಭಿನ್ನತೆಗಳು ಕುವೆಂಪು ಅವರ ರಾಮಾಯಣ ದರ್ಶನಂ ಅನ್ನು ವಿಶಿಷ್ಟ ಸ್ಥಾನದಲ್ಲಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾ ಪ್ರತಿಷ್ಠಾಪನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಕೆ.ಕೆಂಪಲಿಂಗರಾಜು, ಖಜಾಂಚಿ ಪುರುಷೋತ್ತಮ್ ಉಪಸ್ಥಿತರಿದ್ದರು. ವಿದುಷಿ ವಸುದಾ ಅವರಿಂದ ಶಾಸ್ತ್ರೀಯ ಸಂಗೀತ ಏರ್ಪಡಿಸಲಾಗಿತ್ತು.

ರಾಜ್ಯದಲ್ಲಿ ಜನಪರವಾದ ಮೈತ್ರಿ ಸರ್ಕಾರ ಅಧಿಕಾರಕ್ಕೆ ತನ್ನಿ: ಹೆಚ್‌ಡಿಕೆ

ತುಮಕೂರು: ರಾಜ್ಯದ ಈಗಿನ ಸರ್ಕಾರದ ಆಡಳಿತಕ್ಕೆ ಜನ ಬೇಸತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ಜನಪರವಾದ, ಜನರಿಗೆ ಗೌರವ ತರುವಂತಹ ಸರ್ಕಾರ ತರಲು ರಾಜ್ಯದ ಜನರು ಆಶೀರ್ವಾದ ಮಾಡಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.



ತುಮಕೂರು ತಾಲೂಕು ಮುಳಕುಂಟೆ ಗ್ರಾಮದಲ್ಲಿ ಮಂಗಳ ವಾರ ನಡೆದ ವಿಜಯ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವ ದಲ್ಲಿ ಭಾಗವಹಿಸಿದ ಕೇಂದ್ರ ಸಚಿವ ಕುಮಾರಸ್ವಾಮಿ, ದೇವಸ್ಥಾನ ದಲ್ಲಿ ದೇವಿಯ ದರ್ಶನ ಮಾಡಿ ಪೂಜೆ ಸಲ್ಲಿಸಿ, ನಂತರ ನಡೆದ ಸಮಾರಂಭದಲ್ಲಿ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಮೈತ್ರಿ ಕೂಟ ಈ ಬಾರಿಯ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಅಭೂತ ಪೂರ್ವ ಗೆಲುವು ಸಾಧಿಸಿದೆ. ಈ ಗೆಲುವು ದೇಶದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿಯಾಗಿದೆ. ಈ ಸಂಬಂಧ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ತುರ್ತಾಗಿ ದೆಹಲಿಗೆ ಹೋಗಬೇಕಾಗಿದೆ ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದಿಂದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಯಾದ ವಿ. ಸೋಮಣ್ಣ ಅವರನ್ನು ನೀವೆಲ್ಲಾ ದಾಖಲೆ ಮತಗಳ ಅಂತರದಿಂದ ಗೆಲ್ಲಿಸಿದ ಪರಿಣಾಮ ಅವರು ಹಾಗೂ ತಾವು ಕೇಂದ್ರ ಮಂತ್ರಿಯಾಗಲು ಅವಕಾಶವಾಯಿತು. ಮುಂಬರುವ ಚುನಾವಣೆಗಳಲ್ಲೂ ಇದೇ ರೀತಿಯಲ್ಲಿ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ರಾಮನಗರದಲ್ಲಿ ಇನ್ನು ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆ



ರಾಮನಗರ, ಮೇ 5– ರಾಮನಗರ ಜನರಿಗೆ ಗುಡ್ ನ್ಯೂಸ್ ಸಿಕ್ಕಿದೆ. ಕೆಎಸ್‌ಆರ್ ಬೆಂಗಳೂರು– ಮೈಸೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ ರೈಲು ಇನ್ಮುಂದೆ ರಾಮನಗರದಲ್ಲೂ ನಿಲುಗಡೆ ನೀಡಲಿದೆ.

ಮೈಸೂರು–ಕೆಎಸ್‌ಆರ್ ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ಒಡೆಯರ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 12613/12614) ರೈಲುಗಳಿಗೆ ರಾಮನಗರ ನಿಲ್ದಾಣದಲ್ಲಿ ಒಂದು ನಿಮಿಷದ ಪ್ರಾಯೋಗಿಕ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ರಾಮನಗರ ರೈಲು ನಿಲ್ದಾಣದಲ್ಲಿ ಇಂದು ನಡೆದ ಸಮಾರಂಭದಲ್ಲಿ ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ. ಸೋಮಣ್ಣ ಅವರು ಬೆಂಗಳೂರು–ಮೈಸೂರು ಒಡೆಯರ್ ಎಕ್ಸ್‌ಪ್ರೆಸ್ ನಿಲುಗಡೆಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ವಿ. ಸೋಮಣ್ಣ, ಸ್ಥಳೀಯ ನಾಗರಿಕರ ಸುಗಮ ಪ್ರಯಾಣಕ್ಕೆ ಅನುಕೂಲವಾಗುವಂತೆ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಅವಕಾಶ ಕಲ್ಪಿಸುವುದರಿಂದ ವಿದ್ಯಾರ್ಥಿಗಳು, ಸ್ಥಳೀಯ ವ್ಯಾಪಾರಿಗಳು ಹಾಗೂ ಉದ್ಯಮಿಗಳು ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಸುಗಮವಾಗಿ ಪ್ರಯಾಣಿಸಲು ಅನುಕೂಲವಾಗಲಿದೆ ಎಂದರು.

ರಾಮನಗರದಿಂದ ಬೆಂಗಳೂರು ಮತ್ತು ಮೈಸೂರಿಗೆ ಶೀಘ್ರವಾಗಿ ಪ್ರಯಾಣಿಸಬಹುದಾದ ಕಾರಣ ಇಲ್ಲಿನ ಸಾಮಾಜಿಕ–ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ಸಿಗುವುದು ಹಾಗೂ ರಾಮನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಶಿಕ್ಷಣ, ಆರೋಗ್ಯ ಮತ್ತು ಇತರ ಅಗತ್ಯ ಸೇವೆಗಳಿಗೆ ಹೆಚ್ಚಿನ ಅನುಕೂಲವನ್ನು ಒದಗಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಮಂಗಳೂರಿಗೆ ವಂದೇ ಭಾರತ್: ಕೆಎಸ್‌ಆರ್ ಬೆಂಗಳೂರು–ಮಂಗಳೂರು ನಡುವೆ ಹೊಸ ವಂದೇ ಭಾರತ್ ರೈಲು ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ. ಬೆಂಗಳೂರು–ಮೈಸೂರು ರೈಲು ಮಾರ್ಗದ ಚತುಷ್ಪಥೀಕರಣ ಹಾಗೂ ಬೆಂಗಳೂರು ಮತ್ತು ಕೋಲಾರ ನಡುವೆ ಹೊಸ ನೇರ ರೈಲು ಮಾರ್ಗದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ನಮ್ಮ ದೇಶದ ಜೀವನಾಡಿಯಾದ ಭಾರತೀಯ ರೈಲ್ವೆ ನಗರಗಳು, ಪಟ್ಟಣಗಳು ಮತ್ತು ಹಳ್ಳಿಗಳ ನಡುವೆ ಸಂಪರ್ಕವನ್ನು ಏರ್ಪಡಿಸುವುದಲ್ಲದೆ, ಪ್ರತಿದಿನ ಲಕ್ಷಾಂತರ ಪ್ರಯಾಣಿಕರು ಹಾಗೂ ಸಾವಿರಾರು ಟನ್‌ಗಳಷ್ಟು ಸರಕುಗಳನ್ನು ಸಾಗಿಸುವುದರ ಜೊತೆಗೆ ವಿವಿಧ ಪ್ರದೇಶಗಳ ಜನರನ್ನು ಬೆಸೆಯುವ ಮೂಲಕ ಸಾಮಾಜಿಕ–ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಿ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿ, ರಾಮನಗರದ ಜನರಿಗೆ ಅತ್ಯಗತ್ಯವಾಗಿರುವ 2–3 ಅಂಡರ್‌ಪಾಸ್ ಒದಗಿಸುವಂತೆ ಕೇಂದ್ರ ಸಚಿವರ ಬಳಿ ಮನವಿ ಮಾಡಿದರು. ಸಂಸದ ಡಾ. ಸಿ.ಎನ್. ಮಂಜುನಾಥ್, ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾಟಕ ಮನರಂಜನೆ ಮಾತ್ರವಲ್ಲ; ಸಮಾಜದ ಒಳಿತು–ಕೆಡಕುಗಳ ಸಂದೇಶ ಸಾರುವ ಮಾಧ್ಯಮ

ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅಭಿಮತ



ರಂಗಾಯಣದ ವನರಂಗದಲ್ಲಿ ಮಂಗಳವಾರ 'ಚಿಣ್ಣರ ಮೇಳ' ಮಕ್ಕಳ ನಾಟಕೋತ್ಸವ ಉದ್ಘಾಟಿಸಿದ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅವರಿಗೆ 'ರಂಗ ಗೌರವ' ನೀಡಿ ಅಭಿನಂದಿಸಲಾಯಿತು.

ಮೈಸೂರು, ಮೇ 5(ವಿವಿಹೆಚ್)– ನಾಟಕ ಮನರಂಜನೆಯ ಜೊತೆಗೆ ಸಮಾಜದ ಒಳಿತು–ಕೆಡಕುಗಳ ಸಂದೇಶವನ್ನು ನೀಡುವ ಒಂದು ಮಾಧ್ಯಮ ಎಂದು ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಹಾಗೂ ಹಿರಿಯ ರಂಗಕರ್ಮಿ ಶ್ರೀಮತಿ ಹರಿಪ್ರಸಾದ್ ಅಭಿಪ್ರಾಯಪಟ್ಟರು.

ನಗರದ ರಂಗಾಯಣ ಆವರಣದ ವನರಂಗದಲ್ಲಿ ಆರಂಭವಾದ 'ಚಿಣ್ಣರ ಮೇಳ' ಮಕ್ಕಳ ನಾಟಕೋತ್ಸವಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ನಾಟಕ ಎಂಬುದು ಬಹಳ ಪ್ರಭಾವಶಾಲಿ. ನಾಟಕ, ನಟರಿಗೆ ಪರಕಾಯ ಪ್ರವೇಶ ಪಡೆಯುವ ಅವಕಾಶದೊಂದಿಗೆ ದಿವ್ಯಾನುಭೂತಿ ನೀಡುತ್ತದೆ. ನಾಟಕದಲ್ಲಿ ಪ್ರೇಕ್ಷಕ ವೀಕ್ಷಕ ಎಂಬ ವ್ಯತ್ಯಾಸ ಇರುವುದಿಲ್ಲ. ನಮ್ಮ ಸುತ್ತ–ಮುತ್ತಲೂ ಇರುವಂಥ ಎಲ್ಲ ತರಹದ ಸಮಸ್ಯೆಗಳನ್ನ ನಾಟಕದ ಮೂಲಕ ನಾವು ಆಡಳಿತಕಾರರಿಗೆ ತಿಳಿಸಿಕೊಡಬಹುದು. ಇದು ಜನಜಾಗೃತಿ ಮೂಡಿಸುವ ಅಭಿವ್ಯಕ್ತಿ ಪ್ರತಿಭಟನೆಯಾಗಿದೆ ಎಂದು ವಿವರಿಸಿದರು.

ಇಂದಿನ ಮಕ್ಕಳಲ್ಲಿ ಸಾಮಾಜಿಕ ಬದ್ಧತೆ ಬೆಳೆಯಲು ನಾಟಕಗಳ ಕಲಿಕೆ ಬಹಳ ಅಗತ್ಯವಾಗಿದೆ. ನಾಟಕದ ಬಗೆಗಿನ ಅರಿವು, ಜನರ ಕಷ್ಟ, ರೈತರ ಶ್ರಮವನ್ನು ತಿಳಿಸುತ್ತದೆ. ನಾವು ಚಿಕ್ಕವರಾಗಿದ್ದಾಗ ಅನ್ನವನ್ನು ತಟ್ಟೆಯಲ್ಲಿ ಬಿಟ್ಟರೆ ಮನೆಯವರು ಅನ್ನ ಅಳುತ್ತದೆ ಎಂದು ಹೇಳುವ ಮೂಲಕ ರೈತರ ಬೆವರಿನ ಬೆಲೆಯನ್ನು ವಿವರಿಸುತ್ತಿದ್ದರು. ಇಂತಹ ಪ್ರಜ್ಞೆಯನ್ನು ಮಕ್ಕಳಲ್ಲಿ ಬೆಳೆಸಲು ಪೋಷಕರು ಇಂತಹ ಮೇಳಗಳಲ್ಲಿ ಮಕ್ಕಳನ್ನು ಬೆರೆಯುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಪೋಷಕರು ಎಂದಾದರೂ ತಮ್ಮ ಸುತ್ತಲಿನ ಪರಿಸರವನ್ನು ಪರಿಚಯಿಸಿದ್ದಾರೆಯೇ? ಪರಿಸರ, ಮಣ್ಣಿನ ಮಹತ್ವ, ವಿಜ್ಞಾನ, ಖಗೋಳ ಜ್ಞಾನವನ್ನು ಬಾಲ್ಯದಿಂದಲೇ ಮಕ್ಕಳಿಗೆ ಪರಿಚಯಿಸುವ ಕೆಲಸ ಮಾಡಬೇಕು. ಮಕ್ಕಳನ್ನು ಸ್ವತಂತ್ರವಾಗಿ ಬೆಳೆಯಲು ಬಿಡಬೇಕು. ಪೋಷಕರಾದವರು ತಮ್ಮ ಕನಸುಗಳನ್ನು ಅವರಲ್ಲಿ ಹೇರುವ ಕೆಲಸವನ್ನು ಎಂದಿಗೂ ಮಾಡಬಾರದು ಎಂದು ತಿಳಿಹೇಳಿದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಈ ಬಾರಿ 'ಈ ಮಣ್ಣು ನಮ್ಮದು' ಎಂಬ ಆಶಯದಡಿ ಶಿಬಿರ ಆಯೋಜಿಸಲಾಗಿತ್ತು. ಇದರಲ್ಲಿ 320ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಗೊಳಿಸಲು ರಂಗ ಕೇಂದ್ರಿತ ಪಠ್ಯಕ್ರಮ ರೂಪಿಸಿ, ಶಿಬಿರದಲ್ಲಿ ಅನುಷ್ಠಾನಗೊಳಿಸಿದ್ದೆವು. ಇದರಲ್ಲಿ ಮಕ್ಕಳು ಸಕ್ರಿಯವಾಗಿ ತೊಡಗಿಸಿಕೊಂಡು ಹಲವು ಹೊಸತುಗಳನ್ನು ಕಲಿತಿದ್ದಾರೆ ಎಂದರು.

27 ವರ್ಷದಿಂದ ನಡೆಯುತ್ತಿರುವ ಚಿಣ್ಣರ ಮೇಳ ರಾಜ್ಯಕ್ಕೆ ಮಾದರಿಯಾಗಿದೆ. ಪ್ರತಿ ಮಗುವಿನಲ್ಲೂ ಅನನ್ಯ ಕಲೆಯಿದೆ. ಆದರೆ ಶಾಲೆಗಳು ಮಕ್ಕಳ ಅಭಿವ್ಯಕ್ತಿ ಕಲಿಕೆ ಮತ್ತು ಸಾಧ್ಯತೆಗಳನ್ನು ಕುಂಠಿತಗೊಳಿಸುತ್ತದೆ. ಇತ್ತ ಚಿಣ್ಣರ ಮೇಳ ಮಕ್ಕಳ ಆಂತರ್ಯವನ್ನು ಗುರುತಿಸಿ, ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತಿದೆ ಎಂದರು.

ರಂಗ ಸಮಾಜದ ಸದಸ್ಯ ಡಿಂಗ್ರಿ ನಾಗೇಶ್, ರಂಗಕರ್ಮಿ, ರಂಗ ಸಮಾಜದ ಸದಸ್ಯ ಸುರೇಶ್ ಬಾಬು, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯೆ ಡಾ.ಜಾಹಿದಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕ ಎಂ.ಡಿ. ಸುದರ್ಶನ್, ಸಂಚಾಲಕ ಸಂತೋಷ್ ದಿಂಡಗೂರು ಉಪಸ್ಥಿತರಿದ್ದರು.

ಸಂಜು–ಕಾರ್ತಿಕ್ ಶತಕದಾಟ; ಸಿಎಸ್‌ಕೆಗೆ ಸುಲಭ ತುತ್ತಾದ ಡೆಲ್ಲಿ ಕ್ಯಾಪಿಟಲ್ಸ್



ಸಂಜು–ಕಾರ್ತಿಕ್ ಶರ್ಮಾ ಜೊತೆಯಾಟ.

ಡೆಲ್ಲಿ, ಮೇ 5(ವಿವಿಹೆಚ್)– ಸಂಜು ಸ್ಯಾಮ್ಸನ್–ಕಾರ್ತಿಕ್ ಶರ್ಮಾ ಅವರ ಅಜೇಯ ಶತಕದಾಟದ ನೆರವಿನಿಂದ ಚೆನ್ನೈಸೂಪರ್ ಕಿಂಗ್ಸ್, ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿತು. ಆ ಮೂಲಕ ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೆ ಜಿಗಿತ ಕಂಡಿತು.

ಇಲ್ಲಿನ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಐಪಿಎಲ್–2026ರ 48ನೇ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಚೆನ್ನೈಸೂಪರ್ ಕಿಂಗ್ಸ್ 17.3 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 159 ರನ್ ಗಳಿಸಿತು.

ತಮ್ಮದೇ ಹೋಂ ಗ್ರೌಂಡ್‌ನಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿಗೆ ಆರಂಭ ಉತ್ತಮವಾಗಿರಲಿಲ್ಲ. ಆರಂಭದಿಂದಲೇ ಮಂದಗತಿಯಿಂದ ಬ್ಯಾಟ್ ಬೀಸಿದ ಡೆಲ್ಲಿ, ಚೆನ್ನೈ ಬೌಲರ್‌ಗಳ ಮುಂದೆ ಮಂಕಾದರು. ಆರಂಭಿಕರಾದ ಪಥುಮ್ ನಿಸ್ಸಾಂಕ 19(15) ಹಾಗೂ ಕೆ.ಎಲ್.ರಾಹುಲ್ 12(13) ಬೇಗನೇ ವಿಕೆಟ್ ಒಪ್ಪಿಸಿದರು.

ಬಳಿಕ ಬಂದ ನಿತೀಶ್ ರಾಣಾ 15(13), ಕರುಣ್ ನಾಯರ್ 13(13) ಹಾಗೂ ನಾಯಕ ಅಕ್ಷರ್ ಪಟೇಲ್ 2(6) ರನ್ ಗಳಿಸಿ ನಿರಾಸೆ ಮೂಡಿಸಿದರು.

ಈ ವೇಳೆ ಒಂದಾದ ಟ್ರಿಸ್ಟನ್ ಸ್ಟಬ್ಸ್ ಹಾಗೂ ಇಂಪ್ಯಾಕ್ಟ್ ಪ್ಲೇಯರ್ ಸಮೀರ್ ರಿಜ್ವಿ ಅರ್ಧಶತಕದ ಜೊತೆಯಾಟ ನೀಡಿ ತಂಡಕ್ಕೆ ಚೇತರಿಕೆ ನೀಡಿದರು. ಸ್ಟಬ್ಸ್ 31 ಎಸೆತಗಳಲ್ಲಿ 38 ರನ್ ಗಳಿಸಿದರೆ, ರಿಜ್ವಿ 24 ಎಸೆತಗಳಲ್ಲಿ 4 ಸಿಕ್ಸರ್ ಸಹಿತ ಅಜೇಯ 40 ರನ್ ಚಚ್ಚಿದರು. ಅಶುತೋಶ್ ಶರ್ಮಾ 14(5)ರನ್ ಗಳಿಸಿದರೆ, ಮಿಚೆಲ್ ಸ್ಟಾರ್ಕ್ ಖಾತೆ ತೆರೆಯದೇ ಸ್ಕ್ರೀಜ್‌ನಲ್ಲಿದ್ದರು.

ಚೆನ್ನೈ ಪರ ನೂರ್ ಅಹ್ಮದ್ 2 ವಿಕೆಟ್, ಅಕಿಲ ಹೊಸೇನ್, ಮುಕೇಶ್ ಚೌಧರಿ, ಗುರ್ಜಪ್ನಿತ್ ಸಿಂಗ್ ಹಾಗೂ ಜೇಮಿ ಓವರ್‌ಟನ್ ತಲಾ ಒಂದೊಂದು ವಿಕೆಟ್ ಪಡೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಚೆನ್ನೈ ನಾಯಕ ಋತುರಾಜ್ ಗಾಯಕ್ವಾಡ್ 6(13) ಊರ್ವಿಲ್ ಪಟೇಲ್ 17(9) ವಿಕೆಟನ್ನು ಬೇಗನೆ ಕಳೆದುಕೊಂಡು ಆರಂಭಿಕ ಆಘಾತ ಎದುರಿಸಿತು. ಪವರ್ ಪ್ಲೇನಲ್ಲಿ ವಿಕೆಟ್ ಕಳೆದುಕೊಂಡ ಸಿಎಸ್‌ಕೆಗೆ ಸಂಜು ಸ್ಯಾಮ್ಸನ್ ಹಾಗೂ ಯುವ ಬ್ಯಾಟರ್ ಕಾರ್ತಿಕ್ ಶರ್ಮಾ ಅಜೇಯ ಶತಕದಾಟದ ಮೂಲಕ ಗೆಲುವು ತಂದುಕೊಟ್ಟರು.

ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ತೋರಿದ ಸಂಜು ಸ್ಯಾಮ್ಸನ್ 52 ಎಸೆತಗಳಲ್ಲಿ 7ಬೌಂಡರಿ, 6 ಸಿಕ್ಸರ್ ಸಹಿತ ಅಜೇಯ 87ರನ್ ಗಳಿಸಿದರೆ, ಇವರಿಗೆ ಸಾಥ್ ನೀಡಿದ ಕಾರ್ತಿಕ್ ಶರ್ಮಾ 31 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಸಹಿತ 41 ರನ್ ಗಳಿಸಿ ಔಟಾಗದೇ ಉಳಿದರು. ಡೆಲ್ಲಿ ಪರ ನಾಯಕ ಅಕ್ಷರ್ ಪಟೇಲ್ ಹಾಗೂ ಲುಂಗಿ ಎನ್‌ಗಿಡಿ ತಲಾ ಒಂದೊಂದು ವಿಕೆಟ್ ಪಡೆದರು.

ರೈತರ ಸಮಸ್ಯೆ ಬಗೆಹರಿಸುವಲ್ಲಿ ತಾಲೂಕು ಆಡಳಿತ ವಿಫಲ

ಕೂಡಲೇ ತಹಸೀಲ್ದಾರ್‌ರನ್ನು ಎತ್ತಂಗಡಿ ಮಾಡಲು ಒತ್ತಾಯ

ತಿ.ನರಸೀಪುರ, ಮೇ 5– ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ತಾಲೂಕು ಆಡಳಿತ ಸಂಪೂರ್ಣ ವಿಫಲವಾಗಿದ್ದು, ರೈತರ ಬಗ್ಗೆ ನಿರ್ಲಕ್ಷ್ಯ ವಹಿಸಿ ಅಧಿಕಾರಿಗಳನ್ನು ತಹ ಬದಿಗೆ ತರದೇ ಮೃದು ಧೋರಣೆ ತೋರಿರುವ ತಹಸೀಲ್ದಾರ್ ಸುರೇಶಾ ಚಾರ್ ಅವರನ್ನು ಕೂಡಲೇ ಎತ್ತಂಗಡಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ–ಹಸಿರುಸೇನೆ ಸಂಘಟನೆ ಜಿಲ್ಲಾಧ್ಯಕ್ಷ ಸತೀಶ್ ಒತ್ತಾಯಿಸಿದ್ದಾರೆ.

ಪಟ್ಟಣದ ಕರ್ನಾಟಕ ರಾಜ್ಯ ರೈತ ಸಂಘ–ಹಸಿರುಸೇನೆ ಸಂಘದ ಕಚೇರಿಯಲ್ಲಿ ಮಂಗಳವಾರ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ಸಂಘಟನೆಯು ತಾಲೂಕಿನ 5 ಹೋಬಳಿಗಳ ರೈತ ಸಮಸ್ಯೆಗಳ ಬಗ್ಗೆ ದೀರ್ಘವಾಗಿ ಅಧ್ಯಯನ ಮಾಡಿ ಮಾಹಿತಿ ಕಲೆ ಹಾಕಿದೆ. ತಾಲೂಕು ಆಡಳಿತ, ಜಿಲ್ಲಾಡಳಿತವಾಗಲೀ ರೈತರ ಸಮಸ್ಯೆಗಳನ್ನು ಬಗೆಹರಿಸಲು ಸಂಪೂರ್ಣ ವಿಫಲವಾಗಿರುವುದು ಗಮನಕ್ಕೆ ಬಂದಿದೆ. ತಾಲೂಕು ಆಡಳಿತ ರೈತರ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನ ಮಾಡಿಲ್ಲ. ತಹಸೀಲ್ದಾರ್ ಕೈ ಕೆಳಗೆ ಕೆಲಸ ಮಾಡುವ ಅಧಿಕಾರಿಗಳು ರೈತರನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಅಸಡ್ಡೆ ಭಾವನೆ ತೋರುತ್ತಿದ್ದಾರೆ. ಭೂ ಸರ್ವೇ ಕಾರ್ಯದಲ್ಲಿ ವಿಳಂಬ, ಅಳತೆಗಳಲ್ಲಿ ತಪ್ಪುಗಳು, ದಾಖಲೆಗಳ ಸರಿಯಾದ ನವೀಕರಣವಾಗದಿರುವುದು ಸೇರಿದಂತೆ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಇದರಿಂದ ರೈತರು ಮತ್ತು ಜಮೀನು ಮಾಲೀಕರು ಅನಾವಶ್ಯಕ ತೊಂದರೆ ಅನುಭವಿಸುತ್ತಿದ್ದಾರೆ. ಸರ್ವೇ



ರಾಜ್ಯ ರೈತ ಸಂಘ–ಹಸಿರು ಸೇನೆ ಸಭೆಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಸತೀಶ್ ಮಾತನಾಡಿದರು.

ಸಮಯಕ್ಕೆ ಆಗದೇ ಇರುವುದರಿಂದ ಜಮೀನು ಗಡಿಭಾಗದ ವಿವಾದಗಳು ಹೆಚ್ಚಾಗುತ್ತಿವೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ತಪ್ಪು ದಾಖಲೆಗಳು ಸೃಷ್ಟಿಯಾಗುತ್ತಿವೆ. ಇನ್ನೂ ಕೆಲವು ಜನರು, ಅರ್ಜಿಗಳನ್ನು ಸಲ್ಲಿಸಿದ ಬಳಿಕ ತಿಂಗಳಗಟ್ಟಲೇ ಕಾಯಬೇಕಾಗುತ್ತಿದೆ. ಕೆಲವು ಕಡೆ ಮಧ್ಯವರ್ತಿಗಳ ಹಸ್ತಕ್ಷೇಪದಿಂದ ಪಾರದರ್ಶಕತೆ ಕುಂದುತ್ತಿದೆ ಎಂಬ ಆರೋಪವೂ ಕೇಳಿ ಬರುತ್ತಿದೆ ಎಂದು ಅವರು ಆರೋಪಿಸಿದರು.

ತಾಲೂಕು ಆಡಳಿತ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ಬೆಳೆ ನಷ್ಟ, ನೀರಾವರಿ ಕೊರತೆ, ಬೆಳೆ ವಿಮೆ ಪರಿಹಾರ ವಿಳಂಬ, ವಿದ್ಯುತ್ ಸಮಸ್ಯೆ ಸೇರಿದಂತೆ ಹಲವು ಪ್ರಮುಖ ವಿಚಾರಗಳಲ್ಲಿ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ. ಹಲವು ಬಾರಿ ಮನವಿ ಮಾಡಿದರೂ ತಾಲೂಕು ಆಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆಡಿಟ್ ಮಾಡಿಸದೇ ಹಣ ದುರುಪಯೋಗ: ಮುಜರಾಯಿ ಇಲಾಖೆಯಡಿ ಬರುವ ದೇವಾಲಯಗಳಲ್ಲಿ ಆಡಿಟ್ ಮಾಡಿಸದೆ ಮುಜರಾಯಿ ಅಧಿಕಾರಿಯೊಬ್ಬರು ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಸಹ ಕೇಳಿ ಬಂದಿದ್ದು, ಭಕ್ತರ ಕಾಣಿಕೆ, ದೇಣಿಗೆ ಹಾಗೂ ದೇವಾಲಯದ ಆದಾಯವನ್ನು ಪಾರದರ್ಶಕವಾಗಿ ನಿರ್ವಹಿಸಬೇಕಾದ ಹೊಣೆಗಾರಿಕೆ ಇದ್ದರೂ, ಕೆಲವೆಡೆ ನಿಯಮಗಳನ್ನು ಉಲ್ಲಂಘಿಸಲಾಗಿದೆ ದೇವಾಲಯದ ಆದಾಯ–ವೆಚ್ಚದ ಲೆಕ್ಕಪತ್ರಗಳನ್ನು ಸಮಯಕ್ಕೆ ಸರಿಯಾಗಿ ಪರಿಶೀಲನೆಗೆ ಒಳಪಡಿಸದೆ, ಆಡಿಟ್ ಪ್ರಕ್ರಿಯೆಯನ್ನು ನಿರ್ಲಕ್ಷ್ಯ ಮಾಡಲಾಗಿದೆ. ಇದರಿಂದಾಗಿ ಹಣದ ದುರುಪಯೋಗಕ್ಕೆ ಅವಕಾಶ ಸಿಕ್ಕಿದೆ ಎಂದು ಅವರು ಆರೋಪಿಸಿದರು.

ಈ ಬಗ್ಗೆ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ತಹಸೀಲ್ದಾರ್ ಮೌನಕ್ಕೆ ಶರಣಾಗಿರುವುದು ಅನುಮಾನಕ್ಕೆ ಕಾರಣವಾಗಿದೆ. ತಾಲೂಕಿನಲ್ಲಿ ಗ್ಯಾಸ್ ಸಮರ್ಪಕವಾಗಿ ಪೂರೈಕೆ ಆಗುತ್ತಿಲ್ಲ. ಸರ್ವೇ ಕಾರ್ಯ ಸರಿಯಾಗಿ ನಡೆಯುತ್ತಿಲ್ಲ. ಕೆಳ ಹಂತದ ಅಧಿಕಾರಿಗಳಿಗೆ ಕಡಿವಾಣ ಹಾಕಲು ತಾಲೂಕು ಆಡಳಿತ ವಿಫಲವಾಗಿದೆ. ಹಾಗಾಗಿ ತಹಸೀಲ್ದಾರ್ ಟಿ.ಜೆ.ಸುರೇಶಾ ಚಾರ್ ಅವರನ್ನು ಕೂಡಲೇ ಎತ್ತಂಗಡಿ ಮಾಡಬೇಕು ಎಂದು ಒತ್ತಾಯಿಸಿದ ಅವರು ತಾಲೂಕಿನ ಸಾರ್ವಜನಿಕರ ಹಾಗೂ ರೈತರ ಸಮಸ್ಯೆಗಳನ್ನು ತಕ್ಷಣ ಪರಿಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ತಾಲೂಕು ಕಚೇರಿ ಎದುರು ಪ್ರತಿಭಟನೆ, ರಸ್ತೆ ತಡೆ ಸೇರಿದಂತೆ ವಿವಿಧ ರೀತಿಯ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಭೆಯಲ್ಲಿ ಜಿಲ್ಲಾ ಗೌರವಾಧ್ಯಕ್ಷ ಮಹದೇವಸ್ವಾಮಿ, ತಾಲೂಕು ಅಧ್ಯಕ್ಷ ಮಹದೇವ, ತಾಲೂಕು ಗೌರವಾಧ್ಯಕ್ಷ ಮಹದೇವಸ್ವಾಮಿ, ಟೌನ್ ಅಧ್ಯಕ್ಷ ಶಾಂತ, ಮಹಿಳಾ ಅಧ್ಯಕ್ಷೆ ಶ್ವೇತಾ, ನಂಜನಗೂಡು ಘಟಕದ ಉಪಾಧ್ಯಕ್ಷ ಮಹದೇವನಾಯಕ, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವನಂಜು, ತಾಲೂಕು ಉಪಾಧ್ಯಕ್ಷ ಸೋಮಣ್ಣ, ಕಸಬಾ ಹೋಬಳಿ ಅಧ್ಯಕ್ಷ ಪ್ರಕಾಶ್, ಮೂಗೂರು ಹೋಬಳಿ ಅಧ್ಯಕ್ಷ ಶಾಂತರಾಜು, ಸೋಸಲೆ ಹೋಬಳಿ ಅಧ್ಯಕ್ಷ ಮಹೇಶ್, ಬನ್ನೂರು ಹೋಬಳಿ ಅಧ್ಯಕ್ಷ ಜಗದೀಶ್, ತಲಕಾಡು ಹೋಬಳಿ ಅಧ್ಯಕ್ಷ ಚೆಲುವರಾಜು, ತಾಲೂಕು ಸಹ ಕಾರ್ಯದರ್ಶಿ ರಾಜೇಂದ್ರ, ರಾಮಸ್ವಾಮಿ, ಶಂಕರೇಗೌಡ, ಲೋಕೇಶ್, ಸಿದ್ದರಾಜು ಹಾಜರಿದ್ದರು.

ಕೋಟೆಯಲ್ಲಿ ಕಸಾಪ ಸಂಸ್ಥಾಪನಾ ದಿನಾಚರಣೆ



ಕಸಾಪ ವತಿಯಿಂದ 112ನೇ ಸಂಸ್ಥಾಪನಾ ದಿನಾಚರಣೆ ನಡೆಯಿತು.

ಹೆಚ್.ಡಿ.ಕೋಟೆ, ಮೇ 5– ಮನುಷ್ಯನಲ್ಲಿ ಜ್ಞಾನ ಇದ್ದಾಗ ಮಾತ್ರ ನಾಡು, ನುಡಿ, ನೆಲ, ಜಲ ಉಳಿಯಲು ಸಾಧ್ಯ ಎಂದು ಸಾಹಿತಿ, ಬಿ.ಮಟಕೆರೆ ಗ್ರಾಮದ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಡಾ.ಸಂತೋಷ್ ಚೊಕ್ಕಾಡಿ ತಿಳಿಸಿದರು.

ತಾಲೂಕಿನ ತುಂಬಸೋಗೆ ಎಂಎಂಕೆ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಮಂಗಳವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಡೆದ 112ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಕನ್ನಡಿಗರಿಂದಲೇ ಕನ್ನಡವನ್ನು ಕಾಪಾಡಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಕನ್ನಡಿಗರು ಬೇರೆ ಭಾಷಿಕರಿಗೆ ಮಾರುಹೋಗಿ ಕನ್ನಡವನ್ನೇ ತ್ಯಜಿಸುತ್ತಿದ್ದು ಇಂತಹವರಿಂದ ಕನ್ನಡವನ್ನು ಕಾಪಾಡಬೇಕಿದೆ ಎಂದು ವಿಷಾದಿಸಿದರು.

ಕನ್ನಡ ಕೇವಲ ಭಾಷೆಯಾಗಿ ಉಳಿಯದೆ ನಮ್ಮ ಗುರುತು, ನಡೆಯನ್ನು ತೋರುತ್ತದೆ. ನಮ್ಮ ಭಾಷೆ ಮರೆತಾಗ ನಮ್ಮ ನಡೆ ಮತ್ತು ಗುರುತು ಸಹ ಇಲ್ಲದಂತಾಗುತ್ತದೆ. ಭಾಷೆ ಹೇಗೆ ಬಳಸುತ್ತೀರಿ ಎನ್ನುವುದಕ್ಕಿಂತ, ಭಾಷೆಗಾಗಿ ಎಷ್ಟರ ಮಟ್ಟಿಗೆ ಬದುಕುತ್ತೀರಿ ಎಂಬುದು ಮುಖ್ಯ ಎಂದರು.

ಕಸಾಪ ತಾಲೂಕು ಅಧ್ಯಕ್ಷ ಕನ್ನಡ ಪ್ರಮೋದ್ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣ, ಆರ್ಥಿಕತೆ, ಕಾರ್ಖಾನೆಗಳ ಸ್ಥಾಪನೆಗೆ ಒತ್ತು ನೀಡುವ ಜೊತೆಗೆ ನಾಡು ನುಡಿಗಾಗಿ ಅಪಾರ ಚಿಂತನೆ ನಡೆಸಿ ಭಾಷೆ ಒಳಿತಿಗಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು ಎಂದರು.

ಈ ವೇಳೆ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಹಾಲಕ್ಷ್ಮಿ, ಧನುಶ್ರೀ, ಭುವನಾ, ತೇಜಸ್ವಿನಿ ಮತ್ತು ನಿತ್ಯಶ್ರೀ ಅವರನ್ನು ಅಭಿನಂದಿಸಲಾಯಿತು. ಸರಗೂರು ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಪಪಂ ಅಧ್ಯಕ್ಷೆ ಚೈತ್ರ, ಮೋಹನ್‌ಕುಮಾರ್, ನಾಗರಾಮ, ಕಾಲೇಜಿನ ಸಿಬ್ಬಂದಿ ಸಿದ್ದರಾಜು, ಮಹಾದೇವಿ ಇದ್ದರು.

ಸೋಮೇಶ್ವರ ಕಾರ್ಮಿಕರ ಸಂಘಕ್ಕೆ ನಿವೇಶನ ಹಂಚಿಕೆ

ಶಾಸಕ ಅನಿಲ್ ಚಿಕ್ಕಮಾದು ಭರವಸೆ



ಕಾರ್ಯಕ್ರಮದಲ್ಲಿ ಸಂಘದ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.

ಸರಗೂರು, ಮೇ 5– ಇಲ್ಲಿನ ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘಕ್ಕೆ ನಿವೇಶನ ನೀಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದಲ್ಲಿ ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕಾರ್ಮಿಕರ ದಿನಾಚರಣೆಯಲ್ಲಿ ಸಮಾಜಕ್ಕಾಗಿ ಕೊಡುಗೆ ನೀಡಿದ ಕಾರ್ಮಿಕರ ತ್ಯಾಗವನ್ನು ಸ್ಮರಿಸಲಾಗುವುದು. ಅಲ್ಲದೇ ಅಸುರಕ್ಷಿತ ಪರಿಸರದಲ್ಲಿ ಕೆಲಸ ಮಾಡುವವರ ಕಷ್ಟಗಳಿಗೆ ಸ್ಪಂದಿಸುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದರು.

ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಸಂಸ್ಥಾಪಕ ಭೂಮಿಪುತ್ರ ಚಂದನಗೌಡ ಮಾತನಾಡಿ, ಕೃಷಿಕ, ಸೈನಿಕ, ಕಾರ್ಮಿಕ ಈ ದೇಶದ ಆಧಾರಸ್ತಂಭಗಳು. ನಿತ್ಯ ಸಂಕಷ್ಟದಲ್ಲಿ ದುಡಿಯುವ ಕಾರ್ಮಿಕರ ಬದುಕು ಹಸನಾಗಲು ತಾವು ನಿಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಮಾಡಿ ಎಲ್ಲರಿಗೂ ಕಾರ್ಮಿಕರ ದಿನಾಚರಣೆ ಶುಭಾಶಯಗಳು ಎಂದರು.

ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್ ಮಾತನಾಡಿ, ಕಾರ್ಮಿಕರ ಜೀವನ ಬಹಳ ತೊಂದರೆಯಲ್ಲಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಾರ್ಮಿಕರ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಸಂಘದ ಹಿರಿಯ ಸದಸ್ಯರಾದ ಪೈಂಟರ್ ರಾಜಣ್ಣ, ತಗಡೂರು ನಾಯಕ, ನರಸಿಂಹೇಗೌಡ, ನಾಗರಾಜು, ಎಸ್.ಹೆಚ್.ರಮೇಶ್ ಅವರನ್ನು ಸನ್ಮಾನಿಸಲಾಯಿತು.

ಬಿಇಓ ಸಿ.ಎನ್.ರಾಜು, ಉದ್ಯಮಿ ಹಾಗೂ ಸಮಾಜ ಸೇವಕರಾದ ನಿಂಗರಾಜು, ಪರಶಿವಕೋಟೆ, ಪಪಂ ಅಧ್ಯಕ್ಷೆ ಚೈತ್ರ, ಸದಸ್ಯರಾದ ಶ್ರೀನಿವಾಸ್, ಕಾಂಗ್ರೆಸ್ ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಎಸ್‌ಐ ಕಿರಣ್, ಜಲೀಲ್, ಕಾರ್ಮಿಕರ ಸಂಘದ ಅಧ್ಯಕ್ಷ ಮಣಿ ಆರ್., ಗೌರವಾಧ್ಯಕ್ಷ ತಗಡೂರು ನಾಯಕ, ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್, ಖಜಾಂಚಿ ಸಿ.ನಾಗರಾಜು, ಸಂಘಟನಾ ಕಾರ್ಯದರ್ಶಿ ಷರೀಫ್, ನಿರ್ದೇಶಕರಾದ ಕುಮಾರ್, ಮಂಜುನಾಥ್, ಟೈಲರ್ ಸುರೇಶ್, ಅಜಯ್, ಗಣೇಶ್, ಸದಸ್ಯರು ಇದ್ದರು.

ನಾಲ್ವಡಿಯವರ ಪರಿಶ್ರಮದಿಂದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ



ಕಾರ್ಯಕ್ರಮವನ್ನು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಉದ್ಘಾಟಿಸಿದರು.

ನಂಜನಗೂಡು, ಮೇ 5– ಕನ್ನಡ ಭಾಷೆ ಶ್ರೀಮಂತಗೊಳಿಸುವ ಉದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದರು. ಕನ್ನಡ ಸಾಹಿತ್ಯ ಪರಿಷತ್ ಕೇವಲ ಸಾಹಿತ್ಯದ ವೇದಿಕೆ ಯಲ್ಲ. ಬದಲಾಗಿ ನಮ್ಮ ಕನ್ನಡ ಭಾಷೆಯ ಅಸ್ಮಿತೆಯಾಗಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಭಾರತಿ ತೀರ್ಥ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ 112ನೇ ಸಂಸ್ಥಾಪನಾ ದಿನಾಚರಣೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಂತೀಯ ಭಾಷೆಗಳಲ್ಲಿ ಕನ್ನಡಕ್ಕೆ ತನ್ನದೇ ಆದ ಪ್ರಾಮುಖ್ಯತೆ ತಂದು ಕೊಡಬೇಕು ಎಂಬ ಸದುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಆ ಮೂಲಕ ನಾಡಿನ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಶ್ರಮಿಸುತ್ತಿದೆ. ನಾಲ್ವಡಿ ಅವರ ಪರಿಶ್ರಮದಿಂದಾಗಿ ಇಂದು ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದೆ. ಜೊತೆಗೆ ವಿವಿಧ ರಾಜ್ಯಗಳ ಪೈಪೋಟಿಯ ನಡುವೆ ನಮ್ಮ ನಾಡಿನ ಕವಿಗಳು ಕನ್ನಡ ಭಾಷೆಗೆ 9 ಜ್ಞಾನಪೀಠ ಪ್ರಶಸ್ತಿಗಳನ್ನು ತಂದು ಕೊಡುವ ಮೂಲಕ ಕನ್ನಡ ಭಾಷೆ ಹಿರಿಮೆಯನ್ನು ದೇಶ ವಿದೇಶಗಳಲ್ಲಿ ಸಾರುವ ಮೂಲಕ ಕನ್ನಡ ಭಾಷೆಗೆ ತನ್ನದೇ ಆದ ಶಕ್ತಿ ಇದೆ ಎಂಬುದನ್ನು ಸಾಬೀತು ಮಾಡಿದ್ದಾರೆ. ಕನ್ನಡಿಗರ ಒಗ್ಗಟ್ಟಿಗೆ ಸಾಕ್ಷಿಯಾದ ಈ ಸಂಸ್ಥೆ, 100 ವರ್ಷಗಳನ್ನು ದಾಟಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ನಮ್ಮ ನಾಡು–ನುಡಿ ಸಂರಕ್ಷಣೆಗಾಗಿ ಶ್ರಮಿಸುತ್ತಿರುವ ಪರಿಷತ್ತಿಗೆ ನಾವೆಲ್ಲರೂ ಬೆಂಬಲ ನೀಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಕನ್ನಡ ಭಾಷೆಯನ್ನು ಹೆಚ್ಚು ಅಧ್ಯಯನ, ಹೆಚ್ಚು ಮಾತನಾಡುವ ಮೂಲಕ ಉಳಿಸಿ ಬೆಳೆಸಬೇಕಿದೆ ಎಂದರು.

ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ದಿನೇಶ್ ಮಾತನಾಡಿ, ಮಾತೃಭಾಷೆಯಿಂದ ಮಾತ್ರ ಜೀವನದಲ್ಲಿ ಸಾಧನೆ ಸಾಧ್ಯ ಆದ್ದರಿಂದ ವಿದ್ಯಾರ್ಥಿಗಳು ಇಂಗ್ಲಿಷ್ ವ್ಯಾಮೋಹ ಹಾಗೂ ಕೀಳರಿಮೆ ಬಿಟ್ಟು, ಶ್ರದ್ಧೆ, ಪರಿಶ್ರಮದಿಂದ ಕನ್ನಡ ಭಾಷೆ ಬರೆದು ಓದುವ ಮನಸ್ಥಿತಿ ಬೆಳೆಸಿಕೊಳ್ಳಬೇಕು. ಆ ಮೂಲಕ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಬೇಕಿದೆ ಎಂದರು.

ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಪಿಯುಸಿಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷೆ ಲತಾ, ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್, ಬಿ.ವಿ. ರಾಘವೇಂದ್ರ, ಡಾ.ಅನಿತಾ, ಸತೀಶ್ ದಳವಾಯಿ, ರಂಗಸ್ವಾಮಿ, ಶೋಭಾ ನಾಗಶಯನ, ಮಂಜುಳಾ ಸೇರಿದಂತೆ ಹಲವರಿದ್ದರು.

ಮಾದಾಪುರದಲ್ಲಿ ಉಚಿತ ಹ್ಯಾಂಡಲ್ ಎಕ್ಸ್ ರೇ ಅಭಿಯಾನ



ಮಾದಾಪುರ ಕೇಂದ್ರದಲ್ಲಿ ರೋಗಿಗಳಿಗೆ ಎಕ್ಸ್ ರೇ ಮಾಡಲಾಯಿತು.

ಹೆಚ್.ಡಿ.ಕೋಟೆ, ಮೇ 5– ತಾಲೂಕಿನ ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಡಿ 100 ದಿನದ ಹ್ಯಾಂಡಲ್ ಎಕ್ಸ್ ರೇ ಅಭಿಯಾನ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, 100 ದಿನದ ಹ್ಯಾಂಡಲ್ ಎಕ್ಸ್ ರೇ ಅಭಿಯಾನದ ಅಡಿ ಈ ದಿನ ಉಚಿತವಾಗಿ ಹ್ಯಾಂಡಲ್ ಎಕ್ಸ್ ರೇ ಮಾಡುತ್ತಿದ್ದೇವೆ. ಇದರ ಉದ್ದೇಶ ಕ್ಷಯ ರೋಗ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದಾಗಿದೆ. ಇದೀಗ ಕ್ಷಯ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಪರ್ಕದಲ್ಲಿರುವ ವ್ಯಕ್ತಿಗಳಿಗೆ ಉಚಿತವಾಗಿ ಎಕ್ಸ್ ರೇ ಮಾಡುತ್ತಿದ್ದೇವೆ. ಆದ್ದರಿಂದ ಮಾದಾಪುರ ಮತ್ತು ಅಕ್ಕಪಕ್ಕದ ಗ್ರಾಮದ ಜನರು ಕಾರ್ಯಕ್ರಮ ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರಕಲಾ ಮಾತನಾಡಿ, ಇದೇ ಮೊದಲ ಬಾರಿಗೆ ಮಾದಾಪುರದಲ್ಲಿ ಉಚಿತವಾಗಿ ಹ್ಯಾಂಡಲ್ ಎಕ್ಸ್ ರೇಯನ್ನು ಮಾಡುತ್ತಿದ್ದೇವೆ. ತಾಲೂಕು ಮಟ್ಟದಿಂದ ಸಿಬ್ಬಂದಿ ವರ್ಗದವರು ಬಂದು ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಈ ವೇಳೆ ರೇಡಿಯೋಲಜಿ ಇಮೇಜಿಂಗ್ ಅಧಿಕಾರಿಗಳಾದ ಮಹೇಶ್, ಸುಮಾ, ಕ್ಷಯ ರೋಗ ಮೇಲ್ವಿಚಾರಕರಾದ ನಾಗರಾಜು, ಉಮೇಶ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ರವಿರಾಜ್, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗ, ಆಶಾ ಕಾರ್ಯಕರ್ತರು, ಸಾರ್ವಜನಿಕರು ಹಾಜರಿದ್ದರು.

ನಿವೃತ್ತ ಕರ ವಸೂಲಿಗಾರರಿಗೆ ಬೀಳ್ಕೊಡುಗೆ



ನಿವೃತ್ತ ಕರ ವಸೂಲಿಗಾರ ಶಿವಣ್ಣ ದಂಪತಿಯನ್ನು ಸನ್ಮಾನಿಸಿದರು.

ಬೆಟ್ಟದಪುರ, ಮೇ 5– ಸರ್ಕಾರಿ ನೌಕರರು ತಮ್ಮ ಸೇವಾ ಅವಧಿಯಲ್ಲಿ ಜನರ ವಿಶ್ವಾಸ ಗಳಿಸಿಕೊಂಡು ಜನರು ಸ್ಮರಿಸುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಬೆಟ್ಟದಪುರ ಪಿಡಿಓ ಮಂಜುನಾಥ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಅತ್ತಿಗೋಡು ಗ್ರಾಪಂನಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಕಳೆದ 38 ವರ್ಷಗಳಿಂದ ಕರ ವಸೂಲಿಗಾರರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಮೇಲೂರು ಗ್ರಾಮದ ಎಂ.ಎ.ಶಿವಣ್ಣ ಹಾಗೂ ಅವರ ಪತ್ನಿ ಜಯಮ್ಮ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, 2008ರಲ್ಲಿ ಅತ್ತಿಗೋಡು ಗ್ರಾಪಂಗೆ ನಾನು ಕಾರ್ಯದರ್ಶಿಯಾಗಿ ಕರ್ತವ್ಯಕ್ಕೆ ಹಾಜರಾದಾಗ ಶಿವಣ್ಣ ಅವರು ನಮಗೂ ಮಾರ್ಗದರ್ಶಕರಾಗಿದ್ದರು. ಸೌಮ್ಯ ಸ್ವಭಾವದವರಾದ ಅವರು ಸಾರ್ವಜನಿಕರಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದರು. ಅವರಿಗೆ ಕಾರ್ಯದರ್ಶಿಯಾಗಿ ಬಡ್ತಿ ಪಡೆಯುವ ಎಲ್ಲಾ ಅವಕಾಶಗಳಿದ್ದರೂ, ತಾಂತ್ರಿಕ ಕಾರಣಗಳಿಂದ ಕೈತಪ್ಪಿತು ಎಂದು ಬೇಸರ ವ್ಯಕ್ತಪಡಿಸಿದ ಅವರು ನಿಮ್ಮ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಂ.ಎ.ಶಿವಣ್ಣ, ಮೊದಲು ಕಿತ್ತೂರು ಮಂಡಲ ಪಂಚಾಯಿತಿಯಲ್ಲಿ 6 ವರ್ಷಗಳ ಕಾಲ ಸೇವೆ ಸಲ್ಲಿಸಿ, 32 ವರ್ಷಗಳ ಕಾಲ ಅತ್ತಿಗೋಡು ಗ್ರಾಪಂನಲ್ಲಿ ಕರ ವಸೂಲಿಗಾರನಾಗಿ ಸೇವೆ ಸಲ್ಲಿಸಿದ್ದೇನೆ. ಗ್ರಾಮಗಳಿಗೆ ಹೋದಾಗ ಸಾರ್ವಜನಿಕರು ಕೂಡ ವಿಶ್ವಾಸದಿಂದ ಸ್ಪಂದಿಸುತ್ತಿದ್ದರು ಎಂದರು.

ಈ ವೇಳೆ ಅತ್ತಿಗೋಡು ಪಿಡಿಓ ವಿಶ್ವನಾಥ್, ಕಾರ್ಯದರ್ಶಿ ಪಾಂಡು, ದ್ವಿತೀಯ ದರ್ಜೆ ಲೆಕ್ಕ ಸಹಾಯಕಿ ನೇತ್ರ, ಗ್ರಾಪಂ ಮಾಜಿ ಅಧ್ಯಕ್ಷರಾದ ಗಂಗಾಧರ್, ರಾಜೇಗೌಡ, ಮಾಜಿ ಸದಸ್ಯರಾದ ಮುರಳೀಧರ, ಶೇಖರ್, ರುದ್ರೇಶ್, ಪ್ರೀತಿ, ಲಕ್ಷ್ಮಿ, ನಿವೃತ್ತ ಬಿಸಿಎಂ ಇಲಾಖೆ ನೌಕರ ರಾಮಸ್ವಾಮಿ, ಮಾಜಿ ಸೈನಿಕ ಪಿ.ಪ್ರತಾಪ್, ಮುಖಂಡರಾದ ಶೀರಾಳ ಶೆಟ್ಟಿ, ಕೆ.ಮಹದೇವ ಶೆಟ್ಟಿ, ಬೇಲೂರು ರಾಜೇಶ್, ದಿವ್ಯ ಸ್ಪಂದನ, ಎ.ಟಿ. ಸುರೇಂದ್ರ, ಪ್ರಕಾಶ್, ಎಸ್.ಪಿ.ನಟೇಶ್, ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಕಾಳಸಂತೆಯಲ್ಲಿ ಗ್ಯಾಸ್ ಸಿಲಿಂಡರ್ ಮಾರಾಟ ಆರೋಪ

ಗ್ರಾಹಕರಿಂದ ಏಜೆನ್ಸಿಗೆ ಮುತ್ತಿಗೆ

ಬನ್ನೂರು, ಮೇ 5– ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್ ವಿತರಿಸದೇ ಅತೀ ಹೆಚ್ಚು ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿ ಪಟ್ಟಣದ ಶ್ರೀಮಹದೇಶ್ವರ ಭಾರತ್ ಗ್ಯಾಸ್ ಏಜೆನ್ಸಿಗೆ ಗ್ರಾಹಕರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಶ್ರೀಮಹದೇಶ್ವರ ಭಾರತ್ ಗ್ಯಾಸ್ ಏಜೆನ್ಸಿ ಎದುರು ಮಂಗಳವಾರ ಜಮಾಯಿಸಿದ ಪ್ರತಿಭಟನಾಕಾರರು, ಸಮರ್ಪಕವಾಗಿ ಗ್ಯಾಸ್ ಸಿಲಿಂಡರ್ ವಿತರಿಸುವಂತೆ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.


ಈ ವೇಳೆ ಮಾತನಾಡಿದ ಗ್ರಾಹಕರು ಸಾಕಷ್ಟು ಮಂದಿಗೆ ಕಳೆದ 6 ತಿಂಗಳಿಂದ ಗ್ಯಾಸ್ ಸಿಲಿಂ ಡರ್ ಪೂರೈಕೆ ಮಾಡಿಲ್ಲ. ಈ ಸಂಬಂಧ ಕಚೇರಿ, ದಾಸ್ತಾನು ಮಳಿಗೆಗೆ ಹೋದರೂ ಯಾವುದೇ ಪ್ರಯೋಜನವಾಗಿಲ್ಲ. ಕಚೇರಿಗೆ ಬಂದರೆ ಇಲ್ಲಿನ ಸಿಬ್ಬಂದಿ ನಿಮ್ಮ ಮನೆಗೆ ಗ್ಯಾಸ್ ಸಿಲಿಂಡರ್ ಬರುತ್ತದೆ ಎನ್ನುತ್ತಾರೆ. ಆದರೆ ಸ್ಥಳೀಯ ಹೋಟೆಲ್, ಕೋಳಿ ಅಂಗಡಿ, ಕಬಾಬ್ ಅಂಗಡಿ, ರಸ್ತೆ ಬದಿ ಹೋಟೆಲ್‌ಗಳಿಗೆ ಗ್ಯಾಸ್ ಸಿಲಿಂಡರ್ ಪೂರೈಕೆಯಾಗುತ್ತಿದೆ. ಆದರೆ ಗ್ರಾಮಸ್ಥರಿಗೆ ಮಾತ್ರ ಪೂರೈಕೆ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಗ್ರಾಹಕ ಬೀಡನಹಳ್ಳಿ ತಿಮ್ಮೇಗೌಡ ಮಾತನಾಡಿ, ನಮಗೆ ಕಳೆದ 3 ತಿಂಗಳಿಂದ ಗ್ಯಾಸ್ ನೀಡಿಲ್ಲ. ವಿಚಾರಿಸಲು ಹೋದರೆ ಲಂಚ ಕೇಳುತ್ತಾರೆ. ನಿತ್ಯ ಕಾಯಕ ಬಿಟ್ಟು ಬೆಳಗ್ಗೆ 7 ಗಂಟೆಗೆ ಕಚೇರಿಗೆ ಬಂದರೆ ನೀವು ಇಲ್ಲಿಗೆ ಬರುವುದು ಬೇಡ ನಿಮ್ಮ ಮನೆಗೆ ಬರುತ್ತದೆ ಎನ್ನುತ್ತಾರೆ. ಮದ್ಯ ಪ್ರಾಚ್ಯದ ನೆಪ ಹೇಳಿ ಕಾಳಸಂತೆಯಲ್ಲಿ ಬೇಕಾದವರಿಗೆ 2500ಕ್ಕೆ ಸಾವಿರಕ್ಕೆ ಮಾರಾಟ ಮಾಡುತ್ತಾರೆ. ಗ್ಯಾಸ್ ಬುಕ್ ಮಾಡಿ ಬಂದು ಕೇಳಿದರೆ ಗ್ಯಾಸ್ ಇಲ್ಲ ನಾಳೆ ಬರುತ್ತದೆ ಎಂದು ಹೇಳಿ ಗ್ರಾಹಕರನ್ನು ಸಾಗಾಕುತ್ತಾರೆ. ಹೀಗಾದರೆ ನಾವು ಹೇಗೆ ಜೀವನ ನಡೆಸುವುದು ಎಂದು ಪ್ರಶ್ನಿಸಿದರು. ಇದೇ ವೇಳೆ ಗ್ರಾಹಕರು ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಲಾಗುವುದು ಎಂದರು.

ಬಳಿಕ ರಸ್ತೆ ತಡೆಗೆ ಮುಂದಾದ ವೇಳೆ ಸ್ಥಳಕ್ಕಾಗಮಿಸಿದ ಬನ್ನೂರು ಠಾಣೆ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿದರು.

ಜೆಡಿಎಸ್ ಪದಾಧಿಕಾರಿಗಳು ನಿಷ್ಠೆಯಿಂದ ಪಕ್ಷ ಸಂಘಟಿಸಿ

ಇಲ್ಲದಿದ್ದರೇ ನಿರ್ದಾಕ್ಷಿಣ್ಯ ಕ್ರಮ: ಮಾಜಿ ಶಾಸಕ ಕೆ.ಮಹದೇವ್ ಎಚ್ಚರಿಕೆ



ಪಿರಿಯಾಪಟ್ಟಣದಲ್ಲಿ ಜೆಡಿಎಸ್ ಪದಾಧಿಕಾರಿಗಳಿಗೆ ಮಾಜಿ ಶಾಸಕ ಕೆ.ಮಹದೇವ್ ನೇಮಕಾತಿ ಪತ್ರ ವಿತರಿಸಿದರು.

ಪಿರಿಯಾಪಟ್ಟಣ, ಮೇ 5– ಪಕ್ಷ ಸಂಘಟನೆಗೆ ಯಾವುದೇ ಕಳಂಕ ತರದೆ ಪಕ್ಷದ ಗೌರವ ಉಳಿಸುವ ನಿಟ್ಟಿನಲ್ಲಿ ಪದಾಧಿಕಾರಿಗಳು ನಿಷ್ಠೆಯಿಂದ ಕಾರ್ಯ ನಿರ್ವಹಿಸಬೇಕು. ತಪ್ಪಿದರೇ ತಕ್ಷಣ ಹುದ್ದೆಯಿಂದ ಯಾವುದೇ ಮುಲಾಜಿಲ್ಲದೆ ಕೈಬಿಡಲಾಗುವುದು ಎಂದು ಮಾಜಿ ಶಾಸಕ ಕೆ.ಮಹದೇವ್ ಎಚ್ಚರಿಸಿದರು.

ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ತಾಲೂಕು ಘಟಕದ ಜೆಡಿಎಸ್ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಮುಂಬರುವ ಎಲ್ಲಾ ಚುನಾವಣೆಗಳಿಗೂ ಪಕ್ಷ ಸಂಘಟಿಸಲು ಪದಾಧಿಕಾರಿಗಳನ್ನು ನೇಮಕ ಮಾಡುತ್ತಿದ್ದು, ಸಂಘಟನೆ ನಿರ್ಲಕ್ಷ ಮಾಡುವವರನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕಲಾಗುವುದು ಎಂದರು.

ತಾಲೂಕಿನ ನಡೆಯುವ ಇತ್ತೀಚಿನ ಕಾರ್ಯಕ್ರಮಗಳಲ್ಲಿ ಸಚಿವ ಕೆ.ವೆಂಕಟೇಶ್ ನನ್ನ ಬಗ್ಗೆ ಹಗುರವಾಗಿ ಮಾತನಾಡುತ್ತಾ ನಿರಾಧಾರ ಆರೋಪ ಮಾಡುತ್ತಿದ್ದಾರೆ. ತಾಲೂಕಿನಲ್ಲಿ ನಾನು ಸೇರಿದಂತೆ ಮಾಜಿ ಶಾಸಕರಾದ ಹೆಚ್.ಎಂ.ಚನ್ನಬಸಪ್ಪ, ಕೆ.ಎಸ್.ಕಾಳ ಮರಿಗೌಡ, ಹೆಚ್.ಸಿ.ಬಸವರಾಜು ಅವರ ಅವಧಿಯಲ್ಲಿ ಸಾಕಷ್ಟು ಕೊಡುಗೆ ನೀಡಿದ್ದೇವೆ. ಆದರೆ ಕ್ಷೇತ್ರಕ್ಕೆ ನಮ್ಮ ಕೊಡುಗೆ ಏನು ಇಲ್ಲ. ಎಲ್ಲಾ ಅಭಿವೃದ್ಧಿ ಕಾರ್ಯವನ್ನು ನಾನೇ ಮಾಡಿದ್ದೇನೆ ಎಂದು ಪದೇ ಪದೇ ಹೇಳುತ್ತಿರುವುದು ಸಚಿವ ಕೆ.ವೆಂಕಟೇಶ್ ಅವರಿಗೆ ಶೋಭೆ ತರುವುದಿಲ್ಲ. ಅವರು ತಮ್ಮ ಪುತ್ರನನ್ನು ರಾಜಕೀಯಕ್ಕೆ ತರಲು ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಇದನ್ನು ನೋಡಿಕೊಂಡು ಸುಮ್ಮನೆ ಇರಲು ಸಾಧ್ಯವಿಲ್ಲ. ಇನ್ನು ಮುಂದೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಬೇಕಾಗುತ್ತದೆ. ಅವರು ಉತ್ತಮ ರಾಜಕಾರಣಿಯಾಗಿದ್ದರೇ ನಮ್ಮನ್ನು ಧೈರ್ಯವಾಗಿ ಎದುರಿಸಲಿ. ಅದನ್ನು ಬಿಟ್ಟು ಇಲ್ಲಸಲ್ಲದ ಆರೋಪ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ ಅವರು ನಮ್ಮ ಮತ್ತು ಪಕ್ಷದ ಪರ ಕೆಲಸ ಮಾಡುವವರ ವಿರುದ್ಧ ಸುಳ್ಳು ಕೇಸು ಹಾಕಿಸಲಾಗು ತ್ತಿದೆ. ಇದನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವಿಲ್ಲ ಎಂದರು.

ಇದೇ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷರಾಗಿ ಅಣ್ಣಯ್ಯ ಶೆಟ್ಟಿ ಅವರನ್ನು ಮುಂದುವರಿಸಲಾಯಿತು. ಪ್ರಧಾನ ಕಾರ್ಯದರ್ಶಿ ಎಂ.ಜೆ.ಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಸುನೀತಾ, ಉಪಾಧ್ಯಕ್ಷೆ ಆಶಾ, ಕಾನೂನು ಘಟಕದ ಅಧ್ಯಕ್ಷ ಜೆ.ಎಸ್.ನಾಗರಾಜ್, ಎಸ್‌ಟಿ ಘಟಕದ ಅಧ್ಯಕ್ಷ ತಿಮ್ಮನಾಯಕ, ಕಾರ್ಯಕಾರಿ ಸಮಿತಿ ಅಧ್ಯಕ್ಷ ರವಿ, ಕೋರ್ ಕಮಿಟಿ ಅಧ್ಯಕ್ಷ ಹೆಚ್.ಡಿ.ರಾಜೇಂದ್ರ, ಓಬಿಸಿ ಘಟಕದ ಅಧ್ಯಕ್ಷ ಡಿ.ಎ.ನಾಗೇಂದ್ರ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳಾಗಿ ಪ್ರಸನ್ನ, ಕೃಷ್ಣ, ಸುನೀಲ್, ಮಂಜುನಾಥ್ ಸಿಂಗ್, ಜವರಪ್ಪ, ಮಂಜುನಾಥ್, ಸ್ವಾಮಿ, ಮುತ್ತುರಾಜ್ ಸೇರಿದಂತೆ ಹಲವರನ್ನು ನೇಮಕ ಮಾಡಿ ನೇಮಕಾತಿ ಪತ್ರ ವಿತರಿಸಲಾಯಿತು.

ಈ ವೇಳೆ ಮುಖಂಡರಾದ ಕೆ.ರಮೇಶ್, ಗೋವಿಂದೇಗೌಡ, ರಾಜೇಗೌಡ ಸೇರಿದಂತೆ ಹಲವರಿದ್ದರು.

> ನನ್ನ ಅಧಿಕಾರವಧಿಯಲ್ಲಿ ಮಾಡಿಸಿದ್ದ 4600ಕ್ಕೂ ಹೆಚ್ಚು ಮಾಸಾಶನಗಳನ್ನು ರದ್ದುಪಡಿಸಲಾಗಿದೆ. ಸಾಗುವಳಿ ಚೀಟಿಗಳನ್ನು ರದ್ದುಪಡಿಸುವಂತೆ ಎಸಿಗೆ ಶಿಫಾರಸು ಮಾಡಿದ್ದಾರೆ. ಇದು ದ್ವೇಷ ರಾಜಕಾರಣದ ಪರಮಾವಧಿಯಾಗಿದ್ದು, ಇದಕ್ಕೆ ಕ್ಷೇತ್ರದ ಜನತೆ ತಕ್ಕ ಉತ್ತರ ನೀಡಲಿದ್ದಾರೆ. ತಾಲೂಕಿನ ರಾಗಿ ಕೇಂದ್ರಗಳಲ್ಲಿ ಕ್ವಿಂಟಾಲ್‌ಗೆ ತಲಾ 4 ಕೆಜಿ ಕಡಿಮೆ ಮಾಡಲಾಗುತ್ತಿದೆ. ಇದು ಭ್ರಷ್ಟಾಚಾರಕ್ಕೆ ಉತ್ತಮ ಉದಾಹರಣೆಯಾಗಿದ್ದು, ಈ ವಿಷಯ ಮುಖ್ಯಮಂತ್ರಿಗಳಿಗೆ ತಿಳಿದಿಲ್ಲವೇ.
> – ಕೆ.ಮಹದೇವ್, ಮಾಜಿ ಶಾಸಕ.

ಸನ್ಮಾನ



ತಿ.ನರಸೀಪುರದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಬಸವ ಹಾಗೂ ಶ್ರೀಶಿವಕುಮಾರಸ್ವಾಮೀಜಿ ಅವರ ಜಯಂತಿ ಮಹೋತ್ಸವದಲ್ಲಿ ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್ ಹಲವಾರ ಹಾಗೂ ಕಾರ್ಯಕ್ರಮ ನಿರೂಪಕಿ ಶಿಕ್ಷಕಿ ಜ್ಯೋತಿ ಅವರನ್ನು ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಸನ್ಮಾನಿಸಿದರು. ಸರಗೂರು ಮಠದ ಶ್ರೀಗಳು, ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ ಸೇರಿದಂತೆ ಇತರರಿದ್ದರು.

ಶ್ರೀಶಿವಾನಂದಸ್ವಾಮಿ ನಿಧನ



ಮೂಗೂರು, ಮೇ 5– ಗ್ರಾಮದ ಶ್ರೀಬಸವನಗುಡಿ ಪಟ್ಟದ ಮಠದ ಶ್ರೀಶಿವಾನಂದಸ್ವಾಮಿ (85) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1 ಗಂಟೆಗೆ ಮೂಗೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಬುಧವಾರ 6 ಮೇ 2026

ಪಂಚ ರಾಜ್ಯಗಳ ಫಲಿತಾಂಶ 2028ರ ರಾಜ್ಯ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ

● ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅಭಿಮತ

● ಆಡಳಿತ ಯಂತ್ರ ದುರುಪಯೋಗದಿಂದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು

ಮೈಸೂರು, ಮೇ 5(ಎಂಟಿವೈ)– ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ದೇಶ ದುದ್ದಗಲಕ್ಕೂ ಬಿಜೆಪಿ ಅಲೆ ಇರುವುದನ್ನು ಸಾಬೀತುಪಡಿಸಿದ್ದು, ಇದು 2028ರಲ್ಲಿ ನಡೆಯುವ ರಾಜ್ಯ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಿ ಪರಿಣಮಿಸಿದೆ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚರಾಜ್ಯ ಚುನಾವಣೆಯಲ್ಲಿ ಬಿಜೆಪಿಗೆ ಉತ್ತಮ ಫಲಿತಾಂಶ ಬಂದಿದೆ. ಪಶ್ಚಿಮ ಬಂಗಾಳದಲ್ಲಿ 15 ವರ್ಷದ ಹಿಂದೆ 3 ಸ್ಥಾನ ಗೆದ್ದಿದ್ದ ಬಿಜೆಪಿ ಈಗ 206 ಸ್ಥಾನ ಗಳಿಸಿದೆ. ಅಲ್ಲದೆ, ಗೆಲುವಿನಲ್ಲಿ ದಾಖಲೆ ಮಾಡಿದೆ. ಮಮತಾ ಬ್ಯಾನರ್ಜಿ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿತ್ತು. ಒಂದು ಜನಾಂಗವನ್ನು ಓಲೈಸುತ್ತಿತ್ತು. ಹಿಂಸಾಚಾರ ಮಿತಿ ಮೀರಿತ್ತು ಇಂತಹ ಪರಿಸ್ಥಿತಿಯ ನಡುವೆಯೂ ಬಿಜೆಪಿ ಕಾರ್ಯಕರ್ತರು ಪ್ರಾಣ ಒತ್ತೆ ಇಟ್ಟು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದಾರೆ. ಅಸ್ಸಾಂನಲ್ಲಿಯೂ ಬಿಜೆಪಿ ಅಧಿಕಾರ ಹಿಡಿದಿರಲು ಜನರ ನಂಬಿಕೆಯೇ ಕಾರಣ ಎಂದು ತಿಳಿಸಿದರು.



ರಾಜ್ಯದ ಎರಡು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದಾರೆ. ಸರ್ಕಾರ, ಚುನಾವಣೆಯಲ್ಲಿ ಆಡಳಿತ ಯಂತ್ರ ಬಳಸಿಕೊಂಡಿದೆ. ಅಲ್ಲದೆ, ಹಣ ಬಲ, ತೋಳ್ಬಲ ಪ್ರಯೋಗಿಸಿದೆ. ಗೆಲ್ಲಲೇ ಬೇಕೆಂದು ಅಭ್ಯರ್ಥಿಗಳ ಪರ ಹೆಚ್ಚು ಹಣ ಖರ್ಚು ಮಾಡಿ ಗೆದ್ದಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆ ವೇಳೆಗೆ ರಾಜ್ಯದ ಸ್ಥಿತಿ ಬದಲಾಗಲಿದೆ ಎಂದರು.

ಚಿನ್ನತಂಬಿ ವಿರುದ್ಧ ಕ್ರಮವಾಗಬೇಕು: ಧನ ಗಣಪತಿ ಗೋಲ್ಡನ್ ಆಂಡ್ ಡೈಮಂಡ್ ಸಂಸ್ಥೆ (ಡಿಜಿಎ) ಮಾಲೀಕ ಸುಂದರ್ ರಾಜ್ ಅಲಿಯಾಸ್ ಚಿನ್ನತಂಬಿಯನ್ನು ಪೊಲೀಸರು ಈಗಾಗಲೇ ಅರೆಸ್ಟ್ ಮಾಡಿದ್ದಾರೆ. ಆದರೆ, ಇಷ್ಟು ಸಾಲದು. ಬೇಲ್ ಮೇಲೆ ಬಂದು ಅದೇ ಕೆಲಸ ಮಾಡುತ್ತಾನೆ ಮುಂದಿನ ದಿನಗಳಲ್ಲಿ ಜನರಿಗೆ ಈತ ಮೋಸ ಮಾಡುವುದನ್ನು ತಡೆಯಬೇಕು ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ರಾಜಕಾರಣದಲ್ಲಿ 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಆಯೋಜಿಸಿರುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ 10 ಲಕ್ಷ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಅದೊಂದು ಐತಿಹಾಸಿಕ ಕಾರ್ಯಕ್ರಮವಾಗಲಿದೆ. ಯಡಿಯೂರಪ್ಪ, ಸುದೀರ್ಘ 50 ವರ್ಷದ ಅವಧಿಯಲ್ಲಿ ಬಿಜೆಪಿ ಪಕ್ಷ ಕಟ್ಟಿ ಬೆಳೆಸಿದ್ದಾರೆ. ರೈತ ಪರ, ದೀನ–ದಲಿತರ ಪರ ಹೋರಾಟ ಮಾಡಿದ್ದಾರೆ. ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ. ಕರ್ನಾಟಕದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕೆಂದು ಈಗಲೂ ಹೋರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಕಾರ್ಯಕರ್ತರಿಗೆ ಶ್ರೇಯಸ್ಸು: ಬಿಜೆಪಿ ನಗರ ವಕ್ತಾರ ಎಂ.ಎ.ಮೋಹನ್ ಮಾತನಾಡಿ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ನಮ್ಮ ಪಕ್ಷ ಗೆದ್ದಿದೆ. ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಉಂಟಾಗಿತ್ತು. ಅಲ್ಲಿನ ಜನರು ಮಮತಾ ಬ್ಯಾನರ್ಜಿ ಸರ್ಕಾರವನ್ನು ತಿರಸ್ಕರಿಸಿದ್ದಾರೆ. ಇದರ ಸಂಪೂರ್ಣ ಶ್ರೇಯಸ್ಸು ಬಿಜೆಪಿ ಕಾರ್ಯಕರ್ತರಿಗೆ ಸಲ್ಲಬೇಕು. ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರಿಂದ ಪಕ್ಷ ಅಧಿಕಾರಕ್ಕೆ ಬಂದಿದೆ. ಅಲ್ಲಿ ಮತ್ತೆ ಪ್ರಜಾಪ್ರಭುತ್ವ ಸ್ಥಾಪನೆ ಆಗಲಿದ್ದು, ನಮ್ಮ ಸರ್ಕಾರ ನುಸುಳುಕೋರರನ್ನು ತಡೆಯುತ್ತದೆ ಎಂದು ಸ್ಪಷ್ಟಪಡಿಸಿದರು.

ತಮಿಳುನಾಡಿನಲ್ಲಿ ವಿಜಯ್ ಗೆದ್ದಿರುವುದನ್ನು ಸ್ವಾಗತಿಸುತ್ತೇವೆ. ಬಿಜೆಪಿ ಊಟಿಯಲ್ಲಿ ಒಂದು ಸ್ಥಾನ ಗೆದ್ದಿದೆ. ಮೈಸೂರಿನ ತಂಡ ಊಟಿಗೆ ಪ್ರಚಾರಕ್ಕೆ ಹೋಗಿತ್ತು. ಈ ಗೆಲುವನ್ನು ಸ್ವಾಗತ ಮಾಡುತ್ತೇವೆ ಎಂದರು.

ಮೇ 9ರಂದು ಚಿತ್ರದುರ್ಗದಲ್ಲಿ ಯಡಿಯೂರಪ್ಪ ಅಭಿಮಾನೋತ್ಸವ ಆಯೋಜಿಸಲಾಗಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿ ಸರ್ಕಾರ ತಂದವರು ಯಡಿಯೂರಪ್ಪ. ಲೋಕಸಭೆ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗೆಲ್ಲಲು ಅವರೇ ಕಾರಣ. ನಮ್ಮೆಲ್ಲರಿಗೂ ಅವರು ಮಾದರಿ. ಅವರು 50 ವರ್ಷ ರಾಜಕೀಯ ಜೀವನ ಪೂರೈಸಿದ್ದಾರೆ. ಅದಕ್ಕಾಗಿ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರಿನಿಂದ ಅತೀ ಹೆಚ್ಚು ಅಭಿಮಾನಿಗಳು, ಕಾರ್ಯಕರ್ತರು ಈ ಸಮಾವೇಶದಲ್ಲಿ ಭಾಗವಹಿಸಬೇಕು ಎಂದರು.

ಮೈಸೂರು ನಗರ ಹಗರಣಗಳ ತವರೂರು ಆಗಿದೆ. ಎಂಡಿಎ ಹಗರಣ, ಕೆ.ಸಿ.ಲೇಔಟ್ ಕೆರೆ ಹಗರಣ, ಸೇರಿದಂತೆ ಕಳೆದ 3 ವರ್ಷದಿಂದ ಸಣ್ಣ ಪುಟ್ಟ ಹಗರಣಗಳು ನಡೆಯುತ್ತಲೇ ಇವೆ. ಸರ್ಕಾರ ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ವಸಂತ್ ಕುಮಾರ್, ಮಹೇಶ್ ರಾಜೇ ಅರಸ್, ರುದ್ರಮೂರ್ತಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಕಾಲೇಜು ವಿದ್ಯಾರ್ಥಿಗಳೇ ಟಾರ್ಗೆಟ್; ಆರು ಮಂದಿ ಡ್ರಗ್ ಡೀಲರ್ ಬಂಧನ!

ಬೆಂಗಳೂರು: ನಿಷೇಧಿತ ಮಾದಕ ವಸ್ತುಗಳನ್ನು ಕಡಿಮೆ ಬೆಲೆಗೆ ಖರೀದಿಸಿ ನಂತರ ಅವುಗಳನ್ನು ಹೆಚ್ಚಿನ ಬೆಲೆಗೆ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಬೆಂಗಳೂರು ಪೊಲೀಸರು ಆರು ಜನರನ್ನು ಬಂಧಿಸಿದ್ದಾರೆ. ಖರೀದಿದಾರರಲ್ಲಿ ಹೆಚ್ಚಿನವರು ಕಾಲೇಜು ವಿದ್ಯಾರ್ಥಿಗಳಾಗಿದ್ದಾರೆ.

ಬಂಧಿತರಿಂದ 8 ಕೆಜಿ 58 ಗ್ರಾಂ ಎಂಡಿಎಂಎ, 5 ಕೆಜಿ 700 ಗ್ರಾಂ ಹೈಡ್ರೊ ಗಾಂಜಾ, ನಾಲ್ಕು ಮೊಬೈಲ್ ಫೋನ್‌ಗಳು ಮತ್ತು ಅಪರಾಧಕ್ಕೆ ಬಳಸಿದ ಒಂದು ಕಾರನ್ನು ವಶಪಡಿಸಿಕೊಂಡಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ. ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೌಲ್ಯ 10.05 ಕೋಟಿ ರೂ.ಗಳಾಗಿದ್ದು, ಮಾರುಕಟ್ಟೆ ಮೌಲ್ಯ 20.10 ಕೋಟಿ ರೂ.ಗಳೆಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಕಾರ್ಯಾಚರಣೆ: ಯಶವಂತಪುರ ಮತ್ತು ನಂದಿನಿ ಲೇಔಟ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಿಷೇಧಿತ ಮಾದಕ ದ್ರವ್ಯಗಳಾದ ಎಂಡಿಎಂಎ ಮತ್ತು ಹೈಡ್ರೊ ಗಾಂಜಾವನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಸುಳಿವು ದೊರೆತ ನಂತರ ಶೋಧ ನಡೆಸಲಾಗಿದೆ. ಕಾರ್ಯಾಚರಣೆ ವೇಳೆ ಆರು ವ್ಯಕ್ತಿಗಳನ್ನು ಬಂಧಿಸಲಾಗಿದೆ.

ಬಂಧಿತರಲ್ಲಿ ನಾಲ್ವರು ಸ್ಥಳೀಯರಾಗಿದ್ದು, ಇಬ್ಬರು ಇತರ ರಾಜ್ಯಗಳಿಂದ ಬಂದವರಾಗಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

ವಿಚಾರಣೆಯ ನಂತರ, ಆರೋಪಿಗಳು ನಿಷೇಧಿತ ಔಷಧಿಗಳಾದ ಎಂಡಿಎಂಎ ಮತ್ತು ಹೈಡ್ರೊ ಗಾಂಜಾವನ್ನು ಸ್ಥಳೀಯ ಪೂರೈಕೆದಾರರಿಂದ ಕಡಿಮೆ ಬೆಲೆಗೆ ಖರೀದಿಸಿ ಅದನ್ನು ಹೆಚ್ಚಿನ ಬೆಲೆಗೆ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು, ಅದರಲ್ಲಿ ಕಾಲೇಜು ವಿದ್ಯಾರ್ಥಿಗಳು ಕೂಡ ಇದ್ದರು ಎಂದು ತಪ್ಪೊಪ್ಪಿಕೊಂಡಿದ್ದಾರೆ.

ಈ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಅಂತರರಾಜ್ಯ ಮತ್ತು ಸ್ಥಳೀಯ ಎರಡೂ ಅಪರಿಚಿತ ಪೂರೈಕೆದಾರರನ್ನು ಪತ್ತೆಹಚ್ಚಲು ಪ್ರಯತ್ನಗಳು ನಡೆಯುತ್ತಿವೆ. ತನಿಖೆ ಇನ್ನೂ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಎಲ್ಲಾ ಆರು ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಯುವ ಜನತೆ ಆರೋಗ್ಯಕರ ಜೀವನ ಶೈಲಿ ರೂಢಿಸಿಕೊಳ್ಳಬೇಕು

ಮಿಷನ್ ಹೆಲ್ತಿ ಭಾರತ್ ಸ್ಥಾಪಕಿ ಕು. ತಾಪ್ಸಿ ಉಪಾಧ್ಯಾಯ್ ಅಭಿಮತ

ಮೈಸೂರು, ಮೇ 5– ಇಂದಿನ ಆಧುನಿಕ ಜೀವನ ಶೈಲಿ ಹಾಗೂ ಆಹಾರ ಸೇವನೆಯು ಜನರನ್ನು ಹೆಚ್ಚು ಅನಾರೋಗ್ಯಕ್ಕೆ ತುತ್ತಾಗುವಂತೆ ಮಾಡುತ್ತಿದೆ. ಇದರಿಂದ ಯುವ ಜನತೆ ಚಿಕ್ಕ ವಯಸ್ಸಿನಲ್ಲಿಯೇ ಮಾರಣಾಂತಿಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಯುವ ಜನತೆ ಆರೋಗ್ಯಕರ ಜೀವನ ಶೈಲಿ ಕುರಿತು ಹೆಚ್ಚು ಗಮನಹರಿಸಬೇಕು ಎಂದು ಮಿಷನ್ ಹೆಲ್ತಿ ಭಾರತ್(ಎಂಹೆಚ್‌ಬಿ)ಸಂಸ್ಥೆಯ ಸ್ಥಾಪಕರು ಹಾಗೂ ಬೊಜ್ಜು ಮುಕ್ತ ಭಾರತ ಅಭಿಯಾನದ ರುವಾರಿಗಳು ಆದ ಕು. ತಾಪ್ಸಿ ಉಪಾಧ್ಯಾಯ್ ಹೇಳಿದರು.




ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಬೊಜ್ಜು ಮುಕ್ತ ಭಾರತ ಅಭಿಯಾನದಡಿಯಲ್ಲಿ ವಿಶೇಷ ಉಪನ್ಯಾಸ ನೀಡಿದರು. ಮನುಷ್ಯ ತನ್ನ ಆರೋಗ್ಯವನ್ನು ಭಾಗ್ಯ ಎನ್ನುವುದಕ್ಕಿಂತಲೂ ಅದರ ಸ್ಥಾನ ಹೆಚ್ಚಿನದ್ದಾಗಿದೆ. ಪ್ರತಿಯೊಬ್ಬರು ತಮ್ಮ ಆರೋಗ್ಯ ಕಾಳಜಿಗಾಗಿ ಸಮಯ ನೀಡಲೇಬೇಕು. ಇಂದಿನ ಯುವ ಜನತೆ ಅಗತ್ಯವಾಗಿ ತಮ್ಮ ಮುಂದಿನ ಆರೋಗ್ಯಕರವಾದ ಬದುಕಿಗಾಗಿ ಇಂದೇ ಆರೋಗ್ಯದ ಕಾಳಜಿ ಮಾಡಬೇಕಿದೆ.

ದೈಹಿಕ ಚಟುವಟಿಕೆ, ಧ್ಯಾನ, ಯೋಗ, ಕರಿದ ಪದಾರ್ಥಗಳು ಹಾಗೂ ಹೊರಗಿನ ತಿಂಡಿಗಳ ತ್ಯಜಿಸುವಿಕೆ, ಮೊಬೈಲ್ ವೀಕ್ಷಣೆಯ ಸಮಯವನ್ನು ಕಡಿತಗೊಳಿಸುವುದು ಹಾಗೂ ಇತರರ ಬಗ್ಗೆ ಕಾಳಜಿ ವಹಿಸುವುದರ ಜೊತೆಗೆ ತಮ್ಮ ಆರೋಗ್ಯಕರ ಭಾವನೆಗಳನ್ನು ಇತರರೊಡನೆ ಹಂಚಿಕೊಳ್ಳುವುದು–ಈ ಪಂಚ ಸೂತ್ರಗಳನ್ನು ಯುವ ಸಮುದಾಯವು ಅನುಸರಿಸಬೇಕು. ರಾಸಾಯನಿಕ ಮುಕ್ತ ಸಾವಯವ ಕೃಷಿಯಿಂದ ಬೆಳೆದ ಆಹಾರ ಪದಾರ್ಥಗಳ ಬಳಕೆಯಿಂದ ನಮ್ಮ ಆರೋಗ್ಯ ಮತ್ತಷ್ಟು ಹೆಚ್ಚುತ್ತದೆ. ಮನೆಯ ಆಹಾರ ಪದಾರ್ಥಗಳನ್ನು ಹೊರತುಪಡಿಸಿ, ಹೊರಗಿನ ಆಹಾರ ಪದಾರ್ಥಗಳ ಸೇವನೆಯನ್ನು ನಿಲ್ಲಿಸಬೇಕು. ಕೆಲವು ಉದ್ಯಮಗಳು ತಮ್ಮ ಲಾಭಕ್ಕಾಗಿ ಕೆಲವು ಡೈರಿ ಉತ್ಪನ್ನಗಳನ್ನು ತಯಾರಿಸುತ್ತಿವೆ. ಅವು ಕೂಡ ಇಂದು ಜನರ ಆರೋಗ್ಯವನ್ನು ಹಾಳುಮಾಡುತ್ತಿವೆ. ಒಳ್ಳೆಯ ಉತ್ಪನ್ನಗಳನ್ನು ಮಾತ್ರ ಆಯ್ಕೆ ಮಾಡಿ ಬಳಸಬೇಕು ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಭಾರ ಪ್ರಾಂಶುಪಾಲ ಡಾ. ಮಂಜುನಾಥ ಹಾಗೂ ಮಿಷನ್ ಹೆಲ್ತಿ ಭಾರತ್‌ನ ಚಿದಾನಂದ, ಅಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಸೋತಂತೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಧೂಳಿಪಟ

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಭವಿಷ್ಯ



ಬೆಂಗಳೂರು, ಮೇ 5– ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಧೂಳೀಪಟವಾದಂತೆ ರಾಜ್ಯದಲ್ಲೂ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ನೆಲಕಚ್ಚಲಿದೆ. ಕಾಂಗ್ರೆಸ್‌ಗೆ ಯಾವುದೇ ಭವಿಷ್ಯ ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಒಂದೆರಡು ಸ್ಥಾನಗಳನ್ನೂ ಗೆಲ್ಲಲೂ ಆಗದ ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಜನತೆಯ ದೃಢವಿಶ್ವಾಸವನ್ನು ಮತ್ತೊಮ್ಮೆ ದೃಢಪಡಿಸಿದೆ. ಇದೊಂದು ಐತಿಹಾಸಿಕ ಫಲಿತಾಂಶ. ಇದಕ್ಕಾಗಿ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನವೀನ್ ಅವರು ನಿರಂತರ ಮಾರ್ಗದರ್ಶನ ನೀಡಿದ್ದಾರೆ ಮತ್ತು ಪಕ್ಷವನ್ನು ಸೂಕ್ತವಾಗಿ ಮುನ್ನಡೆಸಿದ್ದಾರೆ ಎಂದರು. ಮತದಾರರು ಅಭಿವೃದ್ಧಿಗಾಗಿ ಎನ್‌ಡಿಎಯ ಬದ್ಧತೆ ಮತ್ತು 'ವಿಕ್ಷಿತ ಭಾರತ' ನಿರ್ಮಿಸುವ ದೃಷ್ಟಿಕೋನವನ್ನು ಆಶೀರ್ವದಿಸಿದ್ದಾರೆ.

ಪಂಚಮಸಾಲಿ ಪೀಠದಲ್ಲಿ ಸಭೆ, ಸಮಾರಂಭ ಮಾಡದಂತೆ ತಿಂಗಳ ಕಾಲ ನಿಷೇಧಾಜ್ಞೆ ಜಾರಿ

ದಾವಣಗೆರೆ: ಹರಿಹರ ಪಂಚಮಸಾಲಿ ಪೀಠದಲ್ಲಿ ದಿನ ಕಳೆದಂತೆ ಸ್ವಾಮೀಜಿ ಬೆಂಬಲಿಗರು ಹಾಗೂ ಟ್ರಸ್ಟಿಗಳ ನಡುವಿನ ಗಲಾಟೆ ಜೋರಾಗುತ್ತಿದೆ. ಈ ಹಿನ್ನೆಲೆ ಮಠದಲ್ಲಿ ಸಭೆ, ಸಮಾರಂಭ ಮಾಡದಂತೆ ಜಿಲ್ಲಾಡಳಿತ ನಿಷೇಧಾಜ್ಞೆ ಜಾರಿ ಮಾಡಿದೆ.

ಮಠದಲ್ಲಿ ಕಳೆದ ಮಾ.10 ರಿಂದ ಎರಡು ಕಡೆ ಬೆಂಬಲಿಗರಿಂದ ಸಭೆ, ಸಮಾರಂಭ, ಸುದ್ದಿಗೋಷ್ಠಿಗಳು ನಡೆಯುತ್ತಿವೆ. ಇವುಗಳು ವಿಕೋಪಕ್ಕೆ ತಿರುಗಿದ್ದು, ಗಲಾಟೆಗಳು, ಪ್ರಚೋದನಕಾರಿ ಹೇಳಿಕೆಗಳು ಬರುತ್ತಿವೆ. ಇದರಿಂದಾಗಿ ಸಾರ್ವಜನಿಕ ಆಸ್ತಿಪಾಸ್ತಿ ನಷ್ಟ, ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆ. ಪೊಲೀಸ್ ಇಲಾಖೆ ಪದೇ ಪದೇ ಭದ್ರತೆ ನೀಡಲು ಆಗುವುದಿಲ್ಲ. ಅದ್ದರಿಂದ ಪಂಚಮಸಾಲಿ ಪೀಠದಲ್ಲಿ ಯಾವುದೇ ಸಭೆ, ಸಮಾರಂಭ, ಪತ್ರಿಕಾಗೋಷ್ಠಿ ನಡೆಸುವಂತಿಲ್ಲ. ಈ ಬಗ್ಗೆ ಸ್ವಾಮೀಜಿಗೆ, ಟ್ರಸ್ಟಿಗಳಿಗೆ ಹಾಗೂ ಅವರ ಬೆಂಬಲಿಗರಿಗೆ ಜಿಲ್ಲಾಡಳಿತದಿಂದ ಹಾಗೂ ಪೊಲೀಸ್ ಇಲಾಖೆಯಿಂದ ನೋಟಿಸ್ ಜಾರಿಗೊಳಿಸಿ ಮೇ 1 ರಿಂದ 30 ರವರಗೆ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಇಂದು (ಮೇ 5) ಟ್ರಸ್ಟಿಗಳ ವಿರುದ್ಧ ಸ್ವಾಮೀಜಿ ಬೆಂಬಲಿಗರು ಲೆಕ್ಕಕೊಡಿ ಅಭಿಯಾನ ಹಮ್ಮಿಕೊಂಡಿದ್ದರು. ಏ.27 ರಂದು ಟ್ರಸ್ಟಿಗಳು ಸುಳ್ಳು ಲೆಕ್ಕ ನೀಡಿದ್ದಾರೆ. ಪಾರದರ್ಶಕ ಲೆಕ್ಕ ಮಂಡನೆ ಮಾಡಬೇಕು ಎಂದು ಆಗ್ರಹಿಸಲು ಮುಂದಾಗಿದ್ದರು. ಅಲ್ಲದೇ ಹಳ್ಳಿ ಹಳ್ಳಿಗೂ ತೆರಳಿ ಭಕ್ತರು ನೀಡಿದ ಕಾಣಿಕೆ ಬಗ್ಗೆ ಪಟ್ಟಿ ಮಾಡಲು ಸ್ವಾಮೀಜಿ ಬೆಂಬಲಿಗರು ಮುಂದಾಗಿದ್ದಾರೆ. ನಿಷೇಧಾಜ್ಞೆ ನಡುವೆಯೂ ಸಭೆ ನಡೆಸಲು ಸ್ವಾಮೀಜಿ ಬೆಂಬಲಿಗರು ಯತ್ನಿಸಿದ್ದಾರೆ.

ಸಚಿವ ಜಮೀರ್ ಮನೆಯಲ್ಲಿ 1.13 ಕೋಟಿ ರೂ. ಮೌಲ್ಯದ ಚಿನ್ನಾಭರಣ ಕದ್ದಿದ್ದ ಇಬ್ಬರ ಬಂಧನ



ಬೆಂಗಳೂರು.ಮೇ.5–ಸಚಿವ ಜಮೀರ್ ಅಹಮದ್ ಖಾನ್ ಅವರ ಮನೆಯಲ್ಲಿ ಕೋಟ್ಯಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕದ್ದಿದ್ದ ಇಬ್ಬರನ್ನು ಶಿವಾಜಿನಗರ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸೈಯದ್ ಅಮೀರ್, ಅಮಿರ್ ಅಹ್ಮದ್ ಬಂಧಿತ ಆರೋಪಿಗಳು. ಕಂಟೋನ್ಮೆಂಟ್ ಬಳಿ ಇರುವ ಸಚಿವ ಜಮೀರ್ ಮನೆಯಲ್ಲಿ ಕಳೆದೊಂದು ವರ್ಷದಿಂದ ಹಂತ ಹಂತವಾಗಿ 1.13 ಕೋಟಿ ರೂಪಾಯಿ ಮೌಲ್ಯದ ಚಿನ್ನಾಭರಣ ಕದ್ದಿದ್ದರು. ಬಳಿಕ ಜಮೀರ್ ಅಹಮ್ಮದ್ ಅವರ ತಾಯಿ ನೀಡಿದ ದೂರಿನ ಮೇರೆಗೆ ಶಿವಾಜಿನಗರ ಪೊಲೀಸರು ತನಿಖೆಯ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ. ಟ್ರಾವೆಲ್ಸ್ ಬ್ಯುಸಿನೆಸ್‌ನಲ್ಲಿ ಲಾಸ್ ಆಗಿದ್ದಕ್ಕೆ ಈ ಕೃತ್ಯ ಎಸಗಿದ್ದಾರೆ ಎಂದು ತಿಳಿದುಬಂದಿದೆ.

ಕಳ್ಳತನ ಮಾಡಿದ್ದ 1.13 ಕೋಟಿ ಮೌಲ್ಯದ ಚಿನ್ನಾಭರಣಗಳನ್ನ ಅಡವಿಟ್ಟು ಹಣ ಪಡೆದಿದ್ದು, ಆ ಹಣ ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಿ ಲಾಭಕ್ಕೆ ಪ್ಲ್ಯಾನ್ ಮಾಡಿದ್ದರು. ಆದ್ರೆ, ಕಾಲ್ ಮಾಡಿದಾಗ ರಿಸೀವ್ ಮಾಡದಿದ್ದಾಗ ಇಬ್ಬರ ಮೇಲೆ ಅನುಮಾನ ವ್ಯಕ್ತವಾಗಿದ್ದು, ಬಳಿಕ ಪೊಲೀಸರು ವಿಚಾರಣೆ ನಡೆಸಿದಾಗ ಕೃತ್ಯ ಬಯಲಿಗೆ ಬಂದಿದೆ.

ಮನೆಗೆಲಸ ಮಾಡ್ಕೊಂಡು ತಿಂಗಳಿಗೆ 2,500 ರೂ. ಸಂಪಾದಿಸುತ್ತಿದ್ದ ಬಂಗಾಳದ ಮಹಿಳೆ ಈಗ ಬಿಜೆಪಿ ಶಾಸಕಿ



ಕೋಲ್ಕತ್ತಾ: ಮನೆಗೆಲಸ ಮಾಡಿಕೊಂಡು ತಿಂಗಳಿಗೆ 2,500 ರೂ. ಸಂಪಾದನೆ ಮಾಡುತ್ತಿದ್ದ ಮಹಿಳೆಗೆ ಬಂಗಾಳ ಚುನಾವಣೆಯಲ್ಲಿ ಅದೃಷ್ಟ ಖುಲಾಯಿಸಿದೆ. ಬಿಜೆಪಿ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಕಣಕ್ಕಿಳಿದಿದ್ದ ಕಲಿತಾ ಮಾಝಿ ಶಾಸಕಿಯಾಗಿ ಆಯ್ಕೆಯಾಗಿದ್ದಾರೆ.

ಕಲಿತಾ ಮಾಝಿ ಅವರು ಬಿಜೆಪಿ ಅಭ್ಯರ್ಥಿಯಾಗಿ ಪಶ್ಚಿಮ ಬಂಗಾಳದ ಆಸ್ಗ್ರಾಮ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. 12,535 ಮತಗಳ ಅಂತರದಿಂದ ತಮ್ಮ ಪ್ರತಿಸ್ಪರ್ಧಿಯನ್ನು ಸೋಲಿಸಿ ಶಾಸಕಿಯಾಗಿದ್ದಾರೆ.

ಸಾಧಾರಣ ಹಿನ್ನೆಲೆಯಿಂದ ಬಂದ ಮಾಝಿ ಆರ್ಥಿಕ ಸಂಕಷ್ಟದಿಂದಾಗಿ ಬಾಲ್ಯದಲ್ಲೇ ಶಿಕ್ಷಣವನ್ನು ತ್ಯಜಿಸಬೇಕಾಯಿತು. ತನ್ನ ಕುಟುಂಬವನ್ನು ಪೋಷಿಸಲು, ಅವರು ಅನೇಕ ಮನೆಗಳಲ್ಲಿ ಕೆಲಸ ಮಾಡಿದರು. ಅವರ ಪತಿ ಪ್ಲಂಬರ್ ಆಗಿ ಜೀವನ ಸಾಗಿಸುತ್ತಾರೆ. ಇವರಿಗೆ ಒಬ್ಬ ಮಗನಿದ್ದು, 8ನೇ ತರಗತಿ ಓದುತ್ತಿದ್ದಾನೆ.

ಕಳೆದ ಒಂದು ದಶಕದಿಂದ ರಾಜಕೀಯದಲ್ಲಿ ಸಕ್ರಿಯರಾಗಿರುವ ಮಾಝಿ, ಬೂತ್ ಮಟ್ಟದ ಕಾರ್ಯಕರ್ತೆಯಾಗಿ ತಮ್ಮ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದರು. 2021 ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅವರನ್ನು ಕಣಕ್ಕಿಳಿಸಿತ್ತು. ಅಲ್ಲಿ ಅವರು ಸುಮಾರು ಶೇ.41 ರಷ್ಟು ಮತ ಗಳನ್ನು ಪಡೆದರು. ಈ ಹಿಂದೆ 2021 ರ ವಿಧಾನ ಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. ಬಿಜೆಪಿ ನಾಯಕತ್ವವು ಅವರ ಮೇಲೆ ಮತ್ತೆ ನಂಬಿಕೆ ಇರಿಸಿ, 2026 ರಲ್ಲಿ ಎರಡನೇ ಬಾರಿ ಟಿಕೆಟ್ ನೀಡಿತ್ತು. ಕೊನೆಗೂ ಮಹಿಳೆ ಗೆದ್ದು ಬೀಗಿದ್ದಾರೆ.

ಅವರ ವಿರುದ್ಧ ಎರಡು ಕ್ರಿಮಿನಲ್ ಪ್ರಕರಣಗಳಿವೆ ಇವೆ. ಆದರೆ, ಎರಡೂ ಗಂಭೀರ ಸ್ವರೂಪದ್ದಲ್ಲ ಎಂದು ಅವರ ಅಫಿಡವಿಟ್‌ನಲ್ಲಿ ತಿಳಿಸಲಾಗಿದೆ. ಮಾಝಿಯವರ ಒಟ್ಟು ಆಸ್ತಿ 1,61,216 ರೂಪಾಯಿ. ಇದರಲ್ಲಿ ಬ್ಯಾಂಕ್ ಠೇವಣಿ, ಕೈಯಲ್ಲಿ ನಗದು ಮತ್ತು ಎಲ್‌ಐಸಿ ಪಾಲಿಸಿಗಳು ಸೇರಿವೆ ಅವರ ಪತಿ ಜಿಲ್ಲೆಯಲ್ಲಿ 871 ಚದರ ಅಡಿ ವಿಸ್ತೀರ್ಣದ ಸ್ಥಿರ ಆಸ್ತಿಯನ್ನು ಹೊಂದಿದ್ದಾರೆ. ಇದನ್ನು ಅವರ ತಂದೆ ಉಡುಗೊರೆಯಾಗಿ ನೀಡಿದ್ದು, ಇದರ ಮೌಲ್ಯ ಸುಮಾರು 3 ಲಕ್ಷ ರೂ. ಇದೆ ಎಂದು ಅಫಿಡವಿಟ್‌ನಲ್ಲಿ ತಿಳಿಸಲಾಗಿದೆ.

ಜೈಲಿಗೆ ಹೋದ್ರೂ ಚಿಂತೆ ಇಲ್ಲ, ಅಣ್ಣಾವ್ರ ವಿಚಾರದಲ್ಲಿ ರಾಜೀ ಆಗಲ್ಲ?

ನಟ ಚೇತನ್ ವಿರುದ್ಧ ಸಾ.ರಾ ಗೋವಿಂದು ಕಿಡಿ



ಬೆಂಗಳೂರು: 48 ವರ್ಷಗಳ ಕನ್ನಡ ಹೋರಾಟದಲ್ಲಿ ನಾನು ಯಾವತ್ತೂ ರಾಜಿ ಆಗಿಲ್ಲ ಅದಕ್ಕೆ ಶಕ್ತಿ, ಸ್ಫೂರ್ತಿ ಡಾ. ರಾಜ್‌ಕುಮಾರ್ ಎಂದು ಹೇಳುವ ಮೂಲಕ ನಟ ಚೇತನ್ ಅಹಿಂಸಾ ಅವರ ಆರೋಪಕ್ಕೆ ನಿರ್ಮಾಪಕ ಸಾ.ರಾ ಗೋವಿಂದು ತಿರುಗೇಟು ನೀಡಿದರು.

ರಾಜ್‌ಕುಮಾರ್ ಸಮಾಧಿ ವಿಚಾರದಲ್ಲಿ ಸಾರಾ ಗೋವಿಂದು ವಿರುದ್ಧ ನಟ ಚೇತನ್ ದೂರು ನೀಡಿದ್ದ ವಿಚಾರಕ್ಕೆ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು. ಎಲ್ಲಿಂದ ಬಂದಿದೀಯ, ಸಂಸ್ಕೃತಿ ಇಲ್ವಾ ನಿನಗೆ, ಡಾ. ರಾಜ್‌ಕುಮಾರ್ ಅವರ ಬಗ್ಗೆ ನಿನಗೇನು ಗೊತ್ತು. ಗೋಕಾಕ್ ಚಳುವಳಿಯ ಮುಂದಾಳತ್ವ ವಹಿಸಿಕೊಂಡವರ ಬಗ್ಗೆ ಗೊತ್ತಾ ನಿನಗೆ ಪ್ರಶಸ್ತಿಗಳು ಸುಮ್ಮನೆ ಬರುವುದಿಲ್ಲ, ಅದರ ಹಿಂದಿನ ಹೋರಾಟದ ಕಥೆ ನಿನಗೆ ಗೊತ್ತಾ? ಎಂದು ಪ್ರಶ್ನಿಸಿದರು.

ಡಾ. ರಾಜ್‌ಕುಮಾರ್ ಅವರಿಗೆ ಜಾಗ ಇರಲಿಲ್ವಾ ಕುಂಬಳಗೋಡಿನಲ್ಲಿ ಅವರಿಗೆ 15 ಎಕರೆ ಜಾಗವಿತ್ತು. ತಮ್ಮ ಸಹೋದರನ ಕುಟುಂಬದವರು ಮಣ್ಣಾದ ಜಾಗದಲ್ಲೇ ತಾವೂ ಇರಬೇಕೆಂದು ಅವರು ಆಸೆಪಟ್ಟಿದ್ದರು. ಆದರೆ ಅಭಿಮಾನಿಗಳಿಗಾಗಿ ಇಂದು ಇರುವ ಜಾಗದಲ್ಲಿ ಸ್ಮಾರಕ ಮಾಡಲಾಗಿದೆ ಎಂದು ಗೋವಿಂದು ಸ್ಪಷ್ಟನೆ ನೀಡಿದರು.

ನಾದಬ್ರಹ್ಮ ಹಂಸಲೇಖರ ಸಿನಿಮಾ-ಸಾಹಿತ್ಯ ಕುರಿತು ಸಂವಾದ

ಕನ್ನಡ ಚಿತ್ರರಂಗದಲ್ಲಿ ಹಂಸಲೇಖರ ಸಾಹಿತ್ಯ–ಸಂಗೀತ ಅನನ್ಯ

ಆಕಾಶವಾಣಿ ನಿವೃತ್ತ ಅಧಿಕಾರಿ ಎಂ.ಶಿವಕುಮಾರ್ ಅಭಿಮತ



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಹಂಸಲೇಖ ಅವರ ಸಿನಿಮಾ–ಸಾಹಿತ್ಯ ಕುರಿತ ಸಂವಾದ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಮೈಸೂರು, ಮೇ 5(ಪಿಎಂ)– ಕನ್ನಡ ಚಿತ್ರರಂಗದಲ್ಲಿ ಹಂಸಲೇಖ ಅವರ ಸಾಹಿತ್ಯ ಮತ್ತು ಸಂಗೀತ ಅನನ್ಯ. ಅನೇಕ ಹಾಡುಗಳಲ್ಲಿ ನಾಡಿನ ಪ್ರಾಕೃತಿಕ ಸೌಂದರ್ಯ, ಸಾಂಸ್ಕೃತಿಕ ಸೊಬಗನ್ನು ಅತ್ಯಾದ್ಭುತವಾಗಿ ವರ್ಣಿಸಿದ್ದಾರೆ ಎಂದು ಹಾಸನ ಆಕಾಶವಾಣಿಯ ಕಾರ್ಯಕ್ರಮ ಮತ್ತು ಆಡಳಿತ ವಿಭಾಗದ ನಿವೃತ್ತ ಮುಖ್ಯಸ್ಥ ಎಂ.ಶಿವಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಪರಿವರ್ತನ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನದ ಪ್ರಯುಕ್ತ 'ನಾಲ್ವಡಿ ನಾಡಿನಲ್ಲಿ ನಾದಬ್ರಹ್ಮ ಹಂಸಲೇಖ ಅವರ ಸಿನಿಮಾ–ಸಾಹಿತ್ಯ' ಶೀರ್ಷಿಕೆಯಡಿ ಮಂಗಳವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ 'ಹಂಸಲೇಖರ ಸಾಹಿತ್ಯದಲ್ಲಿ ಪ್ರಕೃತಿ–ಪರಿಸರ ಪ್ರೇಮ' ಕುರಿತು ಅವರು ಮಾತನಾಡಿದರು.

ಗಂಗರಾಜು ಆಗಿದ್ದ ಹಂಸಲೇಖರನ್ನು ಅವರ ಸಂಗೀತ ಗುರು ನೀಲಕಂಠಪ್ಪ, ಹಂಸಲೇಖ ಹೆಸರಿನ ಮೂಲಕ ಚಿತ್ರರಂಗಕ್ಕೆ ಪರಿಚಯಿಸಿದರು. ಹಂಸಲೇಖ ತಾವು ಬೆಳೆದು ಬಂದ ಪರಿಸರದ ಪ್ರಭಾವದಿಂದಲೂ ಅನೇಕ ಗೀತೆಗಳನ್ನು ವಿನೂತನವಾಗಿ ರಚನೆ ಮಾಡಿದ್ದಾರೆ. ಬುದ್ಧನ ಶಾಂತಿ, ಪ್ರೀತಿ ನಮ್ಮದಾಗಬೇಕು. ಆಗಲೇ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂಬ ಸಂದೇಶ ಸಾರಿದ್ದಾರೆ ಎಂದರು.

'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಗೀತೆಯಲ್ಲಿ ಸಾಂಸ್ಕೃತಿಕ ಮತ್ತು ಸಾಹಿತ್ಯಕ, ಶಿಲಕಲೆ ಸೇರಿದಂತೆ ನಾಡಿನ ಹಿರಿಮೆಯನ್ನು ಸಮಗ್ರ ಚಿತ್ರಣದಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರ ಸಾಹಿತ್ಯ ಅವಲೋಕಿಸುತ್ತಿದ್ದರೆ ಅದರಲ್ಲಿರುವ ಅನೇಕ ಅರ್ಥಗಳು ತನ್ನಷ್ಟಕ್ಕೆ ತಾನೇ ತೆರೆದುಕೊಳ್ಳಲಿವೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ ಮಾತನಾಡಿ, ವಿಮರ್ಶಕರು, ವಿಭಾಗಿಸುವವರ ಎಲ್ಲಾ ಲೆಕ್ಕಾಚಾರ ಮೀರಿ ಹಂಸಲೇಖ ತಮ್ಮ ಸಾಹಿತ್ಯ ಸಂಗೀತದ ಮೂಲಕ ಜನಮನದಲ್ಲಿ ನೆಲೆನಿಂತಿದ್ದಾರೆ. ಒಬ್ಬ ಕಲಾವಿದ, ಸಂಗೀತಗಾರ, ಉದ್ಯಮಿ, ಶಿಕ್ಷಕ ಯಾರೇ ಆಗಲಿ ತನ್ನ ಕಾಲಕ್ಕೆ ಸ್ಪಂದಿಸಿದರೆ ದೊಡ್ಡವನಾಗಲು ಸಾಧ್ಯ. ಆ ರೀತಿಯಲ್ಲಿ ಹಂಸಲೇಖ ಸಮಾಜಕ್ಕೆ ಸ್ಪಂದಿಸುತ್ತಾ ಬಂದಿದ್ದಾರೆ ಎಂದು ಹೇಳಿದರು.

ಗಾಯಕ ಆರ್.ರವಿ ಕುಮಾರನಪುರ ಮಾತನಾಡಿ, ಕವಿಗಳಿಗೆ ಸಮಾಜಮುಖಿ ಚಿಂತನೆ ಇರಬೇಕು. ರೈತ–ಕಾರ್ಮಿಕ ಪರವಾದ ನಿಲುವು ಅವರ ಸಾಹಿತ್ಯದಲ್ಲಿ ಮೂಡಿಬರಬೇಕು. ಆದರೆ ಇಂದಿನ ಬಹುತೇಕ ಸಾಹಿತ್ಯ ದೇಶ ಕಟ್ಟುವ ಬದಲು ಒಡೆಯುವಂತೆ ರಚನೆಯಾಗುತ್ತಿವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಿಡಿದ ಪೆನ್ನು ರಾಷ್ಟ್ರ ನಿರ್ಮಾಣಕ್ಕೆ ಸಹಕಾರಿಯಾಯಿತು. ಸಂವಿಧಾನದ ಆತ್ಮವಾದ ಪೀಠಿಕೆಯನ್ನು ಪದ್ಯವಾಗಿಸಿದ ಕೀರ್ತಿ ಹಂಸಲೇಖ ಅವರಿಗೆ ಸಲ್ಲುತ್ತದೆ. ಸಮಾಜಪರ ನಿಲುವು, ವೈಚಾರಿಕ ಚಿಂತನೆಯನ್ನು ಹಂಸಲೇಖರ ಸಾಹಿತ್ಯದಲ್ಲಿ ಕಾಣಬಹುದು. ಅವರು ನಮ್ಮ ನಾಡಿನ ಹೆಮ್ಮೆ ಎಂದರು.

'ಸಾಮಾಜಿಕ ಬದಕಿನಲ್ಲಿ ಹಂಸಲೇಖರ ಸಾಹಿತ್ಯ' ಕುರಿತು ಲೇಖಕ–ನಿರ್ದೇಶಕ ಡಾ. ಕೃಷ್ಣಮೂರ್ತಿ ಚಮರಂ, 'ಹಂಸಲೇಖ ಸಾಹಿತ್ಯದಲ್ಲಿ ದೇಸಿಯತೆ' ಕುರಿತು ಸಾಹಿತಿ ಪ್ರಾಶರಾಜ್ ಮೇಹು, 'ಹಂಸಲೇಖರ ಸಂಗೀತ ಮತ್ತು ಒಡನಾಟ' ಕುರಿತು ಸಂಗೀತ ನಿರ್ದೇಶಕ ಆರ್.ಮಹೇಂದರ್ ಹಾಗೂ 'ಹಂಸಲೇಖರು ಬೆಳೆದುಬಂದ ಹಾದಿ' ಕುರಿತು ಗಾಯಕ ಗಾನಾಸುಮಾ ಪಟ್ಟಸೋಮನಹಳ್ಳಿ ವಿಚಾರ ಮಂಡಿಸಿದರು. ಇದಕ್ಕೂ ಮುನ್ನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಫೋಟೋಗೆ ಪುಷ್ಪ ನಮನ ಸಲ್ಲಿಸಲಾಯಿತು. ಮುಖಂಡ ಅಹಿಂದ ಜವರಪ್ಪ ಲೇಖಕ ರಾಘವೇಂದ್ರ ಅಪುರಾ ಮತ್ತಿತರರು ಹಾಜರಿದ್ದರು.

ಹೊರ್ಮುಜ್‌ನಲ್ಲಿ ಅಮೆರಿಕದ ಪ್ರಾಜೆಕ್ಟ್ ಫ್ರೀಡಂ

ಇರಾನ್‌ನ 6 ಹಡಗು, ಡ್ರೋನ್ ಧ್ವಂಸ

ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ನಡುವೆ ಮತ್ತೆ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಹೊರ್ಮುಜ್ ಜಲಸಂಧಿ ಬಳಿ ಇರಾನ್‌ನ 6 ಚಿಕ್ಕ ಹಡಗುಗಳನ್ನು ನಾಶ ಮಾಡಿರುವುದಾಗಿ ಅಮೆರಿಕ ಮಿಲಿಟರಿ ಹೇಳಿದೆ. ಅಲ್ಲದೇ, ಇರಾನ್‌ನ ಕ್ರೂಸ್ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ತಿಳಿಸಿದೆ.

ಫೆಬ್ರವರಿ 28 ರಂದು ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ಆರಂಭಿಸಿದ ನಂತರ ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ. ಜಾಗತಿಕ ತೈಲ ಮತ್ತು ಸರಕು ಸಾಗಣೆಯ ನಿರ್ಣಾಯಕ ಜಲಮಾರ್ಗದ ನಿಯಂತ್ರಣವನ್ನು ಇರಾನ್‌ನಿಂದ ವಶಪಡಿಸಿಕೊಳ್ಳಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಪ್ರಾಜೆಕ್ಟ್ ಫ್ರೀಡಂ ಎಂಬ ಕಾರ್ಯಾಚರಣೆ ಆರಂಭಿಸಿದ್ದಾರೆ.

ಸೋಮವಾರ ಯುಎಇ ಮೇಲೆ ಡ್ರೋನ್ ಮತ್ತು ಕ್ಷಿಪಣಿ ದಾಳಿ ಸೇರಿದಂತೆ ಈ ಪ್ರದೇಶದಲ್ಲಿ ಇರಾನ್ ದಾಳಿ ಮುಂದುವರಿಸಿದೆ. ಹೀಗಾಗಿ, ಎರಡೂ ಕಡೆಯಿಂದ ದಾಳಿ ನಡೆಯುತ್ತಿದ್ದು, ಏಪ್ರಿಲ್ 8ರಂದು ಆರಂಭವಾದ ಕದನ ವಿರಾಮ ಜಾರಿಯಲ್ಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಅಮೆರಿಕದ ಸೆಂಟ್ರಲ್ ಕಮಾಂಡ್ ಮುಖ್ಯಸ್ಥ ಅಡ್ಮಿರಲ್ ಬ್ರಾಡ್ ಕೂಪರ್ ನಿರಾಕರಿಸಿದ್ದಾರೆ.

ಆದರೆ, ಟ್ರಂಪ್ ಅವರ ಕಾರ್ಯಾಚರಣೆಯಲ್ಲಿ ಮಧ್ಯಪ್ರವೇಶಿಸಲು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ನಡೆಸುತ್ತಿರುವ ಪ್ರಯತ್ನಗಳನ್ನು ಕೂಪರ್ ಒಪ್ಪಿಕೊಂಡಿದ್ದಾರೆ.

ನಮ್ಮ ರಕ್ಷಣೆಯಲ್ಲಿರುವ ಹಡಗುಗಳ ಮೇಲೆ ಐಆರ್‌ಜಿಸಿಯು ಬಹು ಕ್ರೂಸ್ ಕ್ಷಿಪಣಿ, ಡ್ರೋನ್ ಮತ್ತು ಸಣ್ಣ ದೋಣಿಗಳ ಮೂಲಕ ದಾಳಿ ನಡೆಸಿದೆ. ರಕ್ಷಣಾತ್ಮಕ ಯುದ್ಧಸಾಮಗ್ರಿಗಳ ಮೂಲಕ ನಾವು ಆ ಪ್ರತಿಯೊಂದು ಬೆದರಿಕೆಗಳನ್ನು ಎದುರಿಸಿದ್ದೇವೆ ಎಂದು ಅವರು ಹೇಳಿದ್ದಾರೆ.

ಪ್ರಾಜೆಕ್ಟ್ ಫ್ರೀಡಂ ಕಾರ್ಯಾಚರಣೆ ಆರಂಭವಾಗುತ್ತಿದ್ದಂತೆ, ಇರಾನ್ ಪಡೆಗಳು ಅಮೆರಿಕದ ಮಿಲಿಟರಿ ಸ್ವತ್ತುಗಳಿಂದ ದೂರವಿರಲು ಬಲವಾದ ಸಲಹೆ ನೀಡಿದ್ದೇನೆ ಎಂದಿರುವ ಕೂಪರ್, ನಮ್ಮ ಕಾರ್ಯಾಚರಣೆಯಲ್ಲಿ 15,000 ಸೈನಿಕರು, ನೌಕಾಪಡೆಯ ವಿಧ್ವಂಸಕ ಹಡಗುಗಳು, 100ಕ್ಕೂ ಹೆಚ್ಚು ಭೂ ಮತ್ತು ಸಮುದ್ರದ ಮೂಲಕ ದಾಳಿ ನಡೆಸುವ ಯುದ್ಧೋಪಕರಣಗಳಿವೆ ಎಂದಿದ್ದಾರೆ.

ಕಾರ್ಯಾಚರಣೆಯಲ್ಲಿ ತೊಡಗಿರುವ ಅಮೆರಿಕದ ಕಮಾಂಡರ್‌ಗಳು ತಮ್ಮ ಮಿಲಿಟರಿ ಸೌಲಭ್ಯಗಳ ರಕ್ಷಣೆ ಮತ್ತು ವಾಣಿಜ್ಯ ಹಡಗುಗಳ ಸಾಗಣೆಯನ್ನು ರಕ್ಷಿಸಲು ಅಗತ್ಯವಿರುವ ಎಲ್ಲ ಅಧಿಕಾರಿಗಳನ್ನು ಹೊಂದಿದ್ದಾರೆ ಎಂದು ಅವರು ಹೇಳಿದ್ದಾರೆ. ಆದರೆ, ಕಳೆದ ಕೆಲವು ಗಂಟೆಗಳಲ್ಲಿ ಯಾವುದೇ ವಾಣಿಜ್ಯ ಹಡಗುಗಳು ಜಲಸಂಧಿಯನ್ನು ದಾಟಿಲ್ಲ. ಅಮೆರಿಕದ ಕಾರ್ಯಾಚರಣೆಯ ಕುರಿತಾದ ಹೇಳಿಕೆಗಳು ಸುಳ್ಳು ಎಂದು ಇರಾನ್ ತಿಳಿಸಿದೆ. ಅಮೆರಿಕ, ಇರಾನ್ ಹಡಗುಗಳನ್ನು ನಾಶ ಮಾಡಿದೆ ಎಂಬ ವರದಿಗಳನ್ನು ಇರಾನ್ ಮಾಧ್ಯಮಗಳು ಸಹ ನಿರಾಕರಿಸಿವೆ.



MUDA APPROVED
SITE FOR SALE
Srinidhi Enclave Layout
30'x50' - E/F
15'x40 - S/E Corner
Opp. Shahi Garments, Excel Soft School, New Hyundai Car Showroom, 'D' Mart backside, Belawadi, Mysore.
Mob: 99865-01159, 96865-73798

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್
ಗಾಯತ್ರಿ ಪುರಂ
8 ಗಂಟೆ
ಸಂಪರ್ಕಿಸಿ
9741552969
8494934335

REQUIRED
SITE ENGINEER
BE / Diploma Civil to work at project site in Mysuru.
Send CV to
svcnmysuru@gmail.com
Contact:
9342223651, 8317368093

IN THE COURT OF THE II ADDL. DISTRICT AND SESSIONS JUDGE AT MYSURU

P & Sc. No. 18/2026

Petitioner: Nagarathna, W/o Ananthakumar, Aged about 48 years, R/at Nanjapura Village, Kasaba Hobli, Dharmapura Post, Hunsur Taluk, Mysuru District-571189.

V/S

Respondent: Nil

PUBLIC NOTICE

The Petitioner has filed the above petition under section 276 of Indian Succession Act sought for Probate certificate in respect of the schedule property.

It is hereby notified to the general public that if any person/persons has got any objections or interested in connection to the same, such person/persons may appear before the court in person or through an Advocate on 15-06-2026 at 11 a.m. and may object, failing which the Court will proceed to grant Probate Certificate the Petition with respect to the schedule property.

SCHEDULE

Vacant site property bearing Site No.153, measuring to an extent of East to West 12 mts. North to South 18 mts. situated at Kempachaluvajamanni Badavane, Nazarbad Mohalla, Mysuru City, bounded on: East by : Site No. 152 ; West by : Site No. 154 ; North by: Site No. 150 ; South by: Road.

By order of the Court
Sd/- Chief Administrative Officer,
Hon'ble II Addl. District and Sessions Judge Mysuru
Sd/- Lokesh, Advocate
#2377, 1st Floor, Sri Lakshmidevi Medical Building, K.G. Koppal, Mysuru-570 014

ಹಸಿರು ನಮ್ಮ ಉಸಿರು



REQUIREMENTS FOR ADVOCATES

ELIGIBILITY CRITERIA

- Bachelor's degree in Law (LLB)
- Minimum 2 years of experience in property Law and Litigation
- Excellent communication, drafting and negotiation skills
- Ability to work independently and as part of a team

CONTACT NO.
7624958145 / 9535560606

REPCO BANK
(ಭಾರತ ಸರ್ಕಾರದ ಉದ್ಯಮ)
1022, 1ನೇ ಮಹಡಿ, ಜೆ & ಹೆಚ್ ಬ್ಲಾಕ್, ಪಂಚಮಂತ್ರ ರಸ್ತೆ, ಕುವೆಂಪುನಗರ, ಮೈಸೂರು–570023

ವಿಶೇಷ ಠೇವಣಿ ಮೇಲೆ ಆಕರ್ಷಕ ಬಡ್ಡಿದರ
1 ವರ್ಷ – 2 ವರ್ಷಗಳ ಅವಧಿಗೆ

8.00%* p.a (ಹಿರಿಯ ನಾಗರೀಕರಿಗೆ) | **7.50%* p.a** (ಸಾಮಾನ್ಯರಿಗೆ)

ಎ ಖಾತೆಗಳ ಮೇಲೆ ರೂ.5.00 ಕೋಟಿ ಗಳವರೆಗೆ ಮತ್ತು ಬಿ ಖಾತೆಗಳ ಮೇಲೆ ರೂ.50.00 ಲಕ್ಷದವರೆಗೆ ಸ್ಥಿರಾಸ್ತಿಗಳ ಮೇಲೆ ಆಕರ್ಷಕ ಬಡ್ಡಿದರದಲ್ಲಿ ಸಾಲ ದೊರೆಯುತ್ತದೆ.

ಚಿನ್ನಾಭರಣಗಳ ಮೇಲೆ ಸಾಲ ಪ್ರತಿಗ್ರಾಂಗೆ ರೂ.10,000/– ಮಾಸಿಕ 94 ಪೈಸೆ ಬಡ್ಡಿ ದರದಲ್ಲಿ ಸಾಲ ದೊರೆಯುತ್ತದೆ.

*ಷರತ್ತುಗಳು ಅನ್ವಯಿಸುತ್ತದೆ. ಸದಸ್ಯ ಗ್ರಾಹಕರಿಗೆ ಮಾತ್ರ

PH : 0821 - 2562211 | Mob : 9449856210



ಮೈಸೂರು ಮಿತ್ರ 47
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

COMMERCIAL PROPERTIES FOR SALE IN PRIME LOCATION

1) 43X100 East Facing
Pampapathi Road, Kuvempunagar 2nd stage, Mysore

2) Ramakrishna Nagar, 'H' Block, East Facing 40X60

3) Dattagalli 44X42 East Facing

Call-9008111454

Mysore Diocesan Educational Society (R)
ST. PHILOMENA'S COLLEGE
(Autonomous) Estd.:1946
Accredited by NAAC and Approved by AICTE, New Delhi
Mysore-Bangalore Highway, Bannimantap, Mysore-570 015

FACULTY REQUIRED

We are inviting applications from well-qualified and experienced teaching faculty for the following Departments

UNDERGRADUATE & POSTGRADUATE

- English
- Hindi
- Psychology
- Criminology & Forensic Science
- BBA
- BCA
- Political Science
- Zoology
- Botany
- Mathematics
- Environmental Science
- MBA
- MCA

BE A PART OF OUR MISSION: Empowering minds. Building character. Serving society.

JOIN A LEGACY OF EXCELLENCE SINCE 1946

APPLY TO:
The Rector / Manager
P.O. Box No. 30, St. Philomena's College, Bannimantap, Mysore - 570015
Email: stphilos1946@gmail.com

WANTED DRIVERS
For a reputed CBSE School
- ★ Experience in School Bus Driving required
- ★ Valid Driving License (DL) mandatory
- ★ Good salary offered

Contact: 9900038353

ಡ್ರೈವರ್‌ಗಳು ಬೇಕಾಗಿದ್ದಾರೆ
ಪ್ರತಿಷ್ಠಿತ CBSE ಶಾಲೆಗೆ
- ★ ಶಾಲಾ ಬಸ್ ಚಾಲನೆಯ ಅನುಭವ ಹೊಂದಿರುವುದು ಅಗತ್ಯ
- ★ ಮಾನ್ಯ ಚಾಲನಾ ಪರವಾನಗಿ (DL) ಕಡ್ಡಾಯ
- ★ ಉತ್ತಮ ವೇತನ ನೀಡಲಾಗುತ್ತದೆ

ಸಂಪರ್ಕಿಸಿ: 9900038353

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೆ: ಶೆಲೆ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಲಿ., ನ ಅಧ್ಯಕ್ಷರಾದ ಶ್ರೀ ಎಂ. ಪುಟ್ಟಣ್ಣ ಮತ್ತು ಕಾರ್ಯದರ್ಶಿ ಶ್ರೀಮತಿ ಸವಿತ ಜಿ.ಕೆ ಇವರು ಮೈಸೂರು ವಾಣಿಜ್ಯ ನ್ಯಾಯಾಲಯದಲ್ಲಿ COM.O.S. No. 85/2026 ರಂತೆ ಹೆಚ್.ಎಸ್. ಹಿಮಪಾಲ್ ಬಿನ್ ಹೆಚ್.ವಿ. ಶಿವರಾಮೇಗೌಡ, ಶ್ರೀಮತಿ ಜ್ಯೋತಿಮುನಿಯಮ್ಮ ಕೋಂ. ಬಿಎಂಕೆ ಗೌಡ, ಶ್ರೀ ಬಿ.ಟಿ. ಲಕ್ಷ್ಮೀಶ ಬಿನ್ ಲೇಟ್ ತಿಮ್ಮೇಗೌಡ, ಶ್ರೀ ಬಿ.ಎಲ್. ಚೇತನ್ ಬಿನ್ ಬಿ.ಟಿ. ಲಕ್ಷ್ಮೀಶ ಮತ್ತು ಮೆ: ಇಲಾ ವೆಂಚರ್ಸ್‌ನ ಪಾಲುದಾರಿಕೆ ಸಂಸ್ಥೆಯ ಪಾಲುದಾರರ ಮೇಲೆ ದಾವಾ ಹೂಡಿದ್ದು, ದಾವಾದಲ್ಲಿ ನಮ್ಮ ಕಕ್ಷಿದಾರರಿಗೆ ನೋಂದಣಿ ಮಾಡಿಕೊಡಬೇಕಾಗಿರುವ ಅಭಿವೃದ್ಧಿಪಡಿಸಿದ 68,000 ಚದರಡಿಗಳ ನಿವೇಶನಗಳನ್ನು ಬರೆದು ಕೊಡುವಂತೆ ಕೇಳಿದ್ದು ಮತ್ತು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಯಡಹಳ್ಳಿ ಗ್ರಾಮದ ಸರ್ವೆ ನಂ. 46/1, 46/3, 46/4 ಮತ್ತು 46/5 ರಲ್ಲಿ ಒಟ್ಟು ವಿಸ್ತೀರ್ಣ 3.00 ಎಕರೆ ಜಮೀನಿನಲ್ಲಿ ನಿರ್ಮಿಸಿರುವ 17 ಮೂಲೆ ನಿವೇಶನಗಳ ಪೈಕಿ ಅರ್ಧದಷ್ಟು ನಿವೇಶನಗಳನ್ನು ನೋಂದಣಿ ಮಾಡಿಕೊಡುವಂತೆ ಕೇಳಿರುವುದು ಸರಿಯಷ್ಟೆ.

ಮಾನ್ಯ ನ್ಯಾಯಾಲಯವು ನಮ್ಮ ಕಕ್ಷಿದಾರರು ಸಲ್ಲಿಸಿರುವ ತಡೆಯಾಜ್ಞೆ ಅರ್ಜಿಯನ್ನು ಪರಿಶೀಲಿಸಿ ನಮ್ಮ ಕಕ್ಷಿದಾರರ ಮೇಲೆ ಮೇಲ್ಕಂಡ ಬಡಾವಣೆಯಲ್ಲಿ ಅಭಿವೃದ್ಧಿದಾರರು ನಿರ್ಮಿಸಿರುವ 68000 ಚದರಡಿಗಳ ನಿವೇಶಗಳು ಮತ್ತು ಮೂಲೆ ನಿವೇಶನಗಳನ್ನು ದಾವಾ ಮುಗಿಯುವವರೆಗೂ ಮಾರಾಟಮಾಡಬಾರದೆಂದು ತಡೆಯಾಜ್ಞೆ ನೀಡಿದ್ದು ಅದರ ಪ್ರತಿಯನ್ನು ನಮ್ಮ ಕಕ್ಷಿದಾರರು ಅಂಚೆ ಮೂಲಕ ನಿಮಗೆ ಕಳುಹಿಸಿರುತ್ತಾರೆ.

ಹೀಗಿದ್ದರೂ ಸಹ ನೀವುಗಳು ನಮ್ಮ ಕಕ್ಷಿದಾರರುಗಳಿಗೆ ಮೋಸಮಾಡುವ ಉದ್ದೇಶದಿಂದ ಬೇರೆಯವರಿಗೆ ನಮ್ಮ ಕಕ್ಷಿದಾರರ ಜೊತೆಯಲ್ಲಿ ಮಾಡಿಕೊಂಡಿರುವ ಮೆಮೊರಡಂ ಆಫ್ ಅಸೋಸಿಯೇಷನ್ ತಿಳಿಸದೆ ಮರೆಮಾಚಿ ಮಾರಾಟ ಮಾಡುವ ಹುನ್ನಾರದಲ್ಲಿರುವುದು ತಿಳಿದು ಬಂದಿರುತ್ತದೆ.

ಆದುದರಿಂದ ನಮ್ಮ ಕಕ್ಷಿದಾರರು ನಿಮಗೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಯಡಹಳ್ಳಿ ಗ್ರಾಮದ ಸರ್ವೆ ನಂ. 46/1, 46/3, 46/4 ಮತ್ತು 46/5 ರಲ್ಲಿ ಒಟ್ಟು ವಿಸ್ತೀರ್ಣ 3.00 ಎಕರೆ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ 68000 ಚದರಡಿಗಳ ನಿವೇಶನ ಮತ್ತು 17 ಮೂಲೆ ನಿವೇಶನಗಳನ್ನು ಮಾರಾಟಮಾಡಬಾರದೆಂದು ತಿಳಿಯಪಡಿಸುತ್ತೇವೆ. ಹೀಗಿದ್ದರೂ ಸಾರ್ವಜನಿಕರು ಮೇಲೆ ತಿಳಿಸಿರುವ ಭೂಮಾಲೀಕರು ಮತ್ತು ಮೆ:ಇಲಾ ವೆಂಚರ್ಸ್ ಪಾಲುದಾರರೊಡನೆ ವ್ಯವಹರಿಸಿದಲ್ಲಿ ಅದು ಊರ್ಜಿತವಾಗುವುದಿಲ್ಲವೆಂದು ತಿಳಿಯಪಡಿಸುತ್ತೇವೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಕಾಣಿಸಿರುವ ವಿಳಾಸದಲ್ಲಿ ಖುದ್ದಾಗಿ ಅಥವಾ ದೂರವಾಣಿ ಮೂಲಕ ಹೆಚ್ಚಿನ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ. ಸಂಪರ್ಕಿಸಬೇಕಾದ ವಕೀಲರ ಮೊಬೈಲ್ ನಂಬರು 9448773611/ 9632538866.

ಸಹಿ/– ಶ್ರೀ ಪಿ.ಕೆ. ಪೊನ್ನಯ್ಯ, ವಕೀಲರು
ನಂ. 1662/1ಎ, 1ನೇ ಮಹಡಿ, ರಾಘಾಮಾಧವಕನೆಕ್ಟ್, ನಾರಾಯಣಶಾಸ್ತ್ರಿ ರಸ್ತೆ, ವಾತ್ಸಲ್ಯ ನರ್ಸಿಂಗ್ ಹೋಂ ಪಕ್ಕ (ಹಳೇ ಸೀತಾರಂಗ ಆಸ್ಪತ್ರೆ), ಮೈಸೂರು–570 004.
Date: 5-5-2026

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234548, E-mail: purchamul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ವಿವಿಧ ಸರಕು/ಸೇವೆಗಳನ್ನು ಖರೀದಿಸುವ/ಪಡೆಯುವ ಸಂಬಂಧ ನಿಗದಿ ಪಡಿಸಲಾದ ಷರತ್ತುಗಳನ್ನೊಳಗೊಂಡ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖೇನ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರಸಂ	ಸರಕು/ಸೇವೆಗಳ ವಿವರ	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
01	Supply of Non Lit Sign Boards, Glow Sign Boards, LED Boards, HD Vinyl Print, Sun Boards, Flex Banners and A Sign Boards on Biennial Rate Contract basis for Local Market within Chamarajanagar District.	KMF/2026-27/IND2201	ದಿನಾಂಕ: 06.05.2026 ರಿಂದ 16.05.2026 ರವರೆಗೆ
02	Supply of Glow Sign Boards, HD Vinyl Print, Sun Boards, and A Sign Boards on Biennial Rate Contract basis for Outside Market Tamilnadu.	KMF/2026-27/IND2202	
03	Providing Wall/Shop/Vehicle Painting service to CHAMUL on Biennial Rate Contract basis.	KMF/2026-27/SE5119	
04	Supply and Installation of Network Accessories that are required for Stabilizing the LAN connection and New Data & Intercom Points at Main Dairy CHAMUL.	KMF/2026-27/IND2203	
05	Biennial Maintenance Contract (BAMC) for CC Cameras, NVR, ETBS, POE, Intercom System and Technical support for Server, Firewall and Networking.	KMF/2026-27/SE5062	
06	Biennial Maintenance Contract (BAMC) for Indent Application Service and Oracle Based Software & Indent Section Activities.	KMF/2026-27/SE5221	

ಹೆಚ್ಚಿನ ಮಾಹಿತಿಗಾಗಿ ಕ್ರಸಂ.01 ರಿಂದ ಕ್ರಸಂ.02 ರವರೆಗೆ ವ್ಯವಸ್ಥಾಪಕರು (ಖರೀದಿ–ಮೊ.ಸಂ:8867915047) ರವರನ್ನು, ಕ್ರಸಂ.03 ಕ್ಕೆ ವ್ಯವಸ್ಥಾಪಕರು (ಡೇಟ–ಮೊ.ಸಂ:9606093323) / ವ್ಯವಸ್ಥಾಪಕರು (ಮಾರುಕಟ್ಟೆ–ಮೊ.ಸಂ:9606700123)ರವರನ್ನು ಮತ್ತು ಕ್ರಸಂ.04 ರಿಂದ ಕ್ರಸಂ.06 ರವರೆಗೆ ಸಹಾಯಕ ವ್ಯವಸ್ಥಾಪಕರು (ಎಂ.ಐ.ಎಸ್–ಮೊ.ಸಂ:6366824217) ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.
ಟೆಂಡರ್ ಪ್ರಕಟಣೆ ಸಂಖ್ಯೆ: ಮೈಸಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–2/103/2026–27 ದಿನಾಂಕ:05–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ

ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ, ಪಾಲಿಕೆ ಅನುದಾನ ಹಾಗೂ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

				ಸಂಜೆ 4.30 ಗಂಟೆ ನಂತರ	ಬೆಳಿಗ್ಗೆ 11.30 ಗಂಟೆ	ಸಂಜೆ 4.00 ಗಂಟೆ	ಬೆಳಿಗ್ಗೆ 11.30 ಗಂಟೆ ನಂತರ
ಕ್ರ. ಸಂ	ವಿವರ	ಸೇವಾ ಟೆಂಡರ್/ ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಕೆ.ಪಿ.ಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್‌ನ ಪೂರ್ವಭಾವಿ ಸಭೆಯ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ
1	Kw-1,Kw-2 & Kw-3	14	318.07	07–05–2026	–	26–05–2026	29–5–2026
2	Kc-5	1	8.10	07–05–2026	–	26–05–2026	29–5–2026
3	Kw-4	2	680.00	06–05–2026	25–05–2026	06–06–2026	08–06–2026

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು